ಸೋಮವಾರ, ಅಕ್ಟೋಬರ್ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 292 | ಪುಟ 14

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಸೂತ್ರಗಳನ್ನು ನೆನಪಿಡಲು ವಿದ್ಯಾರ್ಥಿಗಳು ಏನು ಮಾಡಬೇಕು?

ಸಂಖ್ಯೆ-ಸುದ್ದಿ
ಕುಗ್ಗಿದ ಕೃಷಿ ಭೂಮಿ ಹೆಚ್ಚಿದ ಆದಾಯ, ವೆಚ್ಚ

ಸನ್ಯಾಸತ್ವ ಸ್ವೀಕರಿಸಿಲ್ಲ, ಹೋರಾಡ್ತೀವಿ: ಎಚ್‌ಡಿಕೆ 7

ಉಗ್ರರ ದಾಳಿ: ವೈದ್ಯ, ಆರು ಕಾರ್ಮಿಕರ ಸಾವು 11

ಬಿಜೆಪಿ ಮೊದಲ ಪಟ್ಟಿ ಬಿಡುಗಡೆ 11

ಜಮೀನು ಜಲಾವೃತ: ಆತಂಕದಲ್ಲಿ ರೈತರು 5

ಗೆಜೆಟೆಡ್ ಪ್ರೊಬೇಷನರಿ ಪೂರ್ವಭಾವಿ ಪರೀಕ್ಷೆ: ನಷ್ಟಕ್ಕೆ ಕಾರಣರಾದವರ ಮೇಲೆ ಇನ್ನೂ ಕ್ರಮ ಇಲ್ಲ

ರದ್ದಾದ ಪರೀಕ್ಷೆ ವೆಚ್ಚ ₹13.40 ಕೋಟಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೆಎಎಸ್ 40 ಹುದ್ದೆಗಳೂ ಸೇರಿ ಗೆಜೆಟೆಡ್ ಪ್ರೊಬೇಷನರಿಯ ಒಟ್ಟು 384 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಆ.27ರಂದು ನಡೆಸಿದ್ದ ಪೂರ್ವಭಾವಿ ಪರೀಕ್ಷೆಗೆ ₹13.40 ಕೋಟಿ ವೆಚ್ಚವಾಗಿದೆ.

ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆ- ಉತ್ತರಗಳಲ್ಲಿ ತಪ್ಪುಗಳು ಕಾಣಿಸಿಕೊಂಡ ಕಾರಣಕ್ಕೆ ಈ ಪರೀಕ್ಷೆಯನ್ನು ರದ್ದು ಪಡಿಸಿರುವ ಕೆಪಿಎಸ್‌ಸಿ, ಡಿ. 29ರಂದು ಮರುಪರೀಕ್ಷೆ ನಡೆಸಲಿದೆ. ಭಾಷಾಂತರದಲ್ಲಿ ಲೋಪ ಉಂಟಾಗಲು ಕಾರಣರಾಗಿ ಭಾರಿ ಮೊತ್ತ ನಷ್ಟವಾಗಲು ಕಾರಣರಾದ ಅಧಿಕಾರಿ, ನೌಕರರ ಮೇಲೆ ಕೆಪಿಎಸ್‌ಸಿಯಾಗಲಿ ರಾಜ್ಯ ಸರ್ಕಾರವಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ.

ಪರೀಕ್ಷೆ ನಡೆಸಲು ತಗುಲಿದ ವೆಚ್ಚದ ವಿವರವಾದ ಮಾಹಿತಿಯನ್ನು ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ಅವರು ಆಯೋಗದ ಸಭೆಯಲ್ಲಿ ಮಂಡಿಸಿದ್ದಾರೆ. ಅವರು ನೀಡಿರುವ ಮಾಹಿತಿ ಪ್ರಕಾರ ಪೂರ್ವಭಾವಿ ಪರೀಕ್ಷೆಯ ಗೌಪ್ಯ ಕಾರ್ಯಗಳಿಗೆ ಮಾತ್ರ ₹5.35 ಕೋಟಿ ವೆಚ್ಚವಾಗಿದೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ವಿಷಯ ತಜ್ಞರು, ಪ್ರಶ್ನೆಪತ್ರಿಕೆಯನ್ನು ಭಾಷಾಂತರಿಸಿದ ಭಾಷಾಂತರಕಾರರು ಹಾಗೂ ಪ್ರಶ್ನೆಪತ್ರಿಕೆಗಳು, ನಾಮಿನಲ್ ರೋಲ್‌ಗಳು ಮತ್ತು ಒಎಂಆರ್ ಶೀಟು ಸರಬರಾಜು ಮಾಡಿದ ಮುದ್ರಕರಿಗೆ ಪಾವತಿಸಿದ ಒಟ್ಟು ಮೊತ್ತವಿದು.

7ನೇ ಪುಟ ನೋಡಿ

‘ಮರುಪರೀಕ್ಷೆಗೆ ಬೇಕು ₹15 ಕೋಟಿ’

ಕೆಪಿಎಸ್‌ಸಿಗೆ 2024–25ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ವಿವಿಧ ಉಪ ಲೆಕ್ಕ ಶೀರ್ಷಿಕೆಯಡಿ ಒಟ್ಟು ₹35.87 ಕೋಟಿ ಅನುದಾನ ಹಂಚಿಕೆ ಮಾಡಿದೆ. ಅದರಲ್ಲಿ ಈವರೆಗೆ ₹27.54 ಕೋಟಿ ಬಿಡುಗಡೆ ಮಾಡಿದೆ. ಈವರೆಗೆ ಆಯೋಗ ₹18.48 ಕೋಟಿ ವೆಚ್ಚ ಮಾಡಿದೆ. ಆಯೋಗದ ಬಳಿ ಈಗ ₹9.06 ಕೋಟಿ ಅನುದಾನ ಲಭ್ಯವಿದೆ. ಗೆಜೆಟೆಡ್ ಪ್ರೊಬೇಷನರಿ ಪೂರ್ವಭಾವಿ ಪರೀಕ್ಷೆ ನಡೆಸಲು ₹4 ಕೋಟಿಯಿಂದ ₹5 ಕೋಟಿಯಷ್ಟು ವೆಚ್ಚವಾಗಲಿದೆ ಎಂದು ಪರೀಕ್ಷೆಗೂ ಮೊದಲು ಅಂದಾಜು ಮಾಡಲಾಗಿತ್ತು. ಆದರೆ, ಅದರ ಮೂರು ಪಟ್ಟು ವೆಚ್ಚವಾಗಿದೆ. ಮರು ಪರೀಕ್ಷೆ ನಡೆಸಲು ಅಂದಾಜು ₹15 ಕೋಟಿ ವೆಚ್ಚ ಆಗಬಹುದೆಂದು ಅಂದಾಜಿಸಲಾಗಿದೆ ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

ಆಯೋಗದ ನಿಯೋಗವು ಸೆ. 30ರಂದು ಮುಖ್ಯಮಂತ್ರಿ ಜೊತೆ ಚರ್ಚೆ ನಡೆಸಿದೆ. ಈ ವೇಳೆ, ಮರುಪರೀಕ್ಷೆ ನಡೆಸಲು ಅವಶ್ಯವಿರುವ ಆರ್ಥಿಕ ಅನುಮೋದನೆಯನ್ನು ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಅಲ್ಲದೆ, ಕನ್ನಡ ಅಭ್ಯರ್ಥಿಗಳಿಗೆ ಅನ್ಯಾಯ ಆಗದಂತೆ ಮರುಪರೀಕ್ಷೆ ನಡೆಸಲು ಆಯೋಗದ ಹಂತದಲ್ಲಿ ಕ್ರಮ ತೆಗೆದುಕೊಳ್ಳುವಂತೆ ಕೂಡಾ ನಿರ್ದೇಶನ ನೀಡಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಪೂರ್ವಭಾವಿ ಪರೀಕ್ಷೆ ವೆಚ್ಚದ ವಿವರ

ಯಾವುದಕ್ಕೆ	ಎಷ್ಟು ವೆಚ್ಚ ₹ಗಳಲ್ಲಿ
29 ಜಿಲ್ಲೆಗಳ ಜಿಲ್ಲಾಧಿಕಾರಿ ಮತ್ತು ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿಗೆ ಸಂಭಾವನೆ	38,38,800
29 ಜಿಲ್ಲೆಗಳ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಕಚೇರಿ ಸಿಬ್ಬಂದಿಗೆ ಸಂಭಾವನೆ	4,20,500
29 ಜಿಲ್ಲೆಗಳ ಖಜಾನಾಧಿಕಾರಿ, ಕಚೇರಿ ಸಿಬ್ಬಂದಿಗೆ ಸಂಭಾವನೆ	3,82,800
564 ಪರೀಕ್ಷಾ ಉಪ ಕೇಂದ್ರಗಳಿಗೆ ಸಂಭಾವನೆ	4.18 ಕೋಟಿ
ಪರೀಕ್ಷಾ ಕಾರ್ಯ ನಿರ್ವಹಿಸಿದ ಆಯೋಗದ ಅಧಿಕಾರಿ, ಸಿಬ್ಬಂದಿಗೆ ಸಂಭಾವನೆ	13,99,900
ಅಂಗವಿಕಲ ಅಭ್ಯರ್ಥಿಗಳಿಗೆ ಒದಗಿಸಿದ ಲಿಪಿಕಾರರಿಗೆ ಸಂಭಾವನೆ	4,21,608
ಸ್ಥಳೀಯ ನಿರೀಕ್ಷಣಾಧಿಕಾರಿಯಾಗಿ ಬೆಂಗಳೂರು ಉಪ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ	1,44,000
ಕ್ಲೋಸ್ಡ್ ಕಂಟೇನರ್ ವಾಹನಗಳ ಬಾಡಿಗೆ	9,89,214
ಲಘು ವಾಹನಗಳ ಬಾಡಿಗೆ	6,40,602
ವಿಆರ್‌ಎಲ್ ಕೊರಿಯರ್ ಸೇವೆಯ ವೆಚ್ಚ	2,84,557
ಪರೀಕ್ಷಾ ಕೈಪಿಡಿ ಮತ್ತು ಇತರ ಮಾರ್ಗಸೂಚಿಗಳ ಮುದ್ರಣ ವೆಚ್ಚ	9,78,928
ಪೊಲೀಸ್ ಬೆಂಗಾವಲು ಪಡೆ ಸೇವೆ ಒದಗಿಸಲು	5,00,000
ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗೆ ಕಾಫಿ, ಟೀ, ಊಟ, ತಿಂಡಿ	3,50,000

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಿಮಾನಗಳಿಗೆ ಬಾಂಬ್ ಬೆದರಿಕೆ: 100 ಹುಸಿ ಸಂದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಮಾನಯಾನ ಸಂಸ್ಥೆಗಳಿಗೆ ಏಳು ದಿನಗಳಲ್ಲಿ ಬಂದಿರುವ ಬಾಂಬ್ ಬೆದರಿಕೆ ಸಂದೇಶಗಳ ಸಂಖ್ಯೆ 100ಕ್ಕೆ ತಲುಪಿದ್ದು ಇವೆಲ್ಲವೂ ಹುಸಿ ಸಂದೇಶಗಳು ಎನ್ನುವುದು ಖಚಿತಪಟ್ಟಿದೆ. ಭಾನುವಾರ ಕೂಡ 20ರಿಂದ 30 ಹುಸಿ ಸಂದೇಶಗಳು ಇಂಡಿಗೊ, ಏರ್ ಇಂಡಿಯಾ, ವಿಸ್ತಾರಾ ಮತ್ತು ಆಕಾಸಾ ಏರ್ ಸಂಸ್ಥೆಗಳಿಗೆ ಬಂದಿದ್ದು, ವಿಮಾನಗಳ ಸಂಚಾರದಲ್ಲಿ ವ್ಯತ್ಯಯಕ್ಕೆ ಕಾರಣವಾದವು.

ಜಿದ್ದಾ-ಮುಂಬೈ, ಕೋಯಿಕ್ಕೋಡ್- ದಮ್ಮಾಮ್, ದೆಹಲಿ-ಇಸ್ತಾಂಬುಲ್, ಮುಂಬೈ-ಇಸ್ತಾಂಬುಲ್, ಪುಣೆ- ಜೋಧ್‌ಪುರ ಮತ್ತು ಗೋವಾದಿಂದ ಅಹಮದಾಬಾದ್‌ಗೆ ಹೊರಟಿದ್ದ ತನ್ನ ಆರು ವಿಮಾನಗಳಿಗೆ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ ಎಂದು ಇಂಡಿಗೊ ಹೇಳಿಕೆಯಲ್ಲಿ ತಿಳಿಸಿದೆ.

5ನೇ ಪುಟ ನೋಡಿ

ಬೆಂಗಳೂರು, ಬೆಳಗಾವಿ ವಿಮಾನ ನಿಲ್ದಾಣಗಳಿಗೂ ಬೆದರಿಕೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ರಾಜ್ಯದ ವಿಮಾನ ನಿಲ್ದಾಣಗಳಿಗೂ ಬಾಂಬ್ ಬೆದರಿಕೆ ಕರೆಗಳು ಬಂದಿವೆ.

ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದೇಶದ ವಿವಿಧ ಕಡೆಯಿಂದ ಬರುವ ಐದು ವಿಮಾನಗಳಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಸಂದೇಶ ಭಾನುವಾರ ಬಂದಿದೆ. ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣಕ್ಕೂ ಬೆದರಿಕೆ ಕರೆಗಳು ಬಂದಿವೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಮಾಜಿಕ ಜಾಲತಾಣ ‘ಎಕ್ಸ್’ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದಾರೆ. ಏರ್ ಇಂಡಿಯಾ, ವಿಸ್ತಾರಾ, ಸ್ಪೈಸ್ ಜೆಟ್,ಆಕಾಸಾ, ಅಲಯನ್ಸ್ ವಿಮಾನಯಾನ ಸಂಸ್ಥೆಗಳ ‘ಎಕ್ಸ್’ ಖಾತೆಗೆ ಬೆದರಿಕೆ ಸಂದೇಶ ಟ್ಯಾಗ್ ಮಾಡಲಾಗಿದೆ.

ಈ ಐದೂ ವಿಮಾನಯಾನ ಸಂಸ್ಥೆಗಳಿಗೆ ಸೇರಿದ ವಿಮಾನಗಳ ಸಂಖ್ಯೆ ನಮೂದಿಸಿ, ಈ ವಿಮಾನಗಳಲ್ಲಿ ಬಾಂಬ್ ಇರಿಸಲಾಗಿದೆ. ಬಾಂಬ್ ಅಡಗಿಸಿಟ್ಟುಕೊಂಡ ನಮ್ಮ ಕಡೆಯ 12 ಜನರು ಪ್ರಯಾಣಿಕರ ಸೋಗಿನಲ್ಲಿ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾರೆ ಎಂಬ ಒಂದೇ ರೀತಿಯ ಸಂದೇಶಗಳನ್ನು ಕಳುಹಿಸಲಾಗಿದೆ.

5ನೇ ಪುಟ ನೋಡಿ

ನೀವು ಈವರೆಗೆ ನಿಮ್ಮ ಜೀವನದ ಅತ್ಯಂತ **ಸುಲಭವಾದ ಪರೀಕ್ಷೆಯನ್ನು** ತೆಗೆದುಕೊಂಡುರು ವಿರಾ?

ನಾವು ಸ್ವಯಂ-ಸ್ತನ ಪರೀಕ್ಷೆಯ ಬಗ್ಗೆ ಮಾತನಾಡುತ್ತಿದ್ದೇವೆ.

ಕೇವಲ 3 **ನಿಮಿಷಗಳಲ್ಲಿ** ನೀವು ಎಂದಾದರೂ ತೆಗೆದುಕೊಳ್ಳುವ ಸರಳವಾದ ಅತ್ಯಂತ ಪ್ರಮುಖ ಪರೀಕ್ಷೆ, ನೀವು ಸ್ತನದ ಕ್ಯಾನ್ಸರ್ ಅನ್ನು ಮುಂಚಿತವಾಗಿ ಪತ್ತೆ ಹಚ್ಚಬಹುದಾಗಿದ್ದು, ಇದು ಬಹುತೇಕವಾಗಿ **ಚಿಕಿತ್ಸೆ ನೀಡಬಹುದಾದದ್ದು** ಹಾಗೂ **ಗುಣಪಡಿಸಬಹುದಾದದ್ದು** ಸಹ ಆಗಿರುತ್ತದೆ. ಯಾವುದೇ ತಯಾರಿ ಬೇಕಾಗಿಲ್ಲ, ಯಾವುದೇ ಒತ್ತಡವಿಲ್ಲ ಹಾಗೂ ನಿಮ್ಮ ಭವಿಷ್ಯವನ್ನು ಸುರಕ್ಷಿತ ಗೊಳ್ಳಿ ಸಿಕೊಳ್ಳುವ ಒಂದು ಅವಕಾಶ.

ಈ ಕೆಲವು ನಿಮಿಷಗಳನ್ನು ಕಳೆಯಲು ಬಿಡಬೇಡಿ –
ನಿಮ್ಮ ಹಾಗೂ ನಿಮ್ಮ ಕುಟುಂಬಕ್ಕಾಗಿ ಆರೋಗ್ಯಕರ ಭವಿಷ್ಯ ಮತ್ತು
ಈ ಅತ್ಯವಶ್ಯಕವಾದ ಕ್ರಮವನ್ನು ತೆಗೆದುಕೊಳ್ಳಿ.

ಇದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು easiestexam.com ಗೆ ಹೋಗಿ ಅಥವಾ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

zydus
Dedicated To Life

ತಹಿರಾ ಕಶ್ಯಪ್
“ಸ್ತನದ ಕ್ಯಾನ್ಸರ್ ಬಗ್ಗೆ ಜಾಗೃತಿಯನ್ನು ಹೆಚ್ಚಿಸೋಣ”

ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಪ್ರಕಟಿಸಲಾಗಿದೆ
ಶೈಕ್ಷಣಿಕ ಹಾಗೂ ಮಾಹಿತಿ ಉದ್ದೇಶಕ್ಕಾಗಿ ಮಾತ್ರವಾಗಿರುತ್ತದೆ ಹಾಗೂ ವೈದ್ಯಕೀಯ ಸಲಹೆಯ ನೀಡಿಕೆಯನ್ನು ನಿಯೋಜಿಸುವುದಿಲ್ಲ,
ವೈದ್ಯಕೀಯ ಸ್ಥಿತಿಯ ಬಗ್ಗೆ ಯಾವಾಗಲೂ ನಿಮ್ಮ ವೈದ್ಯರ ಸಲಹೆಯನ್ನು ಅಥವಾ ಇತರ ಅರ್ಹ ಆರೋಗ್ಯ ಒದಗಣೆದಾರರ ಸಲಹೆಯನ್ನು ಪಡೆಯಿರಿ.

ಸುಧಾ, ಮಯೂರ ಓದಿರಿ...

ಸ್ಥಾಪನೆ: 1906 ರಿ. ನಂ. 5–1906–1907

ರಾಜ್ಯ ಒಕ್ಕಲಿಗರ ಸಂಘ

ನಂ. 148, "ನಾಡಪ್ರಭು ಕೆಂಪೇಗೌಡ ಭವನ", ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004.
ದೂ: 26676818, 26507629, 26611029, ಫ್ಯಾಕ್ಸ್: 080–22423996
Email: vokkaligarasangha-1906@hotmail.com, GSTIN No: 29AAATV3662K1ZZ

ರಾಜ್ಯ ಒಕ್ಕಲಿಗರ ಸಂಘದ ಸರ್ವ ಸದಸ್ಯರ ಗಮನಕ್ಕೆ

ದಿನಾಂಕ 19.10.2024 ರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆಗಳಲ್ಲಿ ಮತ್ತು ಡೆಕ್ಕನ್ ಹೆರಾಲ್ಡ್ ಮತ್ತು ಟೈಮ್ಸ್ ಆಫ್ ಇಂಡಿಯಾ ಇಂಗ್ಲೀಷ್ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಹೊರಡಿಸಿ, ಸದರಿ ಪ್ರಕಟಣೆಯಲ್ಲಿ ಸಂಘದ ಪದಾಧಿಕಾರಿಗಳ ವಿರುದ್ಧ ಮಂಡಿಸಲಾದ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚಿಸಲು 22.10.2024 ರಂದು ಕಾರ್ಯಕಾರಿ ಸಭೆಯನ್ನು ನಿಗದಿಪಡಿಸಲಾಗಿದೆ ಎಂಬುದನ್ನು ಪ್ರಕಟಿಸಿದ್ದು ನೇರ ಪ್ರಸಾರವನ್ನು ವೀಕ್ಷಿಸಲು ಸಾಮಾಜಿಕ ಮಾಧ್ಯಮದ ಲಿಂಕ್‌ಗಳನ್ನು ಪ್ರಕಟಿಸಿರುತ್ತಾರೆ. ಆದುದರಿಂದ ಈ ಪ್ರಕಟಣೆಯನ್ನು ಹೊರಡಿಸುವ ಅಗತ್ಯತೆ ಕಂಡುಬಂದಿರುತ್ತದೆ.

ಅದರನ್ವಯ ಸಾರ್ವಜನಿಕ ಪ್ರಕಟಣೆ ನೀಡಲ್ಪಟ್ಟ ಕೆಲವು ಕಾರ್ಯಕಾರಿ ಸಮಿತಿ ಸದಸ್ಯರು ಈ ರೀತಿ ಸಾರ್ವಜನಿಕ ಪ್ರಕಟಣೆ ಹೊರಡಿಸುವ ಅಥವಾ ಸಭೆ ಕರೆಯುವ ಅಧಿಕಾರ ಹೊಂದಿಲ್ಲದಿರುವುದರಿಂದ ಮೇಲ್ಕಂಡಂತೆ ಹೊರಡಿಸಿರುವ ಪ್ರಕಟಣೆಯು ಅಸಿಂಧು, ಅಕ್ರಮ ಹಾಗೂ ಅನಧಿಕೃತವಾಗಿರುತ್ತದೆ. ಅಂತಹ ಪ್ರಕಟಣೆಯು ಕಾನೂನಿನ ಮಾನ್ಯತೆ ಹೊಂದಿರುವುದಿಲ್ಲ. ಆ ಮೇಲ್ಕಂಡ ಪ್ರಕಟಣೆಯು ಸಭೆಯನ್ನು ವೀಕ್ಷಿಸುವ ಮತ್ತು ಸದರಿ ಪ್ರಕಟಣೆಯನ್ನು ಪರಿಗಣಿಸುವ ಅಗತ್ಯತೆ ಇರುವುದಿಲ್ಲ. ಈ ಪ್ರಕಟಣೆಯನ್ನು ನಿರ್ಲಕ್ಷಿಸಬೇಕಾಗಿ ಸದಸ್ಯರುಗಳಲ್ಲಿ ವಿನಂತಿ.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 01.10.2024, ರಿಟ್ ಅರ್ಜಿ ಸಂಖ್ಯೆ 24827/2024 ಆದೇಶ ಹೊರಡಿಸಿದ್ದು ಮೇಲ್ಕಂಡ ಪ್ರಕಟಣೆಯು ಸದರಿ ಆದೇಶದ ತದ್ವಿರುದ್ಧವಾಗಿರುತ್ತದೆ ಮತ್ತು ಉಲ್ಲಂಘನೆ ಆಗಿರುತ್ತದೆ. ಅಧಿಕೃತವಾಗಿ ಸರ್ವ ಸದಸ್ಯರ ಸಭೆ ಕರೆಯುವ ಬಗ್ಗೆ ಹಾಲಿ ಪದಾಧಿಕಾರಿಗಳು ಕರೆದಿದ್ದ 18.10.2024 ರಂದು ಕಾರ್ಯಕಾರಿ ಸಭೆ ನಡೆದು ಸರ್ವ ಸದಸ್ಯರ ಸಭೆ ಕರೆಯುವ ಬಗ್ಗೆ ತೀರ್ಮಾನವಾಗಿರುತ್ತದೆ. ಅದರನ್ವಯ ಸರ್ವ ಸದಸ್ಯರ ಸಭೆಯ ದಿನಾಂಕ ನಿಗದಿಪಡಿಸಿ ಹಾಲಿ ಪದಾಧಿಕಾರಿಗಳು ಬೈಲಾ ಪ್ರಕಾರ ಅಗತ್ಯ ಪ್ರಕಟಣೆ ಹೊರಡಿಸಿ ಸಭೆಯ ದಿನಾಂಕವನ್ನು ಸರ್ವ ಸದಸ್ಯರ ಗಮನಕ್ಕೆ ತರಲಾಗುವುದು.

ಆದುದರಿಂದ, ಶ್ರೀ ಕೆಂಚಪ್ಪಗೌಡ ಮತ್ತಿತರರು ಪ್ರಕಟಿಸಿರುವ ಪ್ರಕಟಣೆಯನ್ನು ಪರಿಗಣಿಸಬಾರದಾಗಿಯೂ ಹಾಗೂ ಈ ರೀತಿ ಕರೆಯಲಾಗಿರುವ ಸಭೆಯು ಅನಧಿಕೃತ ಮತ್ತು ಕಾನೂನು ಉಲ್ಲಂಘನೆಯಾಗಿರುವುದರಿಂದ, ಅಂತಹ ಅನಧಿಕೃತ ಸಭೆಯಲ್ಲಿ ಯಾವುದೇ ನಿರ್ಣಯ ಕೈಗೊಂಡಲ್ಲಿ ಅಂತಹ ನಿರ್ಣಯ ಕಾನೂನಿನಡಿಯಲ್ಲಿ ಯಾವ ಮಾನ್ಯತೆಯನ್ನು ಹೊಂದಿರುವುದಿಲ್ಲ. ಆದುದರಿಂದ ಸಂಘದ ಹಿತ ದೃಷ್ಟಿಯಿಂದ, ಸಮುದಾಯದ ಘನತೆ ಹಾಗೂ ಗೌರವಕ್ಕೆ ಧಕ್ಕೆ ತರದಂತೆ ಈ ಮೂಲಕ ತಿಳಿಸಲಾಗಿದೆ.

ಸಹಿ/– ಸಿ.ಎನ್. ಬಾಲಕೃಷ್ಣ, ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ
ಸಹಿ/– ಆರ್. ಪ್ರಕಾಶ್, ಉಪಾಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ
ಸಹಿ/– ರಾಘವೇಂದ್ರ, ಉಪಾಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ
ಸಹಿ/– ಸಿ. ದೇವರಾಜ್ (ಹಾಪ್ ಕಾಮ್ಸ್), ಪ್ರಧಾನ ಕಾರ್ಯದರ್ಶಿ, ರಾಜ್ಯ ಒಕ್ಕಲಿಗರ ಸಂಘ
ಸಹಿ/– ಎಂ.ಎಸ್. ಉಮಾಪತಿ, ಖಜಾಂಚಿ, ರಾಜ್ಯ ಒಕ್ಕಲಿಗರ ಸಂಘ

ಸಂಸ್ಕೃತಿ ಸಂಗಮ–2024' ಪ್ರಶಸ್ತಿಯನ್ನು (ಎಡದಿಂದ) ಬಸವರಾಜ ಸಬರದ, ಕೃಷ್ಣ ಕೊಲ್ಹಾರ ಕುಲಕರ್ಣಿ, ಬಸವರಾಜ ನೆಲ್ಲಿಸರ, ಜಯದೇವಿ ಜಂಗಮಶೆಟ್ಟಿ ಅವರಿಗೆ ಪ್ರದಾನ ಮಾಡಲಾಯಿತು. ಎನ್ ಸರ್ವಮಂಗಳ, ಅಲ್ಲಮಪ್ರಭು ಸ್ವಾಮೀಜಿ, ಸಾಹಿತ್ಯ ಪ್ರತಿಷ್ಠಾನದ ಅಧ್ಯಕ್ಷ ಸಿ.ಸೋಮಶೇಖರ, ಕೇಂದ್ರ ಸಚಿವ ವಿ. ಸೋಮಣ್ಣ, ಟಿ.ಎನ್. ಸೀತಾರಾಮ್, ಹಂ.ಪ. ನಾಗರಾಜಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

IN THE HIGH COURT OF KARNATAKA AT BENGALURU
Notice to the Respondents No. 1 & 2
Vide order dated : 23.09.2024
R.F.A. No. 520/2021

Sri. C. Nagaraj ...Appellant
(By Sriyuths: Maruthi G. & Veena Kumari M. advs. for appellant)
V/s
Smt. Geetha & Another ...Respondents

To: Respondents:
1. SMT. GEETHA W/o Srinivasan .K, D/o N. Kanchanamala,
2. SMT. N. KANCHANAMALA W/o Hanumantharaju,
Both Are R/at No.40, NRI Layout, Phase 2, 12th Cross, Green Garden, Ramamurthy Nagar Post, Bangalore-560016.

Appeal From the Judgment & decree passed on 02/02/2021 in O.S. No. 120/2019 on the file of the ADDL. SENIOR CIVIL JUDGE & JMFC, K.G.F.

Notice is hereby given to you to appear in this court either in person or through Counsel duly instructed or through some one authorized by law, to act for you in the above appeal **on 05.11.2024** in case you intend to contest the appeal. If you fail to appear, the same will be dealt with, heard and decided in your absence.

Issued under my hand and the seal of this court, this the **23RD DAY OF SEPTEMBER 2024.**

BY ORDER OF THE COURT
ASSISTANT REGISTRAR

ಇಸರೋ ISRO

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಪೀಣ್ಯ, ಬೆಂಗಳೂರು–560058 ನಲ್ಲಿ ಅತಿಥಿ ಗೃಹ ಕಟ್ಟಡಕ್ಕೆ ಲಂಬ ವಿಸ್ತರಣೆಯಲ್ಲಿ ವಿದ್ಯುತ್ ಕೆಲಸಗಳು, ಎನ್‌ಐಇಟಿ: LEOS/CMG/EMW-09/2024-25, ದಿನಾಂಕ: 16.10.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 51.99 ಲಕ್ಷಗಳು, ಇಎಂಡಿ: ರೂ. 1,03,980/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 06 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 21.10.2024, **ಮುಕ್ತಾಯವಾಗುವ ದಿನಾಂಕ :** 07.11.2024.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–560058 ನಲ್ಲಿ ಎಲ್‌ಇಡಿ ಲೈಟ್ ಫಿಟ್ಟಿಂಗ್‌ಗಳ ಪೂರೈಕೆ ಮತ್ತು ಸ್ಥಾಪನೆಗೆ ದರ ಒಪ್ಪಂದ–ಒಂದು ವರ್ಷದ ಅವಧಿಗೆ. ಎನ್‌ಐಇಟಿ: LEOS/CMG/EMN-11/2024-25, ದಿನಾಂಕ: 16.10.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 12.62 ಲಕ್ಷಗಳು, ಇಎಂಡಿ: ರೂ. 25,240/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 12 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 22.10.2024, **ಮುಕ್ತಾಯವಾಗುವ ದಿನಾಂಕ :** 08.11.2024.

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

ಪ್ರಧಾನಿ ಭೇಟಿಯಾಗಿ ಚರ್ಚಿಸುವೆ; ಸಚಿವ ವಿ.ಸೋಮಣ್ಣ

'ಕಾಡುಗೊಲ್ಲರಿಗೆ ಮೀಸಲು ರಾಜ್ಯವೂ ಒತ್ತು ನೀಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಡು ಗೊಲ್ಲರು, ಸುಡುಗಾಡು ಸಿದ್ದ ಸಮುದಾಯಗಳನ್ನು ಮೀಸಲಾತಿ ವ್ಯಾಪ್ತಿಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇನೆ. ರಾಜ್ಯ ಸರ್ಕಾರದ ಕಡೆಯಿಂದ ಆಗಬೇಕಾದ ಕೆಲಸ ಬಾಕಿ ಇದ್ದು, ಅದಕ್ಕೆ ಒತ್ತು ನೀಡಬೇಕು' ಎಂದು ಕೇಂದ್ರ ಜಲ ಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದಲ್ಲಿ ಭಾನುವಾರ ಡಾ.ಸಿ. ಸೋಮಶೇಖರ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ ಆಯೋಜಿಸಿದ್ದ 2024ನೇ ಸಾಲಿನ ಸಂಸ್ಕೃತಿ ಸಂಗಮ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಈ ಸಮುದಾಯಗಳನ್ನು ಮೀಸಲಾತಿ ಪಟ್ಟಿಗೆ ತರುವ ವಿಚಾರಕ್ಕೆ ಸಂಬಂಧಿಸಿದಂತೆ, ನಾನೇ ಖುದ್ದಾಗಿ ಪ್ರಧಾನಿಯವರನ್ನು ಭೇಟಿಯಾಗಿ ಚರ್ಚಿಸಿದ್ದೇನೆ. ಪ್ರಯತ್ನ ಮುಂದುವರಿಸುತ್ತೇನೆ' ಎಂದು ಭರವಸೆ ನೀಡಿದರು.

'ರೈಲ್ವೆ ಇಲಾಖೆಯದ್ದು ಸೂಕ್ಷ್ಮ ಕೆಲಸ. ಹೀಗಾಗಿಯೇ ಐಎಎಸ್, ಐಪಿಎಸ್ ಆಗಲು ಆಸಕ್ತಿ ತೋರುವ ಕನ್ನಡಿಗರು, ರೈಲ್ವೆ ಇಲಾಖೆಯಲ್ಲಿ ಕಾರ್ಯ ನಿರ್ವಹಣೆಗೆ ಹಿಂದೇಟು ಹಾಕುತ್ತಿದ್ದಾರೆ. ರೈಲ್ವೆ ಇಲಾಖೆಗೆ ಹೆಚ್ಚಿನ ಸಂಖ್ಯೆಯ ಕನ್ನಡಿಗರು ಸೇರಬೇಕು. ಇದೇ ಉದ್ದೇಶದಿಂದಲೇ ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಿದ್ದೇನೆ. ಇದನ್ನು ಕನ್ನಡಿಗರು ಸದುಪಯೋಗಪಡಿಸಕೊಳ್ಳಬೇಕು' ಎಂದರು.

ಸಿನಿಮಾ ನಿರ್ದೇಶಕ ಟಿ.ಎನ್. ಸೀತಾರಾಮ್, 'ನಾವು ಕೃತಕ ಬುದ್ಧಿಮತ್ತೆ(ಎಐ) ಕಾಲದಲ್ಲಿದ್ದೇವೆ. ಸಾಹಿತ್ಯದ ಶಕ್ತಿಯನ್ನು ಎಐ ನಿರ್ಧರಿಸುತ್ತದೆ ಎಂಬ ಭೀತಿಯೂ ಇದೆ. ನಾವೇ ಸೃಷ್ಟಿಸಿದ್ದು, ನಮ್ಮನ್ನೇ ನಿಯಂತ್ರಿಸುವಂತಾಗುತ್ತಿದೆ. ಇದರ ಬಗ್ಗೆ ಇಂಥ ಕಾರ್ಯಕ್ರಮಗಳಲ್ಲಿ ಚರ್ಚೆಯಾಗಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ 2024ನೇ ಸಾಲಿನ 'ಸಂಸ್ಕೃತಿ ಸಂಗಮ' ಪ್ರಶಸ್ತಿಯನ್ನು ವಚನ ಸಾಹಿತ್ಯ ಕ್ಷೇತ್ರದಲ್ಲಿ ಬಸವರಾಜ ಸಬರದ, ದಾಸ ಸಾಹಿತ್ಯ ಕ್ಷೇತ್ರದಲ್ಲಿ ಕೃಷ್ಣ ಕೊಲ್ಹಾರ ಕುಲಕರ್ಣಿ, ಜಾನಪದ ಕ್ಷೇತ್ರದಲ್ಲಿ ಬಸವರಾಜ ನೆಲ್ಲಿಸರ ಹಾಗೂ ಸಂಗೀತ ಕ್ಷೇತ್ರದಲ್ಲಿ ಜಯದೇವಿ ಜಂಗಮಶೆಟ್ಟಿ ಅವರಿಗೆ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ನಾಗನೂರು ರುದ್ರಾಕ್ಷಿಮಠದ ಅಲ್ಲಮ ಪ್ರಭು ಸ್ವಾಮೀಜಿ, ಸಾಹಿತಿ ಹಂ.ಪ. ನಾಗರಾಜಯ್ಯ, ಪ್ರತಿಷ್ಠಾನದ ಅಧ್ಯಕ್ಷ ಸಿ. ಸೋಮಶೇಖರ, ಎನ್.ಸರ್ವಮಂಗಳ ಸೋಮಶೇಖರ್ ಉಪಸ್ಥಿತರಿದ್ದರು.

ಗೌರಿ ಹತ್ಯೆ ಆರೋಪಿಗಳಿಗೆ ಸನ್ಮಾನ: ಬೇಸರ

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಬಸವರಾಜ ಸಬರದ ಅವರು, 'ಗೌರಿ ಲಂಕೇಶ್ ಹತ್ಯೆ ಮಾಡಿದ ಆರೋಪಿಗಳಿಗೆ ಸನ್ಮಾನ ಮಾಡಲಾಗಿದೆ. ಕೊಲೆ ಆರೋಪಿ ಜೈಲಿನಿಂದ ಬಿಡುಗಡೆಯಾದರೆ ಅವನನ್ನು ಕರೆತರಲು ಹೆಲಿಕಾಪ್ಟರ್ ವ್ಯವಸ್ಥೆ ಮಾಡುವ, ನ್ಯಾಯಾಲಯದ ನಿರ್ಬಂಧ ತೆರವಾಗಿ 14 ವರ್ಷಗಳ ಬಳಿಕ ಜಿಲ್ಲೆ ಪ್ರವೇಶಿಸುವ ವ್ಯಕ್ತಿಯನ್ನು ಮೆರವಣಿಗೆ ಮಾಡುವ ಕಾಲದಲ್ಲಿದ್ದೇವೆ. ಇಂಥ ವೇಳೆಯಲ್ಲಿ ವಚನ ಸಾಹಿತ್ಯದ ಬಗ್ಗೆ ಹೇಗೆ ಮಾತನಾಡಲಿ' ಎಂದು ಪ್ರಶ್ನಿಸಿದರು.

ಮೆಟ್ರೊ ಪ್ರಯಾಣ ದರ ಪ್ರತಿಕ್ರಿಯೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಲಹೆ ಸೂಚನೆ ಸ್ವೀಕರಿಸಲು ನೀಡಿದ್ದ ಅವಧಿಯನ್ನು ಅ.28ರವರೆಗೆ ಬಿಎಂಆರ್‌ಸಿಎಲ್ ವಿಸ್ತರಿಸಿದೆ.

ದರ ಪರಿಷ್ಕರಣೆಗಾಗಿ ದರ ನಿಗದಿ ಸಮಿತಿ ರಚನೆಯಾಗಿದ್ದು, ನಾಗರಿಕರು ಸಲಹೆಗಳನ್ನು ಅ.21ರ ಒಳಗೆ ffc@bmrc.co.inಗೆ ಇ–ಮೇಲ್ ಮೂಲಕ ಸಲ್ಲಿಸಬಹುದು ಅಥವಾ ಅಧ್ಯಕ್ಷರು, ದರ ನಿಗದಿ ಸಮಿತಿ, ನಮ್ಮ ಮೆಟ್ರೊ, 3ನೇ ಮಹಡಿ, 'ಸಿ' ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಕೆಎಚ್ ರಸ್ತೆ, ಶಾಂತಿನಗರ, ಬೆಂಗಳೂರು-560027 ಇಲ್ಲಿಗೆ ಲಿಖಿತವಾಗಿ ಕಳುಹಿಸಬಹುದು ಎಂದು ಬಿಎಂಆರ್‌ಸಿಎಲ್ ತಿಳಿಸಿತ್ತು. ಇಲ್ಲಿವರೆಗೆ 2 ಸಾವಿರಕ್ಕೂ ಅಧಿಕ ಜನರು ಸಲಹೆಗಳನ್ನು ನೀಡಿದ್ದರು. ಸಾರ್ವಜನಿಕರಿಗೆ ಇನ್ನಷ್ಟು ಅವಕಾಶ ನೀಡಲು ಸಮಿತಿ ನಿರ್ಧರಿಸಿರುವುದರಿಂದ ಒಂದು ವಾರ ಅವಧಿ ವಿಸ್ತರಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ, 2002 ರ ಸೆಕ್ಷನ್ 33 ಮತ್ತು 34ರ ಅಡಿಯಲ್ಲಿ ಕೇಂದ್ರ ಸರ್ಕಾರ ರಚಿಸಿದ ಬಿಎಂಆರ್‌ಸಿಎಲ್‌ನ ಮೊದಲ ದರ ನಿಗದಿ ಸಮಿತಿ ಇದಾಗಿದೆ.

ಪ್ರಯಾಣಿಕರು, ಸಂಘ ಸಂಸ್ಥೆಗಳು, ತಜ್ಞರ ಜೊತೆ ಸಮಾಲೋಚನೆ ನಡೆಸಿದ ಬಳಿಕ ಸಮಿತಿಯು ದರ ನಿಗದಿ ಮಾಡಲಿದೆ. ಬಳಿಕ ಬಿಎಂಆರ್‌ಸಿಎಲ್ ದರ ಪರಿಷ್ಕರಣೆಗೆ ರಾಜ್ಯ ಸರ್ಕಾರ ಅನುಮತಿ ಕೋರಿ ಪ್ರಸ್ತಾವ ಸಲ್ಲಿಸುತ್ತದೆ.

ರಾಜ್ಯ ಸರ್ಕಾರದ ಒಪ್ಪಿಗೆ ಸಿಕ್ಕಿದ ಮೇಲೆ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ಎಲ್ಲ ಹಂತದಲ್ಲಿ ಅನುಮತಿ ಪಡೆದ ಬಳಿಕ ದರ ಹೆಚ್ಚಳವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

23ಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 5ನೇ ಹಂತದ ಯೋಜನೆಯ ಚಾಲನೆ ನಂತರದ ವಿದ್ಯುತ್ ಸಂಬಂಧಿತ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ತಾತಗುಣಿ ಮತ್ತು ಹಾರೋಹಳ್ಳಿಯಲ್ಲಿರುವ 220 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಅ.23 ರಂದು ಸ್ಥಗಿತಗೊಳಿಸಲಾಗುತ್ತಿದೆ.

ಈ ಕಾರಣದಿಂದ ಅಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆವರೆಗೆ ಕಾವೇರಿಯ ಎಲ್ಲಾ ಹಂತಗಳಿಂದ ನೀರು ಸರಬರಾಜನ್ನು ನಿಲ್ಲಿಸಲಾಗುತ್ತಿದೆ. ಈ ಅವಧಿಯಲ್ಲಿ ನಗರದಾದ್ಯಂತ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಪೊಲೀಸ್ ಸಂಸ್ಮರಣ ದಿನಾಚರಣೆ: ಅತಿಥಿ: ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ. ಪರಮೇಶ್ವರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ನಗರ ಸಶಸ್ತ್ರ ಮೀಸಲು ಪಡೆಯ ಕೇಂದ್ರ ಸ್ಥಾನ, ಹುತಾತ್ಮರ ಉದ್ಯಾನ, ಮೈಸೂರು ರಸ್ತೆ, ಬೆಳಿಗ್ಗೆ 8

ದಕ್ಷಿಣ ಭಾರತ ಹಿಂದುಳಿದ ವರ್ಗಗಳ ಮುಖಂಡರ ಸಮಾವೇಶ, 'ಮಾಜಿ ಪ್ರಧಾನಿ ವಿ.ಪಿ. ಸಿಂಗ್–ಬಿ.ಪಿ. ಮಂಡಲ್ ವರದಿ', 'ಡಿ. ದೇವರಾಜ ಅರಸು ಸ್ಮರಣೋತ್ಸವ ಮತ್ತು ಸಾಮಾಜಿಕ ನ್ಯಾಯ', 'ಪ್ರಾತಿನಿಧ್ಯ ವಂಚಿತ ಹಿಂದುಳಿದ ವರ್ಗಗಳು' ಕುರಿತು ವಿಚಾರಸಂಕಿರಣ: ಉದ್ಘಾಟನೆ: ರಂಗಸ್ವಾಮಿ ಎನ್., ಸಿ. ಡಿಜೆಕೌಮರ್, ಸುಧಾಮ್ ದಾಸ್, ಆಯೋಜನೆ: ಒ.ಬಿ.ಸಿ ಫೆಡರೇಶನ್ ಆಫ್ ಇಂಡಿಯಾ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10.15

ತರಗತಿಗಳ ಉದ್ಘಾಟನೆ: ಅತಿಥಿ: ಎಸ್. ವಿದ್ಯಾಶಂಕರ್, ಅಧ್ಯಕ್ಷತೆ: ವೈ. ರಾಜಾರೆಡ್ಡಿ, ಉಪಸ್ಥಿತಿ: ಕಿರಣ್ ಎಚ್.ಆರ್., ಅರುಣ್ ಎಚ್.ಆರ್., ಮಹೇಂದ್ರ ಕೆ.ವಿ., ಆಯೋಜನೆ ಮತ್ತು ಸ್ಥಳ: ಆರ್.ಆರ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿಕ್ಕಬಾಣಾವರ, ಬೆಳಿಗ್ಗೆ 11

ವಸುಂಧರಾ ರಾಘವನ್ ಅವರ 'ಕಿಡ್ನಿ ವಾರಿಯರ್ಸ್ ಎಡಿಷನ್–2' ಪುಸ್ತಕ ಬಿಡುಗಡೆ: ಅತಿಥಿ: ದಿನೇಶ್ ಗುಂಡೂರಾವ್, ಆಯೋಜನೆ: ಕಿಡ್ನಿ ವಾರಿಯರ್ಸ್ ಫೌಂಡೇಷನ್, ಸ್ಥಳ: ಹಯಾತ್ ಸೆಂಟ್ರಿಕ್, ಎಂ.ಜಿ. ರಸ್ತೆ, ಮಧ್ಯಾಹ್ನ 12

'ಘಂಟನಾದ ಶೀರ್ಷಿಕೆ ಭಾಗ–2' ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಅತಿಥಿಗಳು: ದಿನೇಶ್ ಗುಂಡೂರಾವ್, ಜಿ. ಪರಮೇಶ್ವರ, ವಿಶ್ವೇಶ್ವರ ಹೆಗಡೆ ಕಾಗೇರಿ, ಜಮೀರ್ ಅಹಮದ್ ಖಾನ್, ರಾಜೇಂದ್ರ ಕುಮಾರ್ ಕಠಾರಿಯಾ, ಎಂ.ವಿ. ವೆಂಕಟೇಶ್, ಆಯೋಜನೆ: ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಕರ್ನಾಟಕದ ಅತಿ ಎತ್ತರವಾದ 63 ಅಡಿ ರಾಮಾಂಜನೇಯ ಪ್ರತಿಮೆಯ ಚರ ಪ್ರತಿಷ್ಠಾಪನಾ ಮಹೋತ್ಸವ: ಗಣಪತಿ ಪೂಜೆ, ವಿದ್ವಜ್ಜನ ಪ್ರಾರ್ಥನೆ, ಕಳಶ ಪ್ರಾಣ ಪ್ರತಿಷ್ಠಾಪನೆ, ಆಯೋಜನೆ ಮತ್ತು ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



₹3,000 ಕೋಟಿ ಮೌಲ್ಯದ ಜಮೀನು ಅರಣ್ಯ ಇಲಾಖೆ ಮರುವಶಕ್ಕೆ: ಸಚಿವ ಈಶ್ವರ ಖಂಡ್ರೆ

‘ವರ್ಷದಲ್ಲಿ 103 ಎಕರೆ ಅರಣ್ಯ ಒತ್ತುವರಿ ತೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಂದು ವರ್ಷದಲ್ಲಿ ಸುಮಾರು ₹3,000 ಕೋಟಿ ಮೌಲ್ಯದ 103 ಎಕರೆ ಅರಣ್ಯ ಭೂಮಿ ಒತ್ತುವರಿಯನ್ನು ತೆರವು ಮಾಡಲಾಗಿದೆ’ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಯಲಹಂಕ ವ್ಯಾಪ್ತಿಯ ಮಾರಸಂದ್ರದಲ್ಲಿ ಒತ್ತುವರಿಯಾಗಿದ್ದ ಸುಮಾರು ₹40 ಕೋಟಿ ಮೌಲ್ಯದ 2 ಎಕರೆ 10 ಗುಂಟೆ ಭೂಮಿಯ ಒತ್ತುವರಿಯನ್ನು ಭಾನುವಾರ ತೆರವು ಮಾಡಲಾಗಿದ್ದು, ಕಾರ್ಯಾಚರಣೆಯ ನಂತರ ಮಾಧ್ಯಮಗಳಿಗೆ ಅವರು ಈ ಮಾಹಿತಿ ನೀಡಿದರು.

‘ಮಾರಸಂದ್ರದ ಗಸ್ತು ಸರ್ವೆ ನಂ.182ರ 2 ಎಕರೆ 10 ಗುಂಟೆ ಜಮೀನನ್ನು ಭೈರಾರಡ್ಡಿ ಎಂಬುವವರು ಒತ್ತುವರಿ ಮಾಡಿಕೊಂಡಿದ್ದರು. ಈ ಸಂಬಂಧ ಬೆಂಗಳೂರು ನಗರ ವಿಭಾಗದ ಅರಣ್ಯಾಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದರು. ಅದರನ್ವಯ ಭಾನುವಾರ ಬೆಳಗ್ಗೆ ಸ್ಥಳಕ್ಕೆ ತೆರಳಿ ಜೆಸಿಬಿ ಯಂತ್ರಗಳನ್ನು ಬಳಸಿಕೊಂಡು ಒತ್ತುವರಿ ತೆರವು ಮಾಡಲಾಗಿದೆ’ ಎಂದು ತಿಳಿಸಿದರು.

ಮಾರಸಂದ್ರದ ಸರ್ವೆ ನಂ.182ರಲ್ಲಿನ ಒತ್ತುವರಿಯನ್ನು ಭಾನುವಾರ ತೆರವು ಮಾಡಿ, ಸಸಿಗಳನ್ನು ನೆಡಲಾಯಿತು

‘ತೆರವು ಮಾಡಲಾದ ಅರಣ್ಯ ಭೂಮಿಯಲ್ಲಿ ಸಸಿಗಳನ್ನು ನೆಡಲಾಗಿದೆ. ಈ ಮೂಲಕ ಅರಣ್ಯ ಬೆಳೆಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಇದೇ ಒಂದು ವರ್ಷದ ಅವಧಿಯಲ್ಲಿ ನಗರದ ವಿವಿಧೆಡೆ ಕಾರ್ಯಾಚರಣೆ ನಡೆಸಿ, ಅರಣ್ಯ ಭೂಮಿಯನ್ನು ಮರುವಶಕ್ಕೆ ಪಡೆಯಲಾಗಿದೆ. ಅಲ್ಲೆಲ್ಲಾ ಅರಣ್ಯೀಕರಣ ಚಟುವಟಿಕೆ ನಡೆಸಲಾಗಿದೆ’ ಎಂದರು.

‘ಕೊತ್ತನೂರು ವ್ಯಾಪ್ತಿಯ ಸರ್ವೆ ನಂ.48ರಲ್ಲಿ ಸುಮಾರು ₹700 ಕೋಟಿ ಮೌಲ್ಯದ 22 ಎಕರೆ 8 ಗುಂಟೆ ಅರಣ್ಯ ಭೂಮಿ ಒತ್ತುವರಿಯಾಗಿದೆ. ಅದನ್ನು ತೆರವು ಮಾಡಲು ಈಗಾಗಲೇ ಕಾನೂನು ಕ್ರಮ ಆರಂಭಿಸಲಾಗಿದೆ. ಶೀಘ್ರವೇ ಅದನ್ನು ಅರಣ್ಯ ಇಲಾಖೆಯ ಮರುವಶಕ್ಕೆ ಪಡೆಯಲಾಗುತ್ತದೆ’ ಎಂದು ತಿಳಿಸಿದರು.

ಎಲ್ಲೆಲ್ಲಿ, ಎಷ್ಟೆಷ್ಟು?

- 27 ಎಕರೆ 2 ಗುಂಟೆ ಬಿ.ಎಂ.ಕಾವಲು
- 16 ಎಕರೆ 9 ಗುಂಟೆ ತುರಹಳ್ಳಿಯ ಮೈಲಸಂದ್ರ, ಕೆಂಚೇನಹಳ್ಳಿ
- 18 ಎಕರೆ ಜಾರಕಬಂಡೆ ಮತ್ತು ಪೀಣ್ಯ
- 17 ಎಕರೆ 3 ಗುಂಟೆ ಯಲಹಂಕದ ಕೊತ್ತನೂರು
- 14 ಎಕರೆ 4 ಗುಂಟೆ ಆನೇಕಲ್‌ನ ಭೂತನಹಳ್ಳಿ, ರಾಗಿಹಳ್ಳಿ
- 2 ಎಕರೆ 5 ಗುಂಟೆ ಸೂಲಿಕೆರೆ ಮೀಸಲು ಅರಣ್ಯ
- 1 ಎಕರೆ ಸೂಲಿಕೆರೆಯ ಯು.ಎಂ.ಕಾವಲು
- 2 ಎಕರೆ 10 ಗುಂಟೆ ಮಾರಸಂದ್ರ
- 3 ಎಕರೆ 6 ಗುಂಟೆ ನಗರದ ಇತರ ಪ್ರದೇಶಗಳಲ್ಲಿ ನಡೆಸಿದ ಸಣ್ಣ–ಪುಟ್ಟ ಕಾರ್ಯಾಚರಣೆಗಳಲ್ಲಿ ತೆರವಾದ ಒಟ್ಟು ಭೂಮಿ

ಆನ್‌ಲೈನ್ ಟ್ರೇಡಿಂಗ್: ಕಂಪನಿ ನಿರ್ದೇಶಕರಿಗೆ ₹6.5 ಕೋಟಿ ವಂಚನೆ

ಪ್ರಜ್ವಲ್ ಡಿಸೋಜಾ

ಬೆಂಗಳೂರು: ಆನ್‌ಲೈನ್ ಟ್ರೇಡಿಂಗ್ ಹೆಸರಿನಲ್ಲಿ ನಗರದ ಖಾಸಗಿ ಕಂಪನಿಯ ನಿರ್ದೇಶಕರೊಬ್ಬರಿಗೆ ₹6.54 ಕೋಟಿ ಹಣ ವಂಚಿಸಲಾಗಿದೆ. ಈ ಸಂಬಂಧ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಪೊಲೀಸರ ಪ್ರಕಾರ ಈ ವರ್ಷ ನಗರದಲ್ಲಿ ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಅತಿ ಹೆಚ್ಚು ಮೊತ್ತ ಕಳೆದುಕೊಂಡ ಪ್ರಕರಣ ಇದಾಗಿದೆ. ಕಳೆದ ವರ್ಷ ನಿವೃತ್ತ ಅಧಿಕಾರಿಯೊಬ್ಬರಿಗೆ 'ಫೆಡ್‌ಎಕ್ಸ್' ಕೊರಿಯರ್ ಹೆಸರಿನಲ್ಲಿ ₹ 9.14 ಕೋಟಿ ವಂಚನೆ ಮಾಡಲಾಗಿತ್ತು.

ಲ್ಯಾಂಪ್‌ಗಳನ್ನು ತಯಾರಿಸುವ ಕಂಪನಿಯೊಂದರ ನಿರ್ದೇಶಕರು, ಡಿಮ್ಯಾಟ್ ಖಾತೆ ತೆರೆದು ಷೇರು ವ್ಯವಹಾರ ಮಾಡುತ್ತಿದ್ದರು. ಆಗಸ್ಟ್ 11 ರಂದು, 56 ವರ್ಷದ ಈ ವ್ಯಕ್ತಿಗೆ ಅಪರಿಚಿತ ನಂಬರ್‌ನಿಂದ ವಾಟ್ಸ್‌ಆ್ಯಪ್ ಸಂದೇಶ ಬಂದಿದ್ದು, ವಹಿವಾಟು ಮತ್ತು ಹೂಡಿಕೆಯ ಕುರಿತ ತರಗತಿಗಳಿಗಾಗಿ ಗುಂಪು ಸೇರುವಂತೆ ಹೇಳಿದ್ದಾರೆ.

ಅನಿಕೇತ್ ನೆರ್ಕರ್ ಎಂಬುವರು ವ್ಯಕ್ತಿಯನ್ನು ‘ನುವಾಮಾ ಎಲೈಟ್ ಗ್ರೂಪ್’ ಎಂಬ ಹೆಸರಿನ ವಾಟ್ಸ್‌ಆ್ಯಪ್ ಗುಂಪಿಗೆ ಸೇರಿಸಿದ್ದರು. ಸುಮಾರು ಒಂದು ತಿಂಗಳು ಆನ್‌ಲೈನ್ ತರಗತಿಗೆ ಹಾಜರಾಗಿದ್ದರು. ಷೇರು ಮಾರುಕಟ್ಟೆಯಲ್ಲಿನ ಹೂಡಿಕೆ ಬಗ್ಗೆ ಸಲಹೆ ನೀಡಲಾಗುತ್ತಿತ್ತು.

‘ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹೆಚ್ಚು ಲಾಭಾಂಶ ಗಳಿಸುತ್ತಿರುವ ಬಗ್ಗೆ ವಾಟ್ಸ್‌ಗ್ರೂಪ್‌ನಲ್ಲಿನ ಸದಸ್ಯರು ಸಂದೇಶಗಳನ್ನು ಹಾಕುತ್ತಿದ್ದರು. ಈ ಸದಸ್ಯರು ವಂಚಕರ ಕಡೆಯವರು ಎಂಬುದು ಗೊತ್ತಿರಲಿಲ್ಲ. ಇದನ್ನು ನಂಬಿದ ವ್ಯಕ್ತಿ, ವಂಚಕರು ಸೂಚಿಸಿದ್ದ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅದರ ಮೂಲಕ ಹಣ ವಿನಿಯೋಗಿಸುತ್ತಿದ್ದರು. ಹಂತ ಹಂತವಾಗಿ ಅಕ್ಟೋಬರ್ 14ರವರೆಗೆ 12 ಬ್ಯಾಂಕ್ ಖಾತೆಗಳಿಗೆ₹ 6.54 ಕೋಟಿ ವರ್ಗಾವಣೆ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಟ್ರೇಡಿಂಗ್‌ನಲ್ಲಿ ಬಂದ ಲಾಭದ ಹಣವನ್ನುತೆಗೆದುಕೊಳ್ಳಲು ನಿರ್ದೇಶಕರು ಪ್ರಯತ್ನಿಸಿದಾಗ ಸಾಧ್ಯವಾಗಲಿಲ್ಲ. ಆಗ ವಂಚಕರನ್ನು ಸಂಪರ್ಕಿಸಿದಾಗ, ಮತ್ತೆ ₹2.5 ಕೋಟಿ ಹಣ ವರ್ಗಾವಣೆ ಮಾಡುವಂತೆ ಹೇಳಿದ್ದಾರೆ. ಇದರಿಂದ ಅನುಮಾನಗೊಂಡು ಪೊಲೀಸರಿಗೆ ದೂರು ನೀಡಿದರು. 12 ಬ್ಯಾಂಕ್ ಖಾತೆಗಳ ಹಣವನ್ನು ಜಪ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ’ ಪೊಲೀಸರು ತಿಳಿಸಿದರು.

ಹೆಸರಘಟ್ಟ: ಪುಷ್ಪಲತಾ ಗ್ರಾ.ಪಂ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಇಲ್ಲಿನ ಗ್ರಾಮ ಪಂಚಾಯಿತಿಗೆ ಎರಡನೇ ಅವಧಿಗೆ ಅಧ್ಯಕ್ಷರಾಗಿ ಪುಷ್ಪಲತಾ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕಾಗಿ ಶನಿವಾರ ಚುನಾವಣೆ ನಡೆಯಿತು. ಒಟ್ಟು 25 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ಪುಷ್ಪಲತಾ ವೆಂಕಟೇಶ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಅಂಜನಾದೇವಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಅಶ್ವತ್, ವಸಂತಲಕ್ಷ್ಮಿ, ಸದಸ್ಯರಾದ ಪಿ.ಕೆ ರಾಜಣ್ಣ, ಗೋವಿಂದರಾಜು, ಪಿಡಿಒ ಪ್ರಸಾದ್ ಎಂ.ವಿ ಸ್ಥಳೀಯ ಮುಖಂಡರಾದ ರಾಮಮೂರ್ತಿ, ಪ್ರಕಾಶ್, ಕೃಷ್ಣಯ್ಯ, ರಾಜೇಶ್, ಹನುಮಯ್ಯ ಮತ್ತಿತರರು ಉಪಸ್ಥಿತರಿದ್ದರು.

‘ಜೋಶಿ ವಿರುದ್ಧ ಕುತಂತ್ರ’

ಬೆಂಗಳೂರು: ಮುಡಾ ಮತ್ತು ವಾಲ್ಮೀಕಿ ಹಗರಣ ಮರೆಮಾಚಲು ಕಾಂಗ್ರೆಸ್ ನಾಯಕರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಸಿಕ್ಕಿ ಹಾಕಿಸಲು ಕುತಂತ್ರ ನಡೆಸಿದ್ದಾರೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಕೆ.ಭಾಂಡಗೆ ಟೀಕಿಸಿದ್ದಾರೆ.

ಗೋಪಾಲ ಜೋಶಿ ಅವರ ಮೇಲೆ ಕೇಳಿ ಬಂದಿರುವ ಆರೋಪವನ್ನು ಮುಂದಿಟ್ಟುಕೊಂಡು ಪ್ರಲ್ಹಾದ ಜೋಶಿಯವರನ್ನು ಟೀಕೆ ಮಾಡುವುದು ಸರಿಯಲ್ಲ. ಕಳೆದ 30 ವರ್ಷಗಳಿಂದ ಗೋಪಾಲ ಜೋಷಿಯವರ ಜತೆ ಸಂಪರ್ಕ ಇಲ್ಲ ಎಂದು 2012ರಲ್ಲಿಯೇ ಪ್ರಲ್ಹಾದ ಜೋಷಿ ಪತ್ರಿಕೆಗಳ ಮೂಲಕವೇ ಸ್ಪಷ್ಟನೆ ನೀಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಹಣ ಪಡೆದು ವಂಚಿಸಿದ ಆರೋಪ

ಹೆಡ್‌ಕಾನ್‌ಸ್ಟೆಬಲ್ ಸೇರಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಉದ್ಯೋಗ ಕೊಡಿಸುವ ಭರವಸೆ ನೀಡಿ ಹಣ ಪಡೆದು ವಂಚಿಸಿದ್ದ ಆರೋಪದ ಮೇಲೆ ನಗರದ ಸಶಸ್ತ್ರ ಮೀಸಲು ಪೊಲೀಸ್ ಪಡೆ ಪ್ರಧಾನ ಕಚೇರಿಯ ಹೆಡ್ ಕಾನ್‌ಸ್ಟೆಬಲ್ ಪ್ರಶಾಂತ್ ಕುಮಾರ್ ಸೇರಿ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಮಹಾಲಕ್ಷ್ಮೀ ಲೇಔಟ್ ನಿವಾಸಿ ಭಾಗ್ಯಮ್ಮ ಎಂಬುವವರು ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಶಾಂತ್ ಕುಮಾರ್, ದೀಪಾ, ಮಂಜುನಾಥ್ ಪ್ರಸಾದ್ ವಿರುದ್ಧ ದೂರು ದಾಖಲಿಸಿದ್ದಾರೆ.

‘2011ರಲ್ಲಿ ಪರಿಚಯವಾಗಿದ್ದ ಪ್ರಶಾಂತ್ ಕುಮಾರ್ ಅವರಿಗೆ ನನ್ನ ಇಬ್ಬರು ಮಕ್ಕಳಿಗೆ ಸರ್ಕಾರಿ ಕೆಲಸ ಕೊಡಿಸುವಂತೆ ಕೇಳಿದ್ದೆ. ಆಗ ತನಗೆ ಹಲವು ಸರ್ಕಾರಿ ಅಧಿಕಾರಿಗಳು ಪರಿಚಯವಿದ್ದು, ಕೆಲಸ ಕೊಡಿಸುತ್ತೇನೆ ಎಂದು ಭರವಸೆ ನೀಡಿದ್ದರು. ಮೂರು ತಿಂಗಳಲ್ಲಿ ಎಫ್‌ಡಿಎ, ಎಸ್‌ಡಿಎ ಶ್ರೇಣಿಯ ಕೆಲಸ ಕೊಡಿಸುವುದಾಗಿ ಹೇಳಿ ₹25 ಲಕ್ಷ ನಗದು ನೀಡುವಂತೆ ಬೇಡಿಕೆ ಇಟ್ಟಿದ್ದರು. ನಂತರ ಮಂಜುನಾಥ್ ಪ್ರಸಾದ್ ಎಂಬಾತನನ್ನು ತನ್ನ ಆಪ್ತ ಸಹಾಯಕ ಎಂದು ಪ್ರಶಾಂತ್ ಪರಿಚಯ ಮಾಡಿಸಿದ್ದರು’ ಎಂದು ಭಾಗ್ಯಮ್ಮ ದೂರಿನಲ್ಲಿ ತಿಳಿಸಿದ್ದಾರೆ.

‘ಹಂತ ಹಂತವಾಗಿ ಒಟ್ಟು₹47 ಲಕ್ಷ ನಗದು, 857 ಗ್ರಾಂ. ಚಿನ್ನಾಭರಣವನ್ನೂ ಪಡೆದಿದ್ದು, ಯಾವುದೇ ಸರ್ಕಾರಿ ನೌಕರಿ ಕೊಡಿಸಿಲ್ಲ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಪ್ರಶಾಂತ್ ಕುಮಾರ್ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸೋಮವಾರ ವಿಚಾರಣೆಗೆ ಬರುವಂತೆ ಪ್ರಶಾಂತ್ ಅವರಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆ ಬಳಿಕ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು, ಅವರು ಮುಂದಿನಕ್ರಮ ಕೈಗೊಳ್ಳುತ್ತಾರೆ’ ಎಂದು ಠಾಣೆಯ ಇನ್‌ಸ್ಪೆಕ್ಟರ್ ತಿಳಿಸಿದರು.

ಪರಪ್ಪನ ಅಗ್ರಹಾರ ಜೈಲು ಅಕ್ರಮ ದೋಷಾರೋಪ ಪಟ್ಟಿ ಸಿದ್ಧ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಮೂರು ಪ್ರಕರಣಗಳಲ್ಲಿ ಪೊಲೀಸರು ಪ್ರಾಥಮಿಕ ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದಾರೆ. ದೋಷಾರೋಪ ಪಟ್ಟಿಯನ್ನು ಕಾನೂನು ತಜ್ಞರ ಪರಿಶೀಲನೆಗಾಗಿ ಕಳುಹಿಸಲಾಗಿದ್ದು, ಎರಡು ದಿನಗಳಲ್ಲಿ ಅಂತಿಮಗೊಳ್ಳುವ ನಿರೀಕ್ಷೆಯಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ನೇತೃತ್ವದ ತಂಡವು, ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ಶಂಕಿಸಲಾದ ಜೈಲು ಅಧಿಕಾರಿಗಳ ವಿರುದ್ಧ ತನಿಖೆಗೆ ಅನುಮತಿ ಕೋರಲಿದೆ. ಕೊಲೆ ಆರೋಪಿ ದರ್ಶನ್, ರೌಡಿ ಶೀಟರ್ ನಾಗರಾಜ್ ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ ಸೇರಿದಂತೆ ಇತರರು ಜೈಲಿನಲ್ಲಿ ಟೀ ಪಾರ್ಟಿ ಮಾಡುತ್ತಿರುವ ಚಿತ್ರ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದಂತೆ ಅಕ್ರಮಗಳು ಬೆಳಕಿಗೆ ಬಂದಿದ್ದವು.

ಸ್ನೇಹಿತನ ಪುತ್ರಿ ಮೇಲೆ ಅತ್ಯಾಚಾರ

ಅಪರಾಧ ಸುದ್ದಿ

ಬೆಂಗಳೂರು: ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಸ್ನೇಹಿತನ ಪುತ್ರಿ ಮೇಲೆ ಅತ್ಯಾಚಾರವೆಸಗಿದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ಹೊರವಲಯದ ತೋಟ-ದಗುಡ್ಡದಹಳ್ಳಿ ನಿವಾಸಿ ರವಿ (44) ಎಂಬುವರನ್ನು ಬಂಧಿಸಿದ್ದು, ಆರೋಪಿ ವಿರುದ್ಧ ‘ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ’ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದಾರೆ.

‘ಸಂತ್ರಸ್ತ ಬಾಲಕಿಯ ತಂದೆ ಆರೋಪಿ ಬಳಿ ₹70 ಸಾವಿರ ಸಾಲ ಪಡೆದಿದ್ದರು. ಈ ಪೈಕಿ ₹30 ಸಾವಿರ ಸಾಲ ತೀರಿಸಿದ್ದರು. ಉಳಿದ ಅಸಲು ಮತ್ತು ಬಡ್ಡಿ ನೀಡದಿದ್ದಕ್ಕೆ ರವಿಕುಮಾರ್ ಪೀಡಿಸುತ್ತಿದ್ದ. ಸಾಲ ವಸೂಲಿಯ ನೆಪದಲ್ಲಿ ಆರೋಪಿಯು ಬಾಲಕಿ ಮನೆಗೆ ಹೋಗುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿ ಮೇಲೆ ಅತ್ಯಾಚಾರ ಮಾಡಿದ್ದಾನೆ. ಆಗಸ್ಟ್‌ನಲ್ಲಿ ಈ ಘಟನೆ ನಡೆದಿದ್ದು, ಬಾಲಕಿಯ ದೂರು ಆಧರಿಸಿ ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಡಕಾಯಿತಿಗೆ ಯತ್ನ: ರೌಡಿ ಶೀಟರ್ ಬಂಧನ

ಬೆಂಗಳೂರು: ಡಕಾಯಿತಿಗೆ ಯತ್ನಿಸಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ರೌಡಿಶೀಟರ್ ಪಾಯ್ಸನ್ ಶಿವ ಎಂಬಾತನ ಸಹಚರನಾದ ಧನಂಜಯ್, ಮೂರು ತಿಂಗಳ ಹಿಂದೆ ಯಲಹಂಕ ಬಳಿ ಡಕಾಯಿತಿಗೆ ಯತ್ನಿಸಿದ್ದ. ಆ ಬಳಿಕ ಪೊಲೀಸರ ಕಣ್ಣು ತಪ್ಪಿಸಿ ಓಡಾಡುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಕೊಡಿಗೆಹಳ್ಳಿ ಬಳಿ ಆರೋಪಿಯನ್ನು ಬಂಧಿಸಿ, ಆತನಿಂದ ಲಾಂಗ್ ಮತ್ತು ಡ್ಯಾಗರ್ ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಬಿಎಸ್‌ವೈ ಪತ್ನಿ ಸಾವಿನ ತನಿಖೆಯಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಎಸ್.ಯಡಿಯೂರಪ್ಪ ಪತ್ನಿ ಮೈತ್ರಾದೇವಿ ಅವರ ಸಾವಿನಲ್ಲಿ ಶೋಭಾ ಕರಂದ್ಲಾಜೆ ಅವರ ಪಾತ್ರವಿದೆ ಎಂದು ನನಗೆ ಅನುಮಾನವಿದೆ. ಈ ಬಗ್ಗೆ ತನಿಖೆಯಾಗಲಿ’ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಆರೋಪಿಸಿದ್ದಾರೆ.

ಮುಡಾ ಕಡತಗಳನ್ನು ಭೈರತಿ ಸುರೇಶ್ ಅವರು ಸುಟ್ಟುಹಾಕಿದ್ದಾರೆ ಎಂದು ಶೋಭಾ ಅವರು ಶನಿವಾರ ಆರೋಪದ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಸುರೇಶ್ ಅವರು, ‘ಯಡಿಯೂರಪ್ಪ ಒಳ್ಳೆಯವರು. ಆದರೆ ಮೈತ್ರಾದೇವಿ ಅವರ ಸಾವು ಹೇಗಾಯಿತು. ಈ ಬಗ್ಗೆ ಗೃಹ ಸಚಿವರು, ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲಿ’ ಎಂದರು.

‘ಒಬ್ಬ ಕೇಂದ್ರ ಸಚಿವೆಯಾಗಿ ಅವರು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾರೆ. ಅವರನ್ನೂ ಬಂಧಿಸಿ, ತನಿಖೆ ನಡೆಸಿದರೆ ಯಡಿಯೂರಪ್ಪ ಅವರ ಪತ್ನಿಯ ಸಾವು ಹೇಗಾಯಿತು ಎಂಬುದು ಗೊತ್ತಾಗುತ್ತದೆ ಎಂದು ನಾನು ಒತ್ತಾಯಿಸಿದರೆ, ಶೋಭಾ ಅದನ್ನು ಒಪ್ಪುತ್ತಾರೆಯೇ’ ಎಂದು ಪ್ರಶ್ನಿಸಿದರು.

ರಂಗೋಲಿ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಮಾನ ಮನಸ್ಕರ ವೇದಿಕೆ ನವೆಂಬರ್ 9ರಂದು ಕೆಂಗೇರಿ ಉಪನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಂಗೋಲಿ ಸ್ಪರ್ಧೆ ಹಮ್ಮಿಕೊಂಡಿದೆ.

ಪ್ರಥಮ ಬಹುಮಾನ ₹3 ಸಾವಿರ, ದ್ವಿತೀಯ ಬಹುಮಾನ ₹2 ಸಾವಿರ ಹಾಗೂ ತೃತೀಯ ಬಹುಮಾನ ₹1 ಸಾವಿರ ಇದೆ. ಭಾಗವಹಿಸಿದ ಎಲ್ಲರಿಗೂ ಉಡುಗೊರೆಗಳನ್ನು ನೀಡಲಾಗುತ್ತದೆ. 15 ವರ್ಷ ಮೇಲ್ಪಟ್ಟವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ 9008088003/ 9844001346ಗೆ ಸಂಪರ್ಕಿಸಿ.

ವಾಹನ ಸಂಚಾರಕ್ಕೆ ತೊಡಕು • ದ್ವೀಪಗಳಂತಾದ ಬಡಾವಣೆಗಳು

ಭಾರಿ ಮಳೆ: ಕಾಲುವೆಯಂತಾದ ರಸ್ತೆಗಳು

ಕೆಂಪೇಗೌಡ ಲೇಔಟ್ 3ನೇ ಹಂತದಲ್ಲಿ ಮೋರಿ ಮೇಲಿನ ಸೇತುವೆಯಲ್ಲಿ ನೀರು ಹರಿಯುತ್ತಿರುವುದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ರಾತ್ರಿ ಮತ್ತು ಭಾನುವಾರ ನಗರದ ವಿವಿಧೆಡೆ ಮಳೆಯಾಗಿದೆ. ಹಲವು ಕಡೆಗಳಲ್ಲಿ ರಸ್ತೆಗಳಲ್ಲೇ ನೀರು ಹರಿಯಿತು. ರಾಜಕಾಲುವೆ ಮತ್ತು ಚರಂಡಿಗಳು ಮುಚ್ಚಿಕೊಂಡಿದ್ದರಿಂದ ವಿವಿಧೆಡೆ 25ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ.

ಜ್ಞಾನಭಾರತಿ ಮೆಟ್ರೊ ನಿಲ್ದಾಣದಿಂದ ಪಟ್ಟಣಗೆರೆ ಮೆಟ್ರೊ ನಿಲ್ದಾಣದವರೆಗೆ ರಸ್ತೆಯೇ ಕಾಲುವೆಯಂತಾಗಿದ್ದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ಇದೇ ರಸ್ತೆಯಲ್ಲಿ ಇತ್ತೀಚೆಗೆ ಹೊಸದಾಗಿ ಹಾಕಲಾಗಿದ್ದ ಡಾಂಬರು ಕೊಚ್ಚಿ ಹೋಗಿದೆ.

ಖೋಡೆ ಅಂಡರ್‌ಪಾಸ್‌ನಿಂದ ಲುಲು ಮಾಲ್‌ವರೆಗೆ ಎರಡೂ ಕಡೆ ನೀರು ನಿಂತಿದ್ದರಿಂದ ವಾಹಗಳ ಚಾಲನೆಗೆ ತೊಂದರೆಯಾಯಿತು. ಇದೇ ರೀತಿಯಲ್ಲಿ ಆರ್‌.ವಿ. ಕಾಲೇಜು ಬಳಿಯ ಜೈರಾಮ್ ಜಂಕ್ಷನ್‌ನಲ್ಲಿ ಎರಡೂ ಕಡೆಗಳ ರಸ್ತೆಗಳಲ್ಲಿ ನೀರು ನಿಂತು ಸಮಸ್ಯೆ ಉಂಟಾಯಿತು. ವರ್ತೂರು-ಗುಂಜೂರು ರಸ್ತೆಯಲ್ಲಿ ರಸ್ತೆಯೇ ಚರಂಡಿಯಂತಾಯಿತು. ನಾಗವಾರ ಜಂಕ್ಷನ್‌ನಲ್ಲಿ ನೀರು ನಿಂತಿದ್ದರಿಂದ ವೀರಣ್ಣಪಾಳ್ಯ ಕಡೆಗೆ ಸಾಗುವ ವಾಹನಗಳಿಗೆ ಅಡಚಣೆ ಉಂಟಾಯಿತು.

ಶಾಂತಿನಗರ, ಜಯನಗರ, ತ್ಯಾಗರಾಜ ನಗರ, ರಾಜರಾಜೇಶ್ವರಿ ನಗರ, ಶ್ರೀನಗರ, ಕೆ.ಆರ್. ಮಾರ್ಕೆಟ್, ಟೌನ್‌ಹಾಲ್, ಕಾರ್ಪೊರೇಷನ್ ಸರ್ಕಲ್, ಮೈಸೂರು ರಸ್ತೆ, ವಿಜಯನಗರ, ಮಾಗಡಿ ರಸ್ತೆ, ರಾಜಾಜಿ ನಗರ, ಮಲ್ಲೇಶ್ವರ, ಯಶವಂತಪುರ, ಜಾಲಹಳ್ಳಿ, ಪೀಣ್ಯ, ಹೆಬ್ಬಾಳ, ಯಲಹಂಕ ಸೇರಿದಂತೆ ಬಹುತೇಕ ಕಡೆಗಳಲ್ಲಿ ಧಾರಾಕಾರ ಮಳೆಯಾಗಿದೆ. ಹೊರಮಾವು ಬಳಿಯ ಸಾಯಿ ಲೇ ಔಟ್, ಯಲಹಂಕದ ರಮಣಶ್ರೀ ಕ್ಯಾಲಿಫೋರ್ನಿಯ ಬಡಾವಣೆಗಳಿಗೆ ಮತ್ತೆ ನೀರು ನುಗ್ಗಿರುವುದರಿಂದ ಬಡಾವಣೆಗಳು ದ್ವೀಪದಂತಾಗಿವೆ.

ಮೈಸೂರು ರಸ್ತೆಯಲ್ಲಿ ಇರುವ ಕಾರು ಶೋರೂಂಗಳಿಗೆ ನೀರು ನುಗ್ಗಿದೆ. ರಾಜರಾಜೇಶ್ವರಿ ನಗರದ ಬೆಮೆಲ್ ಲೇ ಔಟ್, ಪಟ್ಟಣಗೆರೆ, ಗ್ಲೋಬಲ್ ಟೆಕ್ ಪಾರ್ಕ್ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳನ್ನು ಚಲಾಯಿಸಲಾರದಷ್ಟು ನೀರು ನಿಂತಿತ್ತು. ಪರಪ್ಪನ ಅಗ್ರಹಾರ– ಸರ್ಜಾಪುರ ರಸ್ತೆಯಲ್ಲಿಯೇ ನೀರು ಹರಿಯಿತು.

ಅಧಿಕ ಮಳೆಯಾದ ಪ್ರದೇಶ: ಬಾಗಲಗುಂಟೆ 5.4 ಸೆಂ.ಮೀ., ಶೆಟ್ಟಿಹಳ್ಳಿ 4.2 ಸೆಂ.ಮೀ., ನಾಗಪುರ 3.8 ಸೆಂ.ಮೀ., ನಂದಿನಿ ಬಡಾವಣೆ 3.3 ಸೆಂ.ಮೀ., ಹೇರೋಹಳ್ಳಿ 2.9 ಸೆಂ.ಮೀ., ದೊಡ್ಡಬಿದರಕಲ್ಲು 2.5 ಸೆಂ.ಮೀ. ಕೊಟ್ಟಿಗೆ ಪಾಳ್ಯ 2.4 ಸೆಂ.ಮೀ., ಬಸವೇಶ್ವರನಗರ 2.4 ಸೆಂ.ಮೀ., ದೊರೆಸಾನಿ ಪಾಳ್ಯ 2,1 ಸೆಂ.ಮೀ., ಕೆಂಗೇರಿ 2.1 ಸೆಂ.ಮೀ., ಪೀಣ್ಯ ಇಂಡಸ್ಟ್ರೀ 2 ಸೆಂ.ಮೀ., ರಾಜಾಜಿ ನಗರ 1.9 ಸೆಂ.ಮೀ., ಹಂಪಿನಗರ 1.5 ಸೆಂ.ಮೀ., ಚೊಕ್ಕಸಂದ್ರ 1.3 ಸೆಂ.ಮೀ., ರಾಜರಾಜೇಶ್ವರಿ ನಗರ 1.2 ಸೆಂ.ಮೀ., ಬೊಮ್ಮನಹಳ್ಳಿ 1.1 ಸೆಂ.ಮೀ., ಅರಕೆರೆ 1.1 ಸೆಂ.ಮೀ., ಅಂಜನಪುರ 1 ಸೆಂ. ಮೀ., ಮಾರುತಿ ಮಂದಿರ 1 ಸೆಂ.ಮೀ. ಮಳೆಯಾಗಿದೆ.

ಜ್ಞಾನಭಾರತಿ ಮತ್ತು ಪಟ್ಟಣಗೆರೆ ಮೆಟ್ರೊ ನಿಲ್ದಾಣಗಳ ನಡುವೆ ಜಲಾವೃತವಾದ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಕೆಟ್ಟು ನಿಂತಿದ್ದರಿಂದ ವಾಹನ ಸಂಚಾರ ಕೆಲ ಹೊತ್ತು ಸ್ಥಗಿತಗೊಂಡಿತು ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಮನೆಗಳಿಗೆ ನುಗ್ಗಿದ ಚರಂಡಿ ನೀರು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಭಾನುವಾರ ಮುಂಜಾನೆ 4 ಗಂಟೆ ಸುಮಾರಿಗೆ ಸುರಿದ ಭಾರಿ ಮಳೆಯಿಂದಾಗಿ ನಾಗದೇವನಹಳ್ಳಿ ಬಳಿಯ ರಾಮನಾಥನಗರ ಬಡಾವಣೆಯ ಸುಮಾರು 25 ಮನೆಗಳಿಗೆ ಮಳೆ ನೀರು ಹಾಗೂ ಚರಂಡಿ ನೀರು ನುಗ್ಗಿ, ನಿವಾಸಿಗಳು ಪರದಾಡುವಂತಾಯಿತು.

ಮನೆಗೆ ನುಗ್ಗಿದ ನೀರನ್ನು ಹೊರ ಹಾಕಲು ಜನರು ಹರಸಾಹಸಪಟ್ಟರು. ನೆಲಮಹಡಿಯಲ್ಲಿದ್ದ ಕೆಲವು ವಾಹನಗಳು ನೀರಿನಲ್ಲಿ ಮುಳುಗಿದವು. ನೀರು ತುಂಬಿಕೊಂಡಿದ್ದರಿಂದ ದಿಗಿಲು ಬಿದ್ದವರು, ಮನೆಯ ಮೊದಲ ಮಹಡಿಯಲ್ಲಿ ಆಶ್ರಯಪಡೆದರು.

ಉಲ್ಲಾಳು ವಾರ್ಡ್‌ನ ನಾಗದೇವನಹಳ್ಳಿಯ ಜ್ಞಾನ ಬೋಧಿನಿ ಮುಖ್ಯರಸ್ತೆಯ ಮೇಲ್ಭಾಗದಲ್ಲಿರುವ ಆರ್‌.ಆರ್.ಬಡಾವಣೆ, ಮರಿಯಪ್ಪನ ಪಾಳ್ಯದಿಂದ ಮಳೆ ನೀರು ಮತ್ತು ಒಳ ಚರಂಡಿ ನೀರು ರಾಮನಾಥನಗರ ಬಡಾವಣೆ ಮೂಲಕ ದುಬಾಸಿಪಾಳ್ಯ ಕೆರೆಗೆ ಸೇರುತ್ತದೆ. ಕೆರೆ ಸಮೀಪದಲ್ಲೇ ಬಡಾವಣೆಯಿದೆ. ನೀರು ಹರಿಯುವ ಮೋರಿ ಕಿರಿದಾಗಿದ್ದು ಹಾಗೂ ಅದರಲ್ಲಿ ಹೆಚ್ಚು ಹೂಳು ತುಂಬಿದ್ದರಿಂದ, ಮಳೆ ನೀರು ಸರಾಗವಾಗಿ ಹರಿಯದೇ, ಸುತ್ತಮುತ್ತಲಿನ ಬಡಾವಣೆಗಳಿಗೆ ನುಗ್ಗಿದೆ' ಎಂದು ನಾಗರಿಕರು ದೂರಿದರು.

ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಹಲವು ಮನೆಗಳಿಗೆ ನೀರು ನುಗ್ಗಿದ್ದರಿಂದ ನರಕಯಾತನೆ ಅನುಭವಿಸಿದ್ದೇವೆ ಎಂದು ಸ್ಥಳೀಯ ನಿವಾಸಿ ಜಗದೀಶ್ ಬೇಸರ ವ್ಯಕ್ತಪಡಿಸಿದರು.


ರಾಮನಾಥನಗರ ಬಡಾವಣೆಯ ರಸ್ತೆಯಲ್ಲಿ ನಿಂತಿರುವ ಮಳೆ ನೀರು

ಪಾರ್ಕಿಂಗ್ ಬದಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ. ದ್ವಿಚಕ್ರವಾಹನ, ಕಾರು ನೀರಿನಲ್ಲಿ ಮುಳುಗಿವೆ. ಮಳೆ ನೀರಿನ ಜೊತೆಗೆ ಹಾವು ನುಗ್ಗಿತ್ತು. ಉರಗ ರಕ್ಷಕರನ್ನು ಕರೆಯಿಸಿ ಹಾವನ್ನು ರಕ್ಷಣೆ ಮಾಡಲಾಯಿತು' ಎಂದು ಅವರು ವಿವರಿಸಿದರು.

'ಮುಂಜಾನೆ 6 ಗಂಟೆಯಲ್ಲಿ ಏಕಾಏಕಿ ಮಳೆ ನೀರಿನ ಜೊತೆ, ಚರಂಡಿನೀರು ಮನೆಗೆ ನುಗ್ಗಿತು. ಕುಟುಂಬಸ್ಥರೆಲ್ಲ ಮನೆಯ ಮಹಡಿಗೆ ಹೋಗಿ ಆಶ್ರಯ ಪಡೆದವು' ಎಂದು ಮತ್ತೊಬ್ಬ ನಿವಾಸಿ ನೀಲಾ ಘಟನೆಯನ್ನು ವಿವರಿಸಿದರು.

ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್, ಸಹಾಯಕ ಎಂಜಿನಿಯರ್ ನರಸಿಂಹ ನಾಯಕ್ ಸ್ಥಳಕ್ಕೆ ಭೇಟಿ ನೀಡಿ, ಜೆಸಿಬಿ ಮೂಲಕ ರಾಜಕಾಲುವೆ ಬಳಿ ಹೂಳು ತೆಗೆಸಿದರು. ನಂತರ ನೀರು ಸರಾಗವಾಗಿ ಕೆರೆಯತ್ತ ಹರಿಯಿತು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಿಬಿಎಂಪಿ ಜಂಟಿ ಆಯುಕ್ತ ಅಜಯ್‌.ವಿ, 'ಕೆರೆಗೆ ಸಮನಾಗಿ ಬಡಾವಣೆ ನಿರ್ಮಿಸಿರುವುದು, ರಾಜ ಕಾಲುವೆ ಪಥ ಬದಲಾಯಿಸಿದ್ದರಿಂದ ಸಮಸ್ಯೆಯಾಗಿದೆ. ಸರ್ವೆ ಇಲಾಖೆ, ಕಂದಾಯ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸುತ್ತೇವೆ' ಎಂದು ಭರವಸೆ ನೀಡಿದರು.

'ದೂರು ನೀಡಿದ್ದೆವು'

'ಮಳೆ ಬಂದಾಗ ಮೇಲ್ಭಾಗದ ಬಡಾವಣೆಗಳಿಂದ ಭಾರಿ ನೀರು ಹರಿದುಬರುತ್ತದೆ, ರಾಜಕಾಲುವೆ ಅಗಲ ಮಾಡಿ ಎಂದು ಈ ಹಿಂದೆ ಹಲವು ಬಾರಿ ಬಿಬಿಎಂಪಿ ಅಧಿಕಾರಿಗಳಿಗೆ ಹೇಳಿದ್ದೆವು. ಆದರೂ ಅವರು ಗಮನ ಹರಿಸಿರಲಿಲ್ಲ. ಹಿಂದೆ ಈ ವಾರ್ಡ್ ಕೆಂಗೇರಿಗೆ ಸೇರಿತ್ತು. ಅಧಿಕಾರಿಗಳ ಎಚ್ಚೆತ್ತುಕೊಂಡಿದ್ದರೆ ಈ ಸಮಸ್ಯೆಯಾಗುತ್ತಿರಲಿಲ್ಲ' ಎಂದು ಸ್ಥಳೀಯ ನಿವಾಸಿ ಎನ್‌.ಸಿ.ಕುಮಾರ್ ದೂರಿದರು.

ಬಡಾವಣೆ ನಿರ್ಮಾಣ ಮಾಡಿದ ಮಾಲೀಕರು ಸರಿಯಾದ ರಸ್ತೆ, ಒಳ ಚರಂಡಿ ಮಾಡಿದ್ದರೆ, ಇಂಥ ಅನಾಹುತ ವಾಗುತ್ತಿರಲಿಲ್ಲ ಎಂದು ನಿವಾಸಿಗಳು ಆರೋಪಿಸಿದರು.

ಕೆಂಪೇಗೌಡ ಬಡಾವಣೆ 3ನೇ ಹಂತ ಜಲಾವೃತ

ಕೆಂಗೇರಿ: ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯ ರಾಮಸಂದ್ರ ಹಾಗೂ ಹಿರೇಕೆರೆ ಕೋಡಿ ಬಿದ್ದ ಪರಿಣಾಮ ಕೆಂಪೇಗೌಡ ಬಡಾವಣೆಯ ಮೂರು ಮತ್ತು ನಾಲ್ಕನೇ ಹಂತದ ಪ್ರದೇಶಗಳು ಜಲಾವೃತಗೊಂಡವು.

ಕೆಂಪೇಗೌಡ ಬಡಾವಣೆಯ 3ನೇ ಹಂತದಲ್ಲಿ ರಾಜಕಾಲುವೆ ಮೇಲೆ ನಿರ್ಮಿಸಿರುವ ಸೇತುವೆಯ ಮೇಲೂ ನೀರು ಹರಿಯುತ್ತಿದ್ದ ಪರಿಣಾಮ ಸೂಲಿಕೆರೆ, ರಾಮೋಹಳ್ಳಿ, ತಾವರೆಕೆರೆ ಕಡೆ ಸಾಗಬೇಕಿದ್ದ ವಾಹನ ಸವಾರರು ಬದಲಿ ಮಾರ್ಗ ಆಶ್ರಯಿಸುವಂತಾಯಿತು.

ಮಧ್ಯಾಹ್ನದವರೆಗೂ ಮಳೆ ನೀರಿನ ಪ್ರಮಾಣ ಕಡಿಮೆಯಾಗದೆ ಸುತ್ತಮುತ್ತಲ ಜಮೀನಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು. ಅವೈಜ್ಞಾನಿಕ ಕಾಮಗಾರಿಯಿಂದ ಮಳೆ ನೀರು ಸರಾಗವಾಗಿ ಸಾಗಲು ಸಾಧ್ಯವಾಗುತ್ತಿಲ್ಲ ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹರೀಶ್ ದೂರಿದರು.

ಭಾನುವಾರ ಮುಂಜಾನೆ ಸುರಿದ ಭಾರಿ ಮಳೆಗೆ ದುಬಾಸಿಪಾಳ್ಯ ಕೆರೆ ಬಳಿಯ ಬೃಂದಾನ ಲೇಔಟ್ ಅಕ್ಷರಶಃ ದ್ವೀಪವಾಗಿ ಮಾರ್ಪಟ್ಟಿತ್ತು. ಹತ್ತಾರು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು.

ರಸ್ತೆ ಬದಿಯ ಹೋಟೆಲ್ ಹಾಗೂ ಕಿರಾಣಿ ಅಂಗಡಿ ಸೇರಿದಂತೆ ಹಲವು ಕಾರುಗಳ ಒಳಗೆ ನೀರು ನುಗ್ಗಿದೆ. ಮಳೆ ನೀರಿನೊಂದಿಗೆ ಹಾವೊಂದು ಮನೆಯ ಅಂಗಳ ಸೇರಿದ ಪ್ರಸಂಗವೂ ನಡೆಯಿತು. ಲೇಔಟ್‌ನ ಕೆಲ ಭಾಗಗಳಲ್ಲಿ ಸುಮಾರು ಎರಡರಿಂದ ಮೂರು ಅಡಿಯವರೆಗೂ ನೀರು ನಿಂತ ಪರಿಣಾಮ ದ್ವಿಚಕ್ರ ಹಾಗೂ ಕಾರುಗಳಿಗೆ ಹಾನಿಯಾಗಿದೆ.

ಮಂತ್ರಿ ಮಾಲ್ ಎದುರುಗಡೆ ಇರುವ ಸಂಪಿಗೆ ರಸ್ತೆಯಲ್ಲಿ ಮಳೆ ನೀರು ತುಂಬಿ ಹರಿಯಿತು
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಹೆಸರಘಟ್ಟ: ರಸ್ತೆಗೆ ಉರುಳಿದ ಮರ

ಹೆಸರಘಟ್ಟ: ನಿರಂತರವಾಗಿ ಸುರಿದ ಮಳೆಯಿಂದಾಗಿ ಹೆಸರಘಟ್ಟ ಮುಖ್ಯ ರಸ್ತೆಯ ಶ್ಯಾಮಭಟ್ಟರಪಾಳ್ಯ ಸಮೀಪ ಮ್ಯಾಗ್ನಂ ಸ್ಕೂಲ್ ಬಳಿ ಬೃಹತ್ ಮರವೊಂದು ರಸ್ತೆಯ ಮೇಲೆ ಉರುಳಿಬಿದ್ದಿತು.

ಇದರಿಂದಾಗಿ ಸುಮಾರು ಎರಡು ಕಿ.ಮೀ ವರೆಗೂ ಒಂದು ತಾಸಿಗೂ ಹೆಚ್ಚು ಸಂಚಾರ ದಟ್ಟಣೆ ಉಂಟಾಗಿ ವಾಹನ ಸವಾರರು ಪರದಾಡು ವಂತಾಯಿತು. ಸ್ಥಳೀಯರ ನೆರವಿನಿಂದ ಜೆಸಿಬಿ ಮೂಲಕ ಮರವನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಲುಲು ಮಾಲ್ ಬಳಿ ಖೋಡೆ ಅಂಡರ್‌ಪಾಸ್‌ನಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕಾಯಿತು

ಮನೆಗಳು, ಕಾರ್ಖಾನೆಗೆ ಮಳೆ ನೀರು

ಬೊಮ್ಮನಹಳ್ಳಿ: ಶನಿವಾರ ತಡರಾತ್ರಿ ಮತ್ತು ಭಾನುವಾರ ಸುರಿದ ಮಳೆಯಿಂದಾಗಿ ಬನ್ನೇರುಘಟ್ಟ ರಸ್ತೆಯಲ್ಲಿರುವ ನಾರಾಯಣ ನೇತ್ರಾಲಯ ಪಕ್ಕದ ಓ.ಆರ್‌.ಟೆಕ್ ಟೂಲ್ಸ್ ಕಂಪನಿ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿರುವ ಮನೆಗಳಿಗೆ ನೀರು ನುಗ್ಗಿತು.

ಬಡಾವಣೆ ನಿವಾಸಿಗಳು ಮನೆಗೆ ನುಗ್ಗಿದ ನೀರನ್ನು ಹೊರ ಹಾಕುತ್ತಾ ರಾತ್ರಿ ಪೂರಾ ಜಾಗರಣೆ ಮಾಡುವಂತಾಯಿತು. ಏಕಾಏಕಿ ನೀರು ನುಗ್ಗಿದ್ದರಿಂದ ಟೂಲ್ಸ್ ಕಂಪನಿಯ ಯಂತ್ರಗಳು, ಪರಿಕರಗಳು, ದಾಸ್ತಾನು ಮಾಡಿದ್ದ ಕಚ್ಚಾ ವಸ್ತುಗಳು ನೀರಿನಲ್ಲಿ ತೊಯ್ದು ಹೋದವು.

ಬೇಗೂರು ರಸ್ತೆ, ಬನ್ನೇರುಘಟ್ಟ ರಸ್ತೆಗಳಲ್ಲಿ ಎರಡು ಅಡಿಗೂ ಹೆಚ್ಚು ನೀರು ನಿಂತು ಸಂಚಾರಕ್ಕೆ ಅಡ್ಡಿಯಾಯಿತು. ಎಂದಿನಂತೆ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ನೀರು ನಿಂತು ಸಂಚಾರ ದಟ್ಟಣೆ ಹೆಚ್ಚಾಗಿತ್ತು. 'ಇಲ್ಲಿ ಪ್ರತಿ ಮಳೆಯಲ್ಲೂ ನೀರು ನಿಲ್ಲುತ್ತದೆ. ಆದರೆ ಬಿಬಿಎಂಪಿ ಅಧಿಕಾರಿಗಳಿಗೆ ಇದು ಕಣ್ಣಿಗೆ ಕಾಣುತ್ತಿಲ್ಲವೇ? ಎಂದು ವಾಹನ ಸವಾರ ಕೆ.ಸಿ.ಪ್ರತಾಪ್ ಆಕ್ರೋಶ ವ್ಯಕ್ತಪಡಿಸಿದರು.

ಟೂಲ್ಸ್ ಕಂಪನಿಯ ಮಾಲೀಕ ಗೋಪಿನಾಥ್ 'ನಿನ್ನೆ ರಾತ್ರಿ ಸುರಿದ ಮಳೆಯಿಂದ ಕಾರ್ಖಾನೆಯಲ್ಲಿ ಸಾಕಷ್ಟು ವಸ್ತುಗಳಿಗೆ ಹಾನಿಯಾಗಿದೆ. ಮುಖ್ಯ ರಸ್ತೆಯಲ್ಲಿ ಮೆಟ್ರೊ ಕಾಮಗಾರಿ ನಡೆಯುತ್ತಿದ್ದು, ಮಳೆಯ ನೀರು ಸೇರುವ ಕಾಲುವೆ ಸಂಪರ್ಕ ಕಡಿತಗೊಂಡಿದೆ. ಹೀಗಾಗಿ ಮಳೆ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿ ಬರುತ್ತದೆ' ಎಂದು ಹೇಳಿದರು.

ನಮ್ಮ ಕಾರ್ಖಾನೆಯೂ ತಗ್ಗು ಪ್ರದೇಶದಲ್ಲಿ ಇರುವುದರಿಂದ ಪ್ರತಿ ಬಾರಿಯೂ ಮಳೆ ನೀರು ಫ್ಯಾಕ್ಟರಿ ಒಳಗೆ ಬರುತ್ತದೆ. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಬಿಬಿಎಂಪಿ ಅಧಿಕಾರಿಗಳಿಗೆ ಲಿಖಿತ ದೂರು ದಾಖಲಿಸಿದರೂ ಅಧಿಕಾರಿಗಳು ಇತ್ತ ಸುಳಿದಿಲ್ಲ, ಶಾಸಕರೂ ಇತ್ತ ಗಮನಹರಿಸಿಲ್ಲ ' ಎಂದು ದೂರಿದರು.

ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಹೊಸದಾಗಿ ಹಾಕಲಾಗಿದ್ದ ಡಾಂಬರು ಭಾನುವಾರ ಸುರಿದ ಭಾರಿ ಮಳೆಗೆ ಕೊಚ್ಚಿ ಹೋಗಿದೆ ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES
Accommodation Available
Commercial
WAREHOUSE SPACE IMMEDIATELY AVAILABLE Location: Near Hennur/ Hebbal Space: 30000 sqft Contact No. 9004476233

BUILDERS ESSENTIAL
Roofing Materials
WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

JOB OPPORTUNITIES
Multiple Vacancy
JOB REQUIREMENT (Full time) Delivery Executives (Biker) Night Shift: Operation Executives Data Entry operator Helper's Part time Job Location Near Jakkur Aero Drum Contact: 8147394231/ 8296514619

BUSINESS
Business Offers
Finance
MSME LOANS: We arrange MSME Business Loans against your existing or New Businesses also.Contact:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕಾಂಪೌಂಡ್ ಕುಸಿತ

ಬನಶಂಕರಿ 6ನೇ ಹಂತದಲ್ಲಿ ಬಿಡಿಎ ಬಡಾವಣೆಯ ಪಕ್ಕದಲ್ಲಿ ಹೊಸತಾಗಿ ನಿರ್ಮಾಣಗೊಂಡಿರುವ ಶ್ರೀವಾರಿ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಕುಸಿದಿದೆ.

ಅಪಾರ್ಟ್‌ಮೆಂಟ್‌ನ ಸುತ್ತ ಸುಮಾರು 12 ಅಡಿ ಮಣ್ಣು ತುಂಬಿಸಿ ಕಾಂಪೌಂಡ್ ನಿರ್ಮಿಸಲಾಗಿದೆ. ಕಾಂಪೌಂಡ್‌ಗೆ ಪಿಲ್ಲರ್‌ಗಳನ್ನು ನಿರ್ಮಿಸದೇ ಇರುವುದರಿಂದ ಮತ್ತು ಮಣ್ಣು ಸರಿಯಾಗಿ ತುಂಬಿಸದ ಕಾರಣ ಮಳೆಗೆ ಸುಮಾರು 20 ಅಡಿ ಉದ್ದ ಕಾಂಪೌಂಡ್ ಕುಸಿದಿದೆ. ಪಕ್ಕದ ತೆಂಗಿನ ಮರಕ್ಕೆ ಆತುಕೊಂಡು ನಿಂತಿದೆ. ಮಳೆ ಮುಂದುವರಿದಿದ್ದು, ಅಪಾರ್ಟ್‌ಮೆಂಟ್‌ಗೂ ಅಪಾಯ ಉಂಟಾಗುವ ಸಾಧ್ಯತೆ ಇದೆ ಎಂದು ಅಲ್ಲಿನ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಬನಶಂಕರಿ 6ನೇ ಹಂತದಲ್ಲಿರುವ ಶ್ರೀವಾರಿ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಕುಸಿದಿದೆ

ಸಂಗೀತ ತಜ್ಞ ಚಿದಂಬರ ಕಾಕತ್ಕರ್ ಹೇಳಿಕೆ

'ಚಿತ್ರಗೀತೆಗೆ ವಿಜಯಭಾಸ್ಕರ್ ಹೊಸತನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಗೀತ ಸಾಮ್ರಾಟ್ ವಿಜಯಭಾಸ್ಕರ್ ಅವರು ಕನ್ನಡ ಚಿತ್ರಗೀತೆಗಳಿಗೆ ಹೊಸತನವನ್ನು ನೀಡಿ, ಚಿತ್ರ ಸಂಗೀತವನ್ನು ಶ್ರೀಮಂತಗೊಳಿಸಿದರು' ಎಂದು ಸಂಗೀತ ತಜ್ಞ ಚಿದಂಬರ ಕಾಕತ್ಕರ್ ಹೇಳಿದರು.

ಸಂಗೀತ ಸಾಮ್ರಾಟ್ ವಿಜಯ ಭಾಸ್ಕರ್ ಜನ್ಮಶತಮಾನೋತ್ಸವ ಸಮಿತಿ ಭಾನುವಾರ ಆಯೋಜಿಸಿದ್ದ 'ಚಿತ್ರರಂಗಕ್ಕೆ ವಿಜಯಭಾಸ್ಕರ್ ಅವರ ಕೊಡುಗೆಗಳು' ಎಂಬ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ವಿಜಯಭಾಸ್ಕರ್ ಅವರು ನಿರ್ದೇಶಿಸಿರುವ ಹಾಡುಗಳನ್ನು ನಾನು ಆಕಾಶವಾಣಿಯಲ್ಲಿ ಕೇಳಿ ಬೆಳೆದಿದ್ದೇನೆ. ಕನ್ನಡದಲ್ಲಿ ಬಂದ ಸಂಪೂರ್ಣ ರಾಮಾಯಣ ಚಿತ್ರಕ್ಕೂ ವಿಜಯಭಾಸ್ಕರ್ ಅವರು ಸಂಗೀತ ನಿರ್ದೇಶನ ಮಾಡಿದ್ದರು. 1963ರಲ್ಲಿ ತೆರೆಕಂಡ ತುಕಾರಾಮ ಚಿತ್ರದ 'ಜಯತು ಜಯ ವಿಠಲ' ಎಂಬ ಹಾಡು ಇಂದಿಗೂ ಪ್ರಸ್ತುತವಾಗಿದೆ'ಎಂದು ಮೆಲುಕು ಹಾಕಿದರು.

ಸಂಗೀತ ಸಾಮ್ರಾಟ್ ವಿಜಯಭಾಸ್ಕರ್ ಜನ್ಮ ಶತಮಾನೋತ್ಸವ ಭಾನುವಾರ ಆಯೋಜಿಸಿದ್ದ 'ಚಿತ್ರರಂಗಕ್ಕೆ ವಿಜಯಭಾಸ್ಕರ್ ಅವರ ಕೊಡುಗೆಗಳು' ಎಂಬ ಗೋಷ್ಠಿಯಲ್ಲಿ ಬಿ.ಕೆ. ಸುಮಿತ್ರಾ, ದೊಡ್ಡರಂಗೇಗೌಡ, ಚಿದಂಬರ ಕಾಕತ್ಕರ್ ಮತ್ತು ಎನ್‌.ಎಸ್ ಶ್ರೀಧರ್ ಮೂರ್ತಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಚಲನಚಿತ್ರ ನಟ ಶ್ರೀನಾಥ್ ಮಾತನಾಡಿ, 'ವಿಜಯಭಾಸ್ಕರ್ ಅವರು ನನ್ನ ಹಲವಾರು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಅವರಿಗೆ ಸಾಹಿತ್ಯದ ಕಡೆಗೂ ಹೆಚ್ಚು ಒಲವಿತ್ತು. ನಿರ್ದೇಶಕ ಪುಟ್ಟಣ್ಣ ಕಣಗಾಲ್ ಮತ್ತು ವಿಜಯಭಾಸ್ಕರ್ ಜೋಡಿ ಬಹಳ ಚೆನ್ನಾಗಿತ್ತು. ಅದಕ್ಕೆ ಉತ್ತಮ ಉದಾಹರಣೆ ಎಂದರೆ 'ನೀನೇ ಸಾಕಿದ ಗಿಣಿ' ಹಾಡು ಇಂದಿಗೂ ಜನ ಮಾನಸದಲ್ಲಿ ಉಳಿದಿರುವುದು' ಎಂದು ನೆನಪಿಸಿಕೊಂಡರು.

ಇದೇ ಸಂದರ್ಭದಲ್ಲಿ ಎನ್.ಎಸ್. ಶ್ರೀಧರ ಮೂರ್ತಿಯವರು ಬರೆದಿರುವ ವಿಜಯಭಾಸ್ಕರ್ ಅವರ ಜೀವನ ಮತ್ತು ಸಾಧನೆ ಕುರಿತ 'ಎಲ್ಲೆಲ್ಲೂ ಸಂಗೀತವೇ' ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಗಾಯಕಿ ಬಿ.ಕೆ. ಸುಮಿತ್ರಾ, ಸಾಹಿತಿ ದೊಡ್ಡರಂಗೇಗೌಡ, ಚಲನಚಿತ್ರ ನಟ ಶ್ರೀಧರ್ ಉಪಸ್ಥಿತರಿದ್ದರು.

‘ದುಡಿಯುವ ಮಾನಿನಿಯರ ಮಹಾಸಂಗಮ’ ಕಾರ್ಯಕ್ರಮ

ಕನಿಷ್ಠ ವೇತನಕ್ಕೆ ಕಾರ್ಮಿಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನವು ಸಿದ್ಧ ಉಡುಪು ಕಾರ್ಖಾನೆಗಳಲ್ಲಿ (ಗಾರ್ಮೆಂಟ್ಸ್) ಕೆಲಸ ಮಾಡುವವರಿಗೆ ಸಿಗುತ್ತಿಲ್ಲ. ತಿಂಗಳಿಗೆ ₹ 12,223 ಮಾತ್ರ ನೀಡಲಾಗುತ್ತಿದೆ. ಕನಿಷ್ಠ ₹ 25 ಸಾವಿರ ನೀಡಬೇಕು ಎಂದು ಗಾರ್ಮೆಂಟ್ಸ್ ಕಾರ್ಮಿಕರು ಒತ್ತಾಯಿಸಿದ್ದಾರೆ.

ಮುನ್ನಡೆ ಸಾಮಾಜಿಕ ಸಂಸ್ಥೆ, ಸಮೃದ್ಧಿ ಮತ್ತು ಸಾಧನ ಸಂಘಟನೆಗಳು ಭಾನುವಾರ ಹಮ್ಮಿಕೊಂಡಿದ್ದ ‘ದುಡಿಯುವ ಮಾನಿನಿಯರ ಮಹಾಸಂಗಮ’ ಕಾರ್ಯಕ್ರಮದಲ್ಲಿ ಬೇಡಿಕೆಗಳನ್ನು ಮಂಡಿಸಲಾಯಿತು.

‘ಕರ್ನಾಟಕ ಕಾರ್ಖಾನೆಗಳ(ತಿದ್ದುಪಡಿ) ಕಾಯ್ದೆ–2023’ ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಣೆ ಮಾಡುವ ಬದಲು ಜೀತದಾಳುಗಳನ್ನಾಗಿ ಮಾರ್ಪಡಿಸಿದೆ. ತಿದ್ದುಪಡಿ ಕಾಯ್ದೆಯನ್ನು ರದ್ದು ಮಾಡಬೇಕು. ಎಂಟು ಗಂಟೆ ದುಡಿಮೆ ಮಾತ್ರ ಮಾಡಿಸಬೇಕು. ಗಾರ್ಮೆಂಟ್ ಕಾರ್ಮಿಕರಿಗೆ ಮತ್ತು ವಲಸೆ ಕಾರ್ಮಿಕರಿಗೆ ಬಿಪಿಎಲ್ ಪಡಿತರ ಚೀಟಿ ನೀಡಬೇಕು. ಕಾರ್ಮಿಕರಿಗೆ ಉಚಿತ ವಸತಿ ವ್ಯವಸ್ಥೆ ಮಾಡಿಕೊಡಬೇಕು. ಅಲ್ಲಿವರೆಗೆ ಮನೆ ಬಾಡಿಗೆ ಭತ್ಯೆ ನೀಡಬೇಕು ಎಂದು ಆಗ್ರಹಿಸಿದರು.

ಕೆಲವೇ ಕಾರ್ಖಾನೆಗಳಲ್ಲಿ ಉಪಾಹಾರ ಗೃಹದ ವ್ಯವಸ್ಥೆ ಇದ್ದು, ಎಲ್ಲ 1,200 ಕಾರ್ಖಾನೆಗಳಲ್ಲಿಯೂ ಕ್ಯಾಂಟೀನ್ ವ್ಯವಸ್ಥೆ ಮಾಡಬೇಕು. ಕಾರ್ಮಿಕರ ಮಕ್ಕಳನ್ನು 6 ವರ್ಷದವರೆಗೆ ಪೊರೆಯಲು ಶಿಶುಪಾಲನಾ ಕೇಂದ್ರ ತೆರೆಯಬೇಕು. ಆಂತರಿಕ ಸಮಿತಿಯು ಕಾರ್ಖಾನೆ ಮಾಲೀಕರ ಪರವಾಗಿ ಇರುವುದರಿಂದ ಸರಿಯಾಗಿ ಕಾರ್ಯ-ನಿರ್ವಹಿಸುತ್ತಿಲ್ಲ. ಲೈಂಗಿಕ ಕಿರುಕುಳಗಳು ಕಡಿಮೆಯಾಗಿಲ್ಲ. ಅಧಿಕಾರಿಗಳು ಮಧ್ಯ-ಪ್ರವೇಶಿಸಿ ಸಮಿತಿ ಬಲಪಡಿಸಬೇಕು. ಕಾರ್ಮಿಕರ ಪರ ಪ್ರತಿನಿಧಿಗಳನ್ನೂ ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಹೆಚ್ಚುವರಿ ಕೆಲಸಕ್ಕೆ ಸಮನಾಗಿ ವೇತನ ನೀಡಲು ಸರ್ಕಾರ ಸೂಚಿಸಬೇಕು. ಕಾರ್ಮಿಕರಲ್ಲಿ ಶೇ 85ರಷ್ಟು ಮಹಿಳೆಯರೇ ಆಗಿರುವುದರಿಂದ ಉಚಿತವಾಗಿ ಸ್ಯಾನಿಟರಿ ಪ್ಯಾಡ್ ವಿತರಿಸಬೇಕು. ಸೇವಾವಧಿಗೆ ತಕ್ಕಂತೆ ಮುಂಬಡ್ತಿ, ವೇತನ ಹೆಚ್ಚಳ ಸೌಲಭ್ಯ ನೀಡಬೇಕು. ಕಾರ್ಮಿಕರ ಸಂಘ ರಚಿಸಿದರೆ ಬೆದರಿಸಲಾಗುತ್ತಿದೆ. ಗ್ರಾಚ್ಯುಯಿಟಿ ತಪ್ಪಿಸಲು ಕಾರ್ಖಾನೆಗಳನ್ನು ರಾತ್ರೋ ರಾತ್ರಿ ಮುಚ್ಚುತ್ತಾರೆ. ಸರ್ಕಾರ ಆಗ ಕಾರ್ಮಿಕರ ಹಿತ ಕಾಪಾಡಬೇಕು ಎಂದು ಬೇಡಿಕೆಗಳನ್ನು ಮುಂದಿಟ್ಟರು.

ಸೆಂಟರ್ ಫಾರ್ ಲೇಬರ್ ಸ್ಟಡೀಸ್ ನಿರ್ದೇಶಕ ಬಾಬು ಮ್ಯಾಥ್ಯು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿ ರಾಗಿಣಿ, ಮುನ್ನಡೆ ಸಾಮಾಜಿಕ ಸಂಸ್ಥೆಯ ಅಧ್ಯಕ್ಷೆ ಇಶ್ರತ್ ನಿಸಾರ್, ಪ್ರಧಾನ ಕಾರ್ಯದರ್ಶಿ ಯಶೋದಾ ಪಿ.ಎಚ್., ಸಮೃದ್ಧಿ ಟ್ರಸ್ಟ್ ನಿರ್ದೇಶಕ ಬಿ. ಶಿವರಾಜೇಗೌಡ, ಸಾಧನ ಟ್ರಸ್ಟ್ ನಿರ್ದೇಶಕಿ ಕೆ. ಗಾಯತ್ರಿ, ಸಿಐಟಿಯು ಮುಖಂಡ ಪ್ರತಾಪ್ ಸಿಂಹ ಭಾಗವಹಿಸಿದ್ದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ದುಡಿಯುವ ಮಾನಿನಿಯರ ಮಹಾಸಂಗಮ’ ಕಾರ್ಯಕ್ರಮದಲ್ಲಿ ಮುನ್ನಡೆ ಕಲಾತಂಡ ಮತ್ತು ಕಾರ್ಮಿಕರು ‘ಕಾರ್ಮಿಕರ ಸಮಸ್ಯೆ’ ಬಗ್ಗೆ ಕಿರು ನಾಟಕ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ಸಚಿವರ ಗೈರು

ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಹಾಸಂಗಮ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾರ್ಮಿಕರ ಬೇಡಿಕೆಗಳ ಪತ್ರವನ್ನು ಸ್ವೀಕರಿಸಬೇಕಿತ್ತು. ಅವರು ಬಂದಿರಲಿಲ್ಲ. ದಿನ ನಿಗದಿ ಮಾಡಿ ಅವರ ಕಚೇರಿಗೆ ತೆರಳಿ ಬೇಡಿಕೆಗಳನ್ನು ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಮಾವೇಶದಲ್ಲಿ ಸಮುದಾಯದ ಮುಖಂಡರ ಒತ್ತಾಯ

‘ಹಳ್ಳಿಕಾರ ಜನಾಂಗ ಪ್ರವರ್ಗ1ಕ್ಕೆ ಸೇರಿಸಿ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಹಳ್ಳಿಕಾರ ಜನಾಂಗವನ್ನು ಪ್ರವರ್ಗ -1 ಕ್ಕೆ ಸೇರಿಸಿ, ಸಮುದಾಯದ ಪ್ರಗತಿಗೆ ನೆರವಾಗುವಂತೆ ಕರ್ನಾಟಕ ರಾಜ್ಯ ಹಳ್ಳಿಕಾರರ ಸಂಘದ ಉಪಾಧ್ಯಕ್ಷ ಕೆ.ಎಂ.ನಾಗರಾಜ್ ಸರ್ಕಾರವನ್ನು ಒತ್ತಾಯಿಸಿದರು.

ನಾಗರಬಾವಿಯಲ್ಲಿ ನಡೆದ ಬೆಂಗಳೂರು ನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲಾ ಮಟ್ಟದ ಹಳ್ಳಿಕಾರ ಜನಾಂಗದ ಸಮಾವೇಶದ ಅಧ್ಯಕ್ಷತೆ-ವಹಿಸಿ ಮಾತನಾಡಿದರು. ಹಳ್ಳಿಕಾರ ಜನಾಂಗದವರು ರಾಜ್ಯದ ಸುಮಾರು 10 ಜಿಲ್ಲೆಗಳಲ್ಲಿ, ಕಾಡಂಚಿನಲ್ಲಿ ಪಶುಪಾಲನೆ ಮಾಡುತ್ತಾ ಜೀವನ ಸಾಗಿಸುತ್ತಿದ್ದಾ-ರೆ. ಜನಾಂಗದವರ ಜೀವನಮಟ್ಟ ಇಂದಿಗೂ ಸುಧಾರಿಸಿಲ್ಲ. ಈ ಹಿನ್ನೆಲೆಯಲ್ಲಿ ಸಮುದಾಯಕ್ಕೆ ಶಕ್ತಿ ತುಂಬಲು, ಹಿಂದುಳಿದ ವರ್ಗಕ್ಕೆ ಸೇರಿಸುವಂತೆ ಸರ್ಕಾರವನ್ನು ಒತ್ತಾಯಿಸುವುದಕ್ಕಾಗಿ ಇದೇ 27 ರಂದು ಜನಾಂಗದ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗುವು-ದು’ ಎಂದರು.

‘ಹಳ್ಳಿಕಾರ ತಳಿಯ ಹಸು ಮತ್ತು ಎತ್ತುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಹಿಂದೆ ಮೈಸೂರು ಮಹಾರಾಜರು ಹಳ್ಳಿಕಾರ ಪಶುಗಳ ಪೋಷಣೆಗಾಗಿ ನೀಡಿದ್ದ ಜಮೀನನ್ನು ಜನಾಂಗಕ್ಕೆ ಮರಳಿ ನೀಡಬೇಕು’ ಎಂದು ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯ ಸಮಿತಿಯ ಪದಾಧಿಕಾರಿ ಗಳಾದ ನಾರಾಯಣಪ್ಪ, ಟಿ. ಶ್ರೀನಿವಾಸ್, ಎಲ್. ನಾರಾಯಣ ಮೂರ್ತಿ, ನಾಗರಾಜು, ಎಚ್.ಎನ್.ಮಹಾಲಿಂಗಯ್ಯ, ಕೆ.ಸಿ. ಚಿಕ್ಕಣ್ಣಯ್ಯ, ಎಂ.ಮಾರುತಿ, ಎಂ.ಪಿ. ಜಯರಾಮ್, ಸಿ.ದಾಸೇಗೌಡ, ಭೈರಪ್ಪ ಮಾತನಾಡಿದರು.

ನಾಗರಬಾವಿಯಲ್ಲಿ ನಡೆದ ಹಳ್ಳಿಕಾರ ಜನಾಂಗದ ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಕೆ.ಎಂ.ನಾಗರಾಜ್ ಮಾತನಾಡಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

ಸುಮಂಗಲಿ ರಸ್ತೆಯ ಉದ್ಯಾನದ ಮುಂಭಾಗದಲ್ಲಿ ಹಾಕಿರುವ ಕಸ

‘ಕಸದ ರಾಶಿ ತೆರವುಗೊಳಿಸಿ’

ಹೆಬ್ಬಾಳದ ಸುಮಂಗಲಿ ಸೇವಾಶ್ರಮದ ಬಳಿ ಇರುವ ಉದ್ಯಾನದ ಮುಂಭಾಗದ ರಸ್ತೆಯಲ್ಲಿ ಕಸ ಹಾಕಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಪ್ರತಿದಿನ ಉದ್ಯಾನಕ್ಕೆ ಬರುವ ವಾಯುವಿಹಾರಿಗಳು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಕೂಡಲೇ ಇಲ್ಲಿನ ಕಸ ತೆರವುಗೊಳಿಸುವ ಮೂಲಕ ಸ್ವಚ್ಛ ಮತ್ತು ಸುಂದರ ನಗರ ನಿರ್ಮಿಸಬೇಕು.

ಜಿ.ಎಸ್.ಮಂಜುನಾಥ್, ಹೆಬ್ಬಾಳ

ಬನಶಂಕರಿಯಿಂದ ಮೈಸೂರು ರಸ್ತೆಗೆ ಸಂಪರ್ಕಿಸುವ ರಸ್ತೆಯ ಪಾದಚಾರಿ ಮಾರ್ಗದ ದುಃಸ್ಥಿತಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ನಾಯಂಡಹಳ್ಳಿ ಜಂಕ್ಷನ್‌ನ ಬನಶಂಕರಿ ಕಡೆಯಿಂದ ಮೈಸೂರು ರಸ್ತೆಯನ್ನು ಸಂಪರ್ಕಿಸುವ ಸ್ಥಳದಲ್ಲಿ ವೃಷಭಾವತಿ ಕಾಲುವೆಗೆ ಸೇತುವೆ ನಿರ್ಮಿಸಲಾಗಿದೆ. ಈ ರಸ್ತೆಯ ಎರಡೂ ಬದಿಯಲ್ಲಿ ಎರಡು ಅಡಿಯ ಪಾದಚಾರಿ ಮಾರ್ಗ ನಿರ್ಮಿಸ-ಲಾಗಿತ್ತು. ಆದರೆ, ಇತ್ತೀಚೆಗೆ ಕೆಲವರು ವಿದ್ಯುತ್ ಸಂಪರ್ಕ ಪಡೆಯಲು ಈ ಪಾದಚಾರಿ ಮಾರ್ಗವನ್ನು ಅಗೆದು ಹಾಗೆಯೇ ಬಿಟ್ಟಿದ್ದಾರೆ. ಇದರಿಂದ, ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಈ ಹಾದಿಯಲ್ಲಿ ಓಡಾಡುವುದು ಕಷ್ಟವಾಗಿದ್ದು, ಮುಖ್ಯರಸ್ತೆಯಲ್ಲಿ ಸಂಚರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ಎಂ. ಕೃಷ್ಣಪ್ಪ, ಪಂತರಪಾಳ್ಯ

ಬನಶಂಕರಿಯ ಬಿಡಿಎ ಕಾಂಪ್ಲೆಕ್ಸ್ ಮುಂಭಾಗದ ರಸ್ತೆ ಹಾಳಾಗಿರುವುದು

‘ರಸ್ತೆ ದುರಸ್ತಿಗೊಳಿಸಿ’

ಬನಶಂಕರಿ ಬಿಡಿಎ ಕಾಂಪ್ಲೆಕ್ಸ್ ಬಳಿ ಇರುವ ರೆಫರಲ್ ಆಸ್ಪತ್ರೆ ಮುಂಭಾಗದ ರಸ್ತೆ ಸಂಪೂರ್ಣ ಹಾಳಾಗಿದೆ. ಇದೇ ರಸ್ತೆಗೆ ಜಲ್ಲಿ ಹಾಕಿರುವುದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿ-ದೆ. ಇದರಿಂದ, ಆಸ್ಪತ್ರೆಗೆ ಬರುವ ರೋಗಿಗಳಿಗೂ ಸಮಸ್ಯೆ ಆಗುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಮೋಹನ್ ಕುಮಾರ್, ಬನಶಂಕರಿ

ಉದ್ಯಾನದಲ್ಲಿನ ಆಟಿಕೆಗೆ ತುಕ್ಕು ಹಿಡಿದಿರುವುದು.

‘ಆಟಿಕೆಗಳನ್ನು ದುರಸ್ತಿ ಮಾಡಿ’

ರಾಮಗೊಂಡನಹಳ್ಳಿಯ ಹಗಡೂರು ವಾರ್ಡ್‌ನ ವೈಟ್‌ಫೀಲ್ಡ್ ಇನ್ನರ್ ಸರ್ಕ-ಲ್‌ನಲ್ಲಿರುವ ಉದ್ಯಾನದಲ್ಲಿರುವ ಮಕ್ಕಳ ಆಟಿಕೆಗಳಿಗೆ ತುಕ್ಕು ಹಿಡಿದಿದೆ. ಉದ್ಯಾ-ನದಲ್ಲಿರುವ ಜೋಕಾಲಿ, ಜಾರುಬಂಡಿ ಸೇರಿದಂತೆ ವಿವಿಧ ಆಟಿಕೆಗಳನ್ನು ಬಳಸಲು ಪ್ರತಿನಿತ್ಯ ನೂರಾರು ಮಕ್ಕಳು ಬರುತ್ತಾರೆ. ತುಕ್ಕು ಹಿಡಿದ ಆಟಿಕೆಗಳಲ್ಲಿ ಮಕ್ಕಳು ಆಟ ಆಡುತ್ತಿದ್ದು, ಏನಾದರೂ ಅನಾಹುತವಾಗುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲಿನ ಆಟಿಕೆಗಳನ್ನು ಬದಲಾಯಿಸಬೇಕು.

ರಾಜ್ ಕುಮಾರ್ ಕೆ., ರಾಮಗೊಂಡನಹಳ್ಳಿ

‘ಬಾಗಿದ ಟ್ರಾಫಿಕ್ ಸಿಗ್ನಲ್ ಕಂಬ’

ಕೆ.ಆರ್. ಪುರ ಸಂಚಾರ ವಿಭಾಗದ ಪೊಲೀಸ್ ಠಾಣೆಯ ಮುಂದೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿ–75ರಲ್ಲಿ ಟ್ರಾಫಿಕ್ ಸಿಗ್ನಲ್ ಕಂಬವೊಂದು ವಾಲಿದೆ. ಇಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ವಾಲಿರುವ ಟ್ರಾಫಿಕ್ ಸಿಗ್ನಲ್ ಕಂಬವು ಅಪಘಾತಗಳಿಗೆ ಕಾರಣವಾಗುವ ಸಾಧ್ಯತೆ ಇದೆ. ಜೊತೆಗೆ ಈ ಪ್ರದೇಶದಲ್ಲಿರುವ ಶಾಲಾ–ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳು ಜೀವ ಭಯದಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಾಲಿದ ಟ್ರಾಫಿಕ್ ಸಿಗ್ನಲ್ ಕಂಬವನ್ನು ಸರಿಪಡಿಸುವ ಮೂಲಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ

ಕೆ.ಆರ್. ಪುರದಲ್ಲಿ ರಾಷ್ಟ್ರೀಯ ಹೆದ್ದಾರಿ–75ರಲ್ಲಿ ಟ್ರಾಫಿಕ್ ಸಿಗ್ನಲ್‌ನ ಕಂಬವೊಂದು ವಾಲಿರುವುದು

‘ಕರ್ನಾಟಕದ ಹಕ್ಕುಗಳಿಗೆ ಬೆಂಬಲ’

ಕನ್ನಡಿಗರು, ಕರ್ನಾಟಕ ತಮಿಳರ ಸಾಂಸ್ಕೃತಿಕ ಒಗ್ಗಟ್ಟಿನ ಸಮ್ಮೇಳನದಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಜಾನಪದ ಕಲಾ ತಂಡಗಳು ನೃತ್ಯ ಪ್ರದರ್ಶಿಸಿದವು

ಬೆಂಗಳೂರು: ಕಾವೇರಿ ಹಾಗೂ ಮಹದಾಯಿ ನೀರಿನ ಹಂಚಿಕೆ, ಮೇಕೆದಾಟು ಅಣೆಕಟ್ಟು, ಬೆಳಗಾವಿ ಗಡಿ ವಿವಾದ ಸೇರಿ ರಾಜ್ಯವನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಹಕ್ಕುಗಳಿಗೆ ಬೆಂಬಲ ನೀಡುವ ಬಗ್ಗೆ ಕರ್ನಾಟಕದ ತಮಿಳು ಭಾಷಿಕರು ನಿರ್ಧಾರ ಕೈಗೊಂಡಿದ್ದಾರೆ.

ಮಾತೃ ಭಾಷಾ ಒಕ್ಕೂಟ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕನ್ನಡಿಗರು ಹಾಗೂ ಕರ್ನಾಟಕ ತಮಿಳರ ಸಾಂಸ್ಕೃತಿಕ ಮತ್ತು ಒಗ್ಗಟ್ಟಿನ ಸಮ್ಮೇಳನದಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

‘ಕರ್ನಾಟಕದ ಭಾಷೆ, ನೆಲ, ಜಲ, ಗಡಿ ಮತ್ತಿತರ ಹಕ್ಕುಗಳನ್ನು ರಕ್ಷಿಸಲು ಕನ್ನಡಿಗರು ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳಿಗೆ ಇಲ್ಲಿನ ತಮಿಳರು ಕರ್ನಾಟಕ ಸರ್ಕಾರಕ್ಕೆ ಬೆಂಬಲ ನೀಡಲಿದ್ದಾರೆ’ ಎಂಬ ತೀರ್ಮಾನವನ್ನೂ ಕಾರ್ಯಕ್ರಮದಲ್ಲಿ ತೆಗೆದುಕೊಳ್ಳಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ‘ಕನ್ನಡಿಗರು ಮತ್ತು ತಮಿಳರು ದ್ರಾವಿಡ ಕುಲಕ್ಕೆ ಸೇರಿದವರು. ನಮ್ಮಲ್ಲಿ ಯಾವುದೇ ಭೇದವಿಲ್ಲ. ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ತಮಿಳರ ಮತ್ತು ಕನ್ನಡಿಗರ ನಡುವೆ ಸಾಮರಸ್ಯ ಮೂಡಿಸಲು ಯತ್ನಿಸಿದ್ದೆ. ಹಲಸೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಲೋಕಾರ್ಪಣೆ ಮಾಡಿ, ಎರಡೂ ಭಾಷಿಕರ ನಡುವೆ ಭ್ರಾತೃತ್ವ ಸೃಷ್ಟಿಸಿದ್ದೆ. ತಮಿಳುನಾಡಿನ ಆಗಿನ ಮುಖ್ಯಮಂತ್ರಿ ಕರುಣಾನಿಧಿ ಜತೆ ಮಾತನಾಡಿ, ಚೆನ್ನೈನಲ್ಲಿ ಸರ್ವಜ್ಞರ ಪ್ರತಿಮೆ ನಿರ್ಮಿಸಲು ಕೋರಿದ್ದೆ’ ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣ ಗೌಡ, ‘ಕಾವೇರಿ ವಿಚಾರವಾಗಿ ತಮಿಳರು ಮತ್ತು ಕನ್ನಡಿಗರ ನಡುವೆ ಭಿನ್ನಾಭಿಪ್ರಾಯವಿದೆ. ಉಳಿದಂತೆ, ತಮಿಳುನಾಡು ಮತ್ತು ಕರ್ನಾಟಕದ ನಡುವೆ ಉತ್ತಮ ಸಂಬಂಧ ಇರಬೇಕು’ ಎಂದರು.

ತರೀಕೆರೆ ಶಾಸಕ ಜಿ.ಎಚ್. ಶ್ರೀನಿವಾಸ್, ಕೊಡಗು ಶಾಸಕ ಮಂಥರ್ ಗೌಡ, ಮಡಿಕೇರಿ ಶಾಸಕ ಎ.ಎಸ್. ಪೊನ್ನಣ್ಣ, ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ರಾಜ್ಯಸಭೆ ಮಾಜಿ ಸದಸ್ಯ ಎಲ್. ಹನುಮಂತಯ್ಯ ಉಪಸ್ಥಿತರಿದ್ದರು. ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕನ್ನಡ ಕವಿಗೋಷ್ಠಿ ನಡೆದರೆ, ಬಾಬು ಶಶಿಧರನ್ ಅವರು ತಮಿಳು ಕವಿಗೋಷ್ಠಿ ನಡೆಸಿಕೊಟ್ಟರು.

‘ಸಾಯಿಬಾಬಾ ಅವರದ್ದು ಸರ್ಕಾರಿ ಕೊಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನವ ಹಕ್ಕುಗಳ ಮೇಲೆ ಕೇಂದ್ರ ಸರ್ಕಾರ ನಡೆಸುತ್ತಿದ್ದ ದೌರ್ಜನ್ಯದ ವಿರುದ್ಧ ಪ್ರೊ.ಜಿ.ಎನ್. ಸಾಯಿಬಾಬಾ ಹೋರಾಡಿದ್ದರು. ಆ ಹೋರಾಟಕ್ಕೆ ಅವರು ಜೀವವನ್ನೇ ತೆರಬೇಕಾಯಿತು’ ಎಂದು ಕರ್ನಾಟಕ ಜನಶಕ್ತಿ ಗೌರವಾಧ್ಯಕ್ಷ ನಗರಗೆರೆ ರಮೇಶ್ ಹೇಳಿದರು.

ಕರ್ನಾಟಕ ಶ್ರಮಿಕ ಶಕ್ತಿ, ಪಿಡಿಎಫ್, ಪಿಯುಸಿಎಲ್ ಆಯೋಜಿಸಿದ್ದ ‘ಪ್ರೊ.ಜಿ.ಎನ್. ಸಾಯಿಬಾಬಾ ಶ್ರದ್ಧಾಂಜಲಿ ಸಭೆ’ಯಲ್ಲಿ ಅವರು ಮಾತನಾಡಿದರು. ‘ಅಂಗ-ವಿಕಲರಾಗಿದ್ದ ಅವರನ್ನು ಏಳು ವರ್ಷ ಅಂಧಾಸೆಲ್‌ನಲ್ಲಿ ಹಾಕುವ ಮೂಲಕ ಅವರ ಜೀವವನ್ನು ತೆಗೆಯಲಾಯಿತು. ಸ್ಟ್ಯಾನ್ ಸ್ವಾಮಿ ಅವರನ್ನು ಈ ಸರ್ಕಾರ ಕೊಂದಂತೆಯೇ ಸಾಯಿಬಾಬಾ ಅವರನ್ನು ಕೊಲ್ಲಲಾಯಿತು’ ಎಂದರು.

‘ಉಗ್ರ ಸಂಘಟನೆಯ ಸಕ್ರಿಯ ಸದಸ್ಯ ಮತ್ತು ಭಯೋತ್ಪಾದನಾ ಚಟುವಟಿಕೆಯಲ್ಲಿ ಭಾಗಿ, ಉಗ್ರರ ಸಂಘಟನೆಗೆ ಸಹಾಯ ಮಾಡಿದ ಸೆಕ್ಷನ್‌ಗಳ ಅಡಿಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಿ, ಶಿಕ್ಷೆ ನೀಡಲಾಗಿತ್ತು. ಅವರ ವಿರುದ್ಧ ಕೆಲ ಪುಸ್ತಕಗಳು, ಬಸ್ ಮತ್ತು ರೈಲು ಟಿಕೆಟ್, ಸಿಮ್ ಕಾರ್ಡ್ ಮತ್ತು ಮೆಮರಿ ಕಾರ್ಡ್‌ಗಳನ್ನು ಸಾಕ್ಷ್ಯಗಳನ್ನಾಗಿ ಬಳಸಲಾಯಿತು. ಈ ಸಾಕ್ಷ್ಯಗಳೆಲ್ಲಾ ಸುಳ್ಳು ಎಂದು ಸಾಬೀತಾಗು ವಷ್ಟರಲ್ಲಿ ಅವರ ಜೀವ ಹೈರಾಣಾಗಿತ್ತು’ ಎಂದು ವಕೀಲ ಎಸ್.ಬಾಲನ್ ಹೇಳಿದರು.

‘ಕೇಂದ್ರ ಸರ್ಕಾರವು ತನ್ನ ವಿರುದ್ಧ ಹೋರಾಡುವವರನ್ನು ವ್ಯವಸ್ಥಿತವಾಗಿ ಸಿಲುಕಿಸುವ ಪ್ರಕರಣಕ್ಕೆ ಇದು ಸ್ಪಷ್ಟ ನಿದರ್ಶನ. ನಮ್ಮ ನ್ಯಾಯಾಂಗ ವ್ಯವಸ್ಥೆ ವಿಫಲವಾದ ಕಾರಣದಿಂದಲೇ ಸಾಯಿಬಾಬಾ ಅವರನ್ನು ನಾವು ಕಳೆದುಕೊಳ್ಳಬೇಕಾಯಿತು’ ಎಂದರು.

27ಕ್ಕೆ ಕ್ಯಾನ್ಸರ್ ತಪಾಸಣೆ

ಬೆಂಗಳೂರು: ಉದಯಭಾನು ಕಲಾ ಸಂಘವು ಇದೇ 27ರಂದು ಬೆಳಿಗ್ಗೆ 10 ಗಂಟೆಗೆ ಉಚಿತವಾಗಿ ಕ್ಯಾನ್ಸರ್, ನೇತ್ರ ಹಾಗೂ ದಂತ ತಪಾಸಣೆ ಶಿಬಿರ ಹಮ್ಮಿಕೊಂಡಿದೆ.

ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ನಾರಾಯಣ ನೇತ್ರಾಲಯ ಹಾಗೂ ಡಾ.ಎಂ.ವಿ. ಶಶಿಧರ್ ಅವರ ಸಹಕಾರದಲ್ಲಿ ಈ ಶಿಬಿರ ನಡೆಯಲಿದೆ. ಡಿ.15ರಂದು ಬೆಳಿಗ್ಗೆ 10 ಗಂಟೆಗೆ ಹೃದಯ ತಪಾಸಣೆ ಶಿಬಿರವೂ ನಡೆಯಲಿದೆ.

ಆಸಕ್ತರು ಕೆಂಪೇಗೌಡ ನಗರದಲ್ಲಿರುವ ಸಂಘದ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಸಂಘದ ಕಾರ್ಯದರ್ಶಿ ಕೆ.ವಿ. ರಾಧಾಕೃಷ್ಣ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 26609343, 26601831

ಗೌರಿ ಹತ್ಯೆ ಆರೋಪಿಗಳಿಗೆ ಸನ್ಮಾನಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೌರಿ ಲಂಕೇಶ್ ಹತ್ಯೆ ಪ್ರಕರಣ ಆರೋಪಿಗಳನ್ನು ಸನ್ಮಾನಿ-ಸಿರುವವರ ವಿರುದ್ಧ ಕೂಡಲೇ ಕ್ರಮ ತೆಗೆದುಕೊಂಡು, ಅವರ ವಿರುದ್ಧ ಪ್ರಕರಣ ದಾಖಲಿಸಬೇಕು’ ಎಂದು ಗೌರಿ ಬಳಗ ಒತ್ತಾಯಿಸಿದೆ.

ಈ ಸಂಬಂಧ ರಾಜ್ಯ ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಬಹಿರಂಗ ಪತ್ರ ಬರೆದಿರುವ ಬಳಗವು, ‘ಅತ್ಯಾಚಾರಿಗಳಿಗೆ, ಕೊಲೆಪಾತಕರಿಗೆ ಸನ್ಮಾನ ಮಾಡುವುದನ್ನು ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲಿ ಮಾತ್ರ ಕಂಡಿದ್ದೆವು. ಆದರೆ ಈಗ ಅಂಥದ್ದೇ ಕೃತ್ಯ ಕರ್ನಾ-ಟಕದಲ್ಲೂ ನಡೆದಿರುವುದನ್ನು ಕಂಡು ದಂಗಾಗಿದ್ದೇವೆ’ ಎಂದು ದಿಗ್ಭ್ರಮೆ ವ್ಯಕ್ತಪಡಿಸಿದೆ. ‘ಇದು ಕರ್ನಾಟಕದ ಪರಂಪರೆಗೆ, ಈ ನೆಲ ಪೋಷಿಸಿಕೊಂಡು ಬರುತ್ತಿರುವ ಮಾನವೀಯ ಮೌಲ್ಯಗಳಿಗೆ ಆದ ದೊಡ್ಡ ಕಳಂಕ. ಗೃಹ ಇಲಾಖೆಯು ಇಂತಹ ಕೃತ್ಯಗಳನ್ನು ನೋಡಿಕೊಂಡು ಸುಮ್ಮನಿರುವುದು ನಮಗೆ ಬೇಸರವನ್ನುಂಟು ಮಾಡಿದೆ. ಈ ಸನ್ಮಾನವು ಕೊಲೆಗೆ ನೀಡಿರುವ ಪ್ರಚೋದನೆಯಾ-ಗಿದೆ. ಹಿಂಸೆಗೆ ಒದಗಿಸಿರುವ ಸಾಮಾಜಿಕ ಮನ್ನಣೆಯಾಗಿದೆ. ಇದನ್ನು ತೀವ್ರವಾಗಿ ಖಂಡಿಸುತ್ತಿದ್ದೇವೆ’ ಎಂದು ಬಳಗವು ಹೇಳಿದೆ.

‘ಸನ್ಮಾನ ಮಾಡಿದ ವ್ಯಕ್ತಿಗಳು ಮತ್ತು ಸಂಘಟನೆಗಳ ವಿರುದ್ಧ ದ್ವೇಷಕ್ಕೆ ಪ್ರಚೋದನೆ ನೀಡಿದ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಬೇಕು. ಗೌರಿ ಲಂಕೇಶ್ ಹತ್ಯೆ ಪ್ರಕರಣದ ತನಿಖೆಯನ್ನು ತ್ವರಿತವಾಗಿ ನಡೆಸಿ, ಹಂತಕರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು’ ಎಂದು ಒತ್ತಾಯಿಸಿದೆ. ಈ ಒತ್ತಾಯದ ಪರವಾಗಿ ಇದೇ 22ರಂದು ರಾಜ್ಯವ್ಯಾಪಿ ಪ್ರತಿರೋಧ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಬಳಗ ತಿಳಿಸಿದೆ. ಪತ್ರಕ್ಕೆ ಕವಿತಾ ಲಂಕೇಶ್, ಇಂದಿರಾ ಲಂಕೇಶ್, ತೀಸ್ತಾ ಸೆಟಲ್ವಾಡ್, ಗಣೇಶ್ ದೇವಿ, ವಿ.ಎಸ್. ಶ್ರೀಧರ್, ಚುಕ್ಕಿ ನಂಜುಂಡಸ್ವಾಮಿ, ಬಿ. ಟಿ. ಲಲಿತಾ ನಾಯಕ್ ಸೇರಿ 50ಕ್ಕೂ ಹೆಚ್ಚು ಮಂದಿ ಸಹಿ ಮಾಡಿದ್ದಾರೆ.

ಯುಜಿನೀಟ್: ಆನ್ ಲೈನ್ ಅರ್ಜಿ ಸಲ್ಲಿಸಲು 23ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ಯುಜಿ ವೈದ್ಯಕೀಯ ಸ್ಟ್ರೇ ವೇಕೆನ್ಸಿ ಸುತ್ತಿಗೆ ಲಭ್ಯವಾಗುವ ಸೀಟುಗಳಿಗೆ ಹಾಗೂ ಯುಜಿ ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಾತಿಗಾಗಿ ಮಾಪ್ ಅಪ್ ಸುತ್ತಿಗೆ ಅರ್ಹತೆ ಪಡೆಯಲು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ 21ರಿಂದ 23ರ ರಾತ್ರಿ 11.59ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಾರ್ಯನಿ-ರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಈವರೆಗೆ ಯುಜಿನೀಟ್-2024ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ಯುಜಿ ವೈದ್ಯಕೀಯ ಸ್ಟ್ರೇ ವೇಕೆನ್ಸಿ ಸುತ್ತಿಗೆ ಲಭ್ಯವಾಗುವ ಸೀಟುಗಳಿಗೆ ಮತ್ತು ದಂತ ವೈದ್ಯಕೀಯ-ಆಯುಷ್ ಕೋರ್ಸ್‌ಗಳ ಪ್ರವೇಶಾತಿಗಾಗಿ ಮಾಪ್ ಅಪ್ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳಿಗೆ ಮಾತ್ರ ಇತರ ಅರ್ಹ ಅಭ್ಯರ್ಥಿಗಳ ಜೊತೆ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಆನ್ ಲೈನ್ ಲಿಂಕ್ ತೆರೆಯಲಾಗಿದೆ. ಅರ್ಹ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಲು ಹಾಗು ಶುಲ್ಕ ಪಾವತಿಸಬಹುದು. ಈಗಾಗಲೇ ನೊಂದಾಯಿಸಿರುವ, ಆನ್ ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳಿಸದೇ ಇರುವ ಅಭ್ಯರ್ಥಿಗಳೂ ಅರ್ಜಿಯನ್ನು ಪೂರ್ಣವಾಗಿ ಸಲ್ಲಿಸಬಹುದು ಎಂದಿದ್ದಾರೆ.

ಯುಜಿನೀಟ್-2024ರಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ಲಭ್ಯವಿರುವ ಸೀಟುಗಳಿಗೆ ಪ್ರಾಧಿಕಾರದ ಮೂಲಕ ಪ್ರವೇಶಕ್ಕೆ ನೋಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ ಎಂದೂ ಅವರು ವಿವರಿಸಿದ್ದಾರೆ.

ಒಳ ಮೀಸಲಾತಿ: ಒಗ್ಗಟ್ಟಿನ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿ ವಿಚಾರದಲ್ಲಿ ಗೊಂದಲಕ್ಕೆ ಅವಕಾಶ ನೀಡದೆ, ಸಹಮತ ಮೂಡಿಸುವ ಉದ್ದೇಶದಿಂದ ಗೃಹ ಸಚಿವ ಜಿ. ಪರಮೇಶ್ವರ ಅವರ ನಿವಾಸದಲ್ಲಿ ಎಲ್ಲ ಉಪ ಜಾತಿಗಳ (ಎಡಗೈ– ಬಲಗೈ ಬಣ) ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೋಮವಾರ (ಅ.21) ಮಹತ್ವದ ಸಭೆ ನಡೆಸಲಿದ್ದಾರೆ.

ಸಚಿವರಾದ ಪ್ರಿಯಾಂಕ್ ಖರ್ಗೆ, ಎಚ್. ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಶಿವರಾಜ ತಂಗಡಗಿ, ವಿಧಾನಸಭೆಯ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಪರಿಷತ್ ಸದಸ್ಯರಾದ ಸುಧಾಮ್ ದಾಸ್ ಸೇರಿದಂತೆ ಶಾಸಕರು, ಪರಿಷತ್ ಸದಸ್ಯರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಗೊತ್ತಾಗಿದೆ.

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು ರಾಜ್ಯಗಳಿಗೆ ಸಂವಿಧಾನಬದ್ಧ ಅಧಿಕಾರವಿದೆ ಎಂದು ಆಗಸ್ಟ್ 1ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ತೀರ್ಪಿನ ಜಾರಿಗೆ ಪರಿಶಿಷ್ಟ ಜಾತಿಯಲ್ಲಿನ ಉಪ ಜಾತಿಗಳ ನೈಜ ದತ್ತಾಂಶ ಅಗತ್ಯವಿದೆ. ಸದ್ಯ ಈ ದತ್ತಾಂಶ ಲಭ್ಯ ಇಲ್ಲ. ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ನೀಡಿರುವ ವರದಿಯಲ್ಲಿರುವ ದತ್ತಾಂಶಗಳ ಬಗ್ಗೆಯೂ ಗೊಂದಲಗಳಿವೆ. ಹೀಗಾಗಿ, ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಸಿ ಪರಿಶಿಷ್ಟ ಜಾತಿಯ ಜನಗಣತಿ ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವ ಬಗ್ಗೆ ಈ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಚನ್ನಪಟ್ಟಣ ಉಪ ಸಮರ: ಮುಖಂಡರ ಸಭೆ

ಜೆಡಿಎಸ್ ಚಿಹ್ನೆಯಡಿ ಸ್ಪರ್ಧೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆಗೆ ಅಭ್ಯರ್ಥಿ ಅಂತಿಮಗೊಳಿಸಲು ಮೈತ್ರಿ ಪಕ್ಷದ ನಾಯಕರಲ್ಲಿ ಹಗ್ಗ ಜಗ್ಗಾಟ ನಡೆಯುತ್ತಿರುವಂತೆಯೇ ಜೆಡಿಎಸ್ ಮುಖಂಡರು ಸಭೆ ಸೇರಿ ಯಾವುದೇ ಕಾರಣಕ್ಕೂ ಜೆಡಿಎಸ್ ಚಿಹ್ನೆ ಬಿಡಬಾರದು. ಪಕ್ಷದ ಚಿಹ್ನೆಯಡಿಯೇ ಚುನಾವಣೆ ನಡೆಯಬೇಕು ಎಂದು ನಿರ್ಧರಿಸಿದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಎಚ್.ಸಿ. ಜಯಮುತ್ತು ನೇತೃತ್ವದಲ್ಲಿ ಭಾನುವಾರ ಸಭೆ ನಡೆಸಿದ ಪಕ್ಷದ ಪ್ರಮುಖ ಮುಖಂಡರು ಈ ನಿರ್ಧಾರ ಕೈಗೊಂಡರು. ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡಲು ತೀರ್ಮಾನಿಸಲಾಯಿತು.

ಜೆಡಿಎಸ್ ಚಿಹ್ನೆಗೆ ಟಿಕೆಟ್ ಉಳಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಚಿಹ್ನೆ ಬಿಡಬಾರದು. ಯಾರೇ ಅಭ್ಯರ್ಥಿ ಆಗಲಿ ಪಕ್ಷದ ಚಿಹ್ನೆಯಿಂದ ಸ್ಪರ್ಧಿಸಲಿ. ಪಕ್ಷದ ಸಾಮಾನ್ಯ ಕಾರ್ಯ-ಕರ್ತನಿಗೆ ಟಿಕೆಟ್ ಕೊಟ್ಟರೂ ಸರಿಯೇ. ಚುನಾವಣೆ ಜೆಡಿಎಸ್ ಚಿಹ್ನೆಯಡಿ ನಡೆಯಬೇಕು. ಈ ವಿಚಾರ ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡಿಕೊಡುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕಳೆದ ಲೋಕಸಭೆ ಚುನಾವಣೆಯಲ್ಲಿ ಸಂಸದ ಡಾ.ಮಂಜುನಾಥ್, ಬಿಜೆಪಿ ಚಿಹ್ನೆಯಿಂದ ಸ್ಪರ್ಧೆ ಮಾಡಿದ್ದರು. ಆಗ ಜೆಡಿಎಸ್ ಪಕ್ಷದವರು ಬೆಂಬಲ ನೀಡಿದ್ದಾರೆ. 2018 ಹಾಗೂ 2023ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಜಯಗಳಿಸಿದೆ. ಹಾಗಾಗಿ ಈ ಉಪ ಚುನಾವಣೆಯಲ್ಲಿಯೂ ಪಕ್ಷಕ್ಕೆ ಟಿಕೆಟ್ ಕೊಡಬೇಕು. ಬಿಜೆಪಿಯವರು ಜೆಡಿಎಸ್ ಚಿಹ್ನೆಯಡಿ ಸ್ಪರ್ಧಿಸುವ ಅಭ್ಯರ್ಥಿಗೆ ಬೆಂಬಲಕೊಡಬೇಕು ಎಂದು ಮುಖಂಡರು ಒತ್ತಾಯಿಸಿದರು.

ಪಕ್ಷದ ಮುಖಂಡರಾದ ಗೋವಿಂದಹಳ್ಳಿ ನಾಗರಾಜ್, ಪಂಚಮಿ ಪ್ರಸನ್ನ, ಹಾಪ್ ಕಾಮ್ಸ್ ದೇವರಾಜು, ಕುಕ್ಕೂರುದೊಡ್ಡಿ ಜಯರಾಮ್, ಪೀಹಳ್ಳಿದೊಡ್ಡಿ ಭಾನುಪ್ರಸಾದ್, ನಾಗವಾರ ರಂಗಸ್ವಾಮಿ ಇದ್ದರು.

‘ಪಕ್ಷ, ಕಾರ್ಯಕರ್ತರಿಗಾಗಿ ಒಪ್ಪಿಕೊಂಡೆ’

ಬೆಂಗಳೂರು: ‘ನನ್ನ ಮನಸ್ಸಿನಲ್ಲಿ ಏನೇ ಇದ್ದರೂ ಪಕ್ಷಕ್ಕಾಗಿ, ಸಮಾಜಕ್ಕಾಗಿ, ಕಾರ್ಯಕರ್ತರಿಗಾಗಿ ಪಕ್ಷದ ತೀರ್ಮಾನಕ್ಕೆ ತಲೆ ಬಾಗುತ್ತೇನೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ತಮ್ಮ ಪುತ್ರ ಭರತ್ ಬೊಮ್ಮಾಯಿಗೆ ಶಿಗ್ಗಾವಿ ಉಪಚುನಾವಣೆಗೆ ಟಿಕೆಟ್ ಸಿಕ್ಕ ಹಿನ್ನೆಲೆಯಲ್ಲಿ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಹಾವೇರಿ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಬೊಮ್ಮಾಯಿ ಅವರು ಗೆಲುವು ಸಾಧಿಸಿದ್ದರಿಂದ ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದರು. ಅದರಿಂದ ಉಪಚುನಾವಣೆ ಎದುರಾಗಿದೆ.

‘ಪಕ್ಷದ ಹಿತದೃಷ್ಟಿ, ಈಗಿನ ರಾಜಕೀಯ ಹಿತದೃಷ್ಟಿ ಮತ್ತು ಕ್ಷೇತ್ರದ ದೃಷ್ಟಿಯಿಂದ ಭರತ್‌ಗೆ ಟಿಕೆಟ್ ನೀಡಲು ನಿರ್ಧರಿಸಿರುವುದಾಗಿ ವರಿಷ್ಠರು ತಿಳಿಸಿದ್ದಾರೆ. ನಾನು ಎರಡು ದಿನ ಸಮಯ ಕೇಳಿದ್ದೆ. ಆದರೆ, ಸಮಯ ಕೊಡದೇ ಘೋಷಣೆ ಮಾಡಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ನನಗೆ ಮಾತನಾಡಲು ಅವಕಾಶವನ್ನೇ ನೀಡಲಿಲ್ಲ. ನಿಮ್ಮ ಮಗನಿಗೆ ಟಿಕೆಟ್ ನೀಡಲು ನಿರ್ಧರಿಸಿದ್ದೇವೆ. ಅಲ್ಲಿ ನಿಮಗೆ ಹೆಸರಿದೆ ಮತ್ತು ಗೆಲುವು ಮುಖ್ಯ. ಸರ್ವೆ ವರದಿ ಕೂಡ ಭರತ್ ಪರ ಇದೆ ಎಂದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ದೂರವಾಣಿ ಮೂಲಕ ಮಾತನಾಡಿ ಚುನಾವಣೆ ಎದುರಿಸಬೇಕು. ಚುನಾವಣೆ ಗೆಲ್ಲಬೇಕು ಎಂದರು. ಹೀಗಾಗಿ ವರಿಷ್ಠರ ನಿರ್ಧಾರಕ್ಕೆ ತಲೆ ಬಾಗಿದ್ದೇನೆ’ ಎಂದರು.

‘ಜನರ ಅಪೇಕ್ಷೆ ಮೇರೆಗೆ ಟಿಕೆಟ್’: ‘ನಮ್ಮ ತಂದೆ ಶಿಗ್ಗಾವಿ– ಸವಣೂರಿನಲ್ಲಿ ನಾಲ್ಕು ಬಾರಿ ಶಾಸಕರಾಗಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿಕೊಂಡು, ಅಲ್ಲಿನ ಜನರ ಅಪೇಕ್ಷೆಯಂತೆ ಪಕ್ಷದ ವರಿಷ್ಠರು ಟಿಕೆಟ್ ನೀಡಿದ್ದಾರೆ’ ಎಂದು ಭರತ್ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.

ಅಜ್ಜಂಪುರ ತಾಲ್ಲೂಕಿನ ದೊಡ್ಡಬೋಕಿಯಲ್ಲಿ ಅಡಿಕೆ ತೋಟಗಳಿಗೆ ಮಳೆ ನೀರು ನುಗ್ಗಿದೆ

ಶಿವಮೊಗ್ಗದ ವಿನೋಬನಗರದಿಂದ ಎಲ್‌ಬಿಎಸ್ ನಗರದ ಮೂಲಕ ಹಾದು ಹೋಗುವ ಗಾರೆ ಚಾನೆಲ್ ತುಂಬಿ ನೀರು ಜಲಪಾತದಂತೆ ಹರಿಯಿತು – ಪ್ರಜಾವಾಣಿ ಚಿತ್ರ/ಶಿವಮೊಗ್ಗ ನಾಗರಾಜ್

ಮಂಡ್ಯ ಜಿಲ್ಲೆಯ ಕಿಕ್ಕೇರಿ ಹೋಬಳಿಯ ಚಿನ್ನೇನಹಳ್ಳಿಯ ಪಾರ್ವತಮ್ಮ ಎಂಬವರ ಮನೆ ಶನಿವಾರ ಸುರಿದ ಮಳೆಗೆ ಕುಸಿದಿದೆ

ಶಿವಮೊಗ್ಗ ನಗರ, ಚಿಕ್ಕಮಗಳೂರು ಜಿಲ್ಲೆ ತತ್ತರ ● ರಾಜ್ಯದಲ್ಲಿ 26ರವರೆಗೆ ಮಳೆ ಮುಂದುವರಿಕೆ ಸಾಧ್ಯತೆ

ಜಮೀನು ಜಲಾವೃತ: ಆತಂಕದಲ್ಲಿ ರೈತರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ಶಿವಮೊಗ್ಗ: ರಾಜ್ಯದ ಹಲವೆಡೆ ಶನಿವಾರ ರಾತ್ರಿ ಮತ್ತು ಭಾನುವಾರ ಬಿರುಸಿನ ಮಳೆಯಾಗಿದೆ. ಶನಿವಾರ ರಾತ್ರಿಯಿಂದ ಬಿಟ್ಟೂಬಿಡದೆ ಸುರಿದ ಮಳೆಯ ಆರ್ಭಟಕ್ಕೆ ಶಿವಮೊಗ್ಗ ನಗರ ಅಕ್ಷರಶಃ ತತ್ತರಿಸಿತು.

ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಭಾನುವಾರ ಬಿರುಸಿನ ಮಳೆಯಾಗಿದೆ. ಮಂಡ್ಯ ಜಿಲ್ಲೆಯ ಚಿನ್ನೇನಹಳ್ಳಿಯಲ್ಲಿ ಸತತ ಮಳೆಗೆ ಮನೆಯೊಂದು ಕುಸಿದು ಬಿದ್ದಿದೆ.

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಭಾಗದಲ್ಲಿ ಭಾರಿ ಮಳೆ ಸುರಿದು ಆತಂಕ ಸೃಷ್ಟಿಸಿತು. ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್ ಗಿರಿ ಭಾಗದಲ್ಲಿ ರಾತ್ರಿಯಿಡೀ ಮಳೆ ಸುರಿಯಿತು. ಮುಳ್ಳಯ್ಯನಗಿರಿಯ ರಸ್ತೆಯಲ್ಲಿ ಎರಡು ಅಡಿಗೂ ಹೆಚ್ಚು ನೀರು ನುಗ್ಗಿತು. ಧಾರಾಕಾರವಾಗಿ ಹರಿದ ಕೆಂಪು ನೀರನ್ನು ಕಂಡು ಪ್ರವಾಸಿಗರು ಮತ್ತು ಸ್ಥಳೀಯರು ಆತಂಕಗೊಂಡರು. ಇಲ್ಲಿ ಹಿಂದೆಂದೂ ಕಂಡು ಕೇಳರಿಯದಷ್ಟು ಜೋರು ಮಳೆಯಾಗಿದೆ.

ಶಿವಮೊಗ್ಗ ನಗರದ ಬಳಿ ಇರುವ ತುಂಗಾ ಹಾಗೂ ಭದ್ರಾ ಎಡದಂಡೆ ಕಾಲುವೆಗಳು ತುಂಬಿ ಹರಿದು ಆಸುಪಾಸಿನ ಮನೆಗಳಿಗೆ ನೀರು ನುಗ್ಗಿದೆ. ವಿನೋಬನಗರ ಚಾನಲ್ ಬಳಿ ಐದು ಮನೆಗಳು ಕುಸಿದಿವೆ. ಇಲ್ಲಿನ ನವುಲೆ ಕೆರೆಗೆ ಹೊಂದಿಕೊಂಡಂತೆಯೇ ಇರುವ ಎರಡು ಕ್ರೀಡಾಂಗಣಗಳು ಸಂಪೂರ್ಣ ಜಲಾವೃತವಾಗಿವೆ. ತಗ್ಗು ಪ್ರದೇಶದಲ್ಲಿರುವವರ ಸ್ಥಳಾಂತರಕ್ಕೆ ಮುಂದಾಗಿರುವ ಮಹಾನಗರ ಪಾಲಿಕೆ, ಎರಡು ಕಡೆ ಕಾಳಜಿ ಕೇಂದ್ರಗಳ ತೆರೆದಿದೆ.

ಸಮೀಪದ ಉಂಬ್ಳೆಬೈಲು ಬಳಿಯ ಕೈದೊಟ್ಲು ಚಂದ್ರೇಗೌಡರ ಕೋಳಿಫಾರಂಗೆ ಮಳೆಯ ನೀರು ನುಗ್ಗಿ ಮೂರು ಸಾವಿರಕ್ಕೂ ಹೆಚ್ಚು ಕೋಳಿಗಳು ನೀರಿನಲ್ಲಿ ಮುಳುಗಿ ಸಾವಿಗೀಡಾಗಿವೆ. ವಿನೋಬನಗರದ ವಿಕಾಸ ಶಾಲೆ ಹಿಂಭಾಗ ಮನೆಗೆ ನೀರು ನುಗ್ಗಿ ಅದರಲ್ಲಿ ಸಿಲುಕಿದ್ದ ವೃದ್ಧ ದಂಪತಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದರು.

ಅಜ್ಜಂಪುರ ತಾಲ್ಲೂಕಿನಲ್ಲಿ ದೊಡ್ಡಬೋಕಿ ಬಳಿ ಮಳೆಯ ನೀರು ಹೊಲಗದ್ದೆಗಳಿಗೆ ನುಗ್ಗಿದೆ. ಅಡಿಕೆ ತೋಟಗಳು ಜಲಾವೃತವಾಗಿವೆ. ಕಡೂರು, ತರೀಕೆರೆ, ಎನ್.ಆರ್.ಪುರ, ಕೊಪ್ಪ, ಕಳಸ, ಮೂಡಿಗೆರೆ, ಆಲ್ದೂರು, ಬಾಳೆಹೊನ್ನೂರು ಸೇರಿ ಎಲ್ಲೆಡೆ ಉತ್ತಮ ಮಳೆಯಾಗಿದೆ.

ಐಗಳಿ ವರದಿ(ಬೆಳಗಾವಿ ಜಿಲ್ಲೆ): ಅಥಣಿ ತಾಲ್ಲೂಕಿನ ಐಗಳಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಮೆಕ್ಕೆಜೋಳ, ಶೇಂಗಾ ಬೆಳೆದಿದ್ದ ಜಮೀನುಗಳಲ್ಲಿ ಅಪಾರ ಪ್ರಮಾಣದಲ್ಲಿ ನೀರು ನುಗ್ಗಿದೆ. ತೊಗರಿ ಬೆಳೆಗೂ ಹಾನಿಯ ಆತಂಕ ಕಾಡುತ್ತಿದೆ.

ರೈತರು ಮೆಕ್ಕೆಜೋಳ, ಶೇಂಗಾ ಕಟಾವಿಗೆ ಸಿದ್ಧತೆ ನಡೆಸಿದ್ದರು. ಆದರೆ, ಮಳೆಯಿಂದ ರೈತರ ಜಮೀನುಗಳಲ್ಲಿ ನೀರು ನಿಂತಿದೆ. ಕೆಲವು ರೈತರು ಮೆಕ್ಕೆಜೋಳ ಕಟಾವು ಮಾಡಿ, ರಾಶಿಗೆ ತಯಾರಿ ನಡೆಸಿದ್ದರು. ಅದಕ್ಕೂ ಈಗ ತೊಡಕಾಗಿದೆ. ವಾತಾವರಣ ತಂಪೇರಿದ ಕಾರಣ, ಮೆಕ್ಕೆಜೋಳ ಕಪ್ಪು ಬಣ್ಣಕ್ಕೆ ತಿರುಗಿದೆ. ತೊಗರಿ ಬೆಳೆಗಳ ಹೂ ಉದುರುತ್ತಿದ್ದು ರೈತರು ಕಂಗಾಲಾಗಿದ್ದಾರೆ.

'ಮಳೆಯಿಂದ ಹಾನಿಗೀಡಾದ ಬೆಳೆಗಳ ಸಮೀಕ್ಷೆ ಮಾಡಲಾಗುತ್ತಿದೆ' ಎಂದು ತೆಲಸಂಗದ ಸಹಾಯಕ ಕೃಷಿ ಅಧಿಕಾರಿ ವೆಂಕಪ್ಪ ಉಪ್ಪಾರ ತಿಳಿಸಿದ್ದಾರೆ.

ದಾವಣಗೆರೆ ವರದಿ: ಜಿಲ್ಲೆಯ ಚನ್ನಗಿರಿ, ನ್ಯಾಮತಿ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿ ಭಾನುವಾರ ಭಾರಿ ಮಳೆ ಸುರಿದಿದೆ. ಚನ್ನಗಿರಿಯಲ್ಲಿ ಅರಿದ್ರಾವತಿ ಹಳ್ಳ ತುಂಬಿಹರಿದಿದ್ದು, ತೋಟ-ಗದ್ದೆಗಳು ಜಲಾವೃತಗೊಂಡಿವೆ. ಮಳೆ-ಗಾಳಿಗೆ ಅಡಿಕೆ ಮರಗಳು ನೆಲಕಚ್ಚಿವೆ.

ಕಿಕ್ಕೇರಿ ವರದಿ (ಮಂಡ್ಯ ಜಿಲ್ಲೆ): ಶನಿವಾರ ತಡರಾತ್ರಿ ಸುರಿದ ಮಳೆಯಿಂದಾಗಿ ಹೋಬಳಿಯ ಚಿನ್ನೇನಹಳ್ಳಿಯ ರಾಜೇಗೌಡರ ಪತ್ನಿ ಪಾರ್ವತಮ್ಮ ಅವರ ಮಣ್ಣಿನ ಮನೆ ಕುಸಿದಿದೆ. ದವಸಧಾನ್ಯ, ಪಾತ್ರೆ, ಮಂಚ, ಬಟ್ಟೆಗಳು ನಾಶವಾಗಿವೆ. ಪ್ರಾಣಾಪಾಯ ಉಂಟಾಗಿಲ್ಲ. ಗೋಡೆ ಕುಸಿದ ಶಬ್ದ ಕೇಳಿದ ಪಾರ್ವತಮ್ಮ ತಕ್ಷಣ ಹೊರಗೆ ಬಂದಿದ್ದಾರೆ.

ನೀರುಪಾಲಾಗಿದ್ದ ಯುವಕನ ಮೃತದೇಹ ಪತ್ತೆ

ನೇಸರಗಿ (ಬೆಳಗಾವಿ ಜಿಲ್ಲೆ): ಸಮೀಪದ ಕೊಳದೂರ ಹಳ್ಳದಲ್ಲಿ ತೇಲಿಹೋಗಿದ್ದ ಬೆಳಗಾವಿ ತಾಲ್ಲೂಕಿನ ಕರಡಿಗುದ್ದಿ ಗ್ರಾಮದ ನಿವಾಸಿ ಯಲ್ಲಪ್ಪ ಬೋರನ್ನವರ(34) ಮೃತದೇಹ ಭಾನುವಾರ ಪತ್ತೆಯಾಗಿದೆ.

ಸತತ ಮಳೆಯಿಂದಾಗಿ ಈಚೆಗೆ ಈ ಹಳ್ಳ ಉಕ್ಕಿ ಹರಿಯುತ್ತಿತ್ತು. ಆದರೆ, ಅದರ ರಭಸವನ್ನೂ ಲೆಕ್ಕಸದೆ ಯಲ್ಲಪ್ಪ ದಾಟುತ್ತಿದ್ದಾಗ, ಬೈಕ್ ಸಮೇತವಾಗಿ ನೀರುಪಾಲಾಗಿದ್ದರು. ಮೃತದೇಹ ಪತ್ತೆಗಾಗಿ ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್ ಸಿಬ್ಬಂದಿ ಮತ್ತು ನೇಸರಗಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ಗ್ರಾಮದ ಜೋಡಗುಡಿ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿನ ಸೇತುವೆ ಕೆಳಗೆ ಮೃತದೇಹ ಪತ್ತೆಯಾಯಿತು.

ದೇವಾಲಯದ ಅಂಗಣಕ್ಕೆ ನೀರು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ಇಲ್ಲಿನ ಪರಿಸರದಲ್ಲಿ ಭಾನುವಾರ ಮಧ್ಯಾಹ್ನ ಗುಡುಗು ಸಹಿತ ಭಾರಿ ಮಳೆ ಆಯಿತು. ಅರ್ಧ ತಾಸು ಸುರಿದ ಮಳೆಗೆ ಸುಬ್ರಹ್ಮಣ್ಯದ ದರ್ಪಣ ತೀರ್ಥ ನದಿ ತುಂಬಿ ಹರಿಯಿತು.

ಈ ನದಿಯಲ್ಲಿ ಸುಮಾರು 15 ನಿಮಿಷ ಭಾರಿ ಪ್ರವಾಹ ಬಂದಿದ್ದು, ಆದಿಸುಬ್ರಹ್ಮಣ್ಯ ದೇವಸ್ಥಾನದ ಹೊರಾಂಗಣಕ್ಕೆ ನೀರು ನುಗ್ಗಿತು.

ಮಳೆ ಕಡಿಮೆಯಾಗುತ್ತಿದ್ದಂತೆ ಪ್ರವಾಹವೂ ಇಳಿಮುಖವಾಯಿತು. ನೀರು ಆದಿ ದೇವಳದ ಹೊರಾಂಗಣ ಪ್ರವೇಶಿಸಿದ್ದನ್ನು ತಿಳಿದು ಸ್ಥಳಕ್ಕೆ ಬಂದ ದೇವಳದ ಷಣ್ಮುಖ ಪ್ರಸಾದ ಭೋಜನ ಶಾಲೆ ಸಿಬ್ಬಂದಿ ಮತ್ತು ದೇವಳದ ಇತರ ಸಿಬ್ಬಂದಿ ಹೊರಾಂಗಣವನ್ನು ಸ್ವಚ್ಛಗೊಳಿಸಿದರು. ಮಳೆ ನೀರು ಆದಿಸುಬ್ರಹ್ಮಣ್ಯದ ಕೆಲವು ಅಂಗಡಿಗಳಿಗೂ ನುಗ್ಗಿತ್ತು.

ಕುಕ್ಕೆ ಸುಬ್ರಹ್ಮಣ್ಯದ ಆದಿ ದೇವಳದ ಹೊರಾಂಗಣಕ್ಕೆ ನೀರು ನುಗ್ಗಿರುವುದು

13 ಜಿಲ್ಲೆಗಳಿಗೆ ಇಂದು 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 13 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯಲ್ಲಿ ಪ್ರತಿ ಗಂಟೆಗೆ 35 ಕಿ.ಮೀ.ನಿಂದ 55 ಕಿ.ಮೀ.ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದ್ದು, ಚಂಡಮಾರುತದ ವಾತಾವರಣ ಇರಲಿದೆ. ಆದ್ದರಿಂದ, ಮೀನುಗಾರರು ಎಚ್ಚರವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಕೆಲವೊಮ್ಮೆ ಮಳೆ ಜೋರಾಗುವ ಸಂಭವವಿದೆ ಎಂದಿದೆ.

ಮಂಗಳವಾರವೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ನಗರ ಸೇರಿ ಎಂಟು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಇದೇ 26ರವರೆಗೂ ಮಳೆ ಮುಂದುವರಿಯುವ ಮುನ್ಸೂಚನೆಯನ್ನು ಇಲಾಖೆ ನೀಡಿದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಐಗಳಿಯ ರೈತರೊಬ್ಬರ ಮೆಕ್ಕೆಜೋಳ ಬೆಳೆದ ಜಮೀನಿನಲ್ಲಿ ಮಳೆನೀರು ನಿಂತಿದೆ

ಬೆಂಗಳೂರಿನಲ್ಲಿ ಭಾರಿ ಮಳೆ

ಬೆಂಗಳೂರು: ನಗರದಲ್ಲಿ ಶನಿವಾರ ರಾತ್ರಿ ಮತ್ತು ಭಾನುವಾರ ಭಾರಿ ಮಳೆಯಾಗಿದೆ.

ಬನಶಂಕರಿ 6ನೇ ಹಂತದಲ್ಲಿ ನಿರ್ಮಾಣಗೊಂಡಿರುವ ಶ್ರೀವಾರಿ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಕುಸಿದಿದೆ. ರಾಮಸಂದ್ರ ಹಾಗೂ ಹಿರೇಕೆರೆ ಕೋಡಿ ಬಿದ್ದ ಪರಿಣಾಮ ಕೆಂಗೇರಿ ಸಮೀಪದ ಕೆಂಪೇಗೌಡ ಬಡಾವಣೆಯ ಮೂರು ಮತ್ತು ನಾಲ್ಕನೇ ಹಂತದ ಪ್ರದೇಶಗಳು ಜಲಾವೃತಗೊಂಡಿವೆ.

ನಾಗದೇವನಹಳ್ಳಿ ಬಳಿಯ ರಾಮನಾಥನಗರ ಬಡಾವಣೆಗೆ ಚರಂಡಿ ನೀರು ನುಗ್ಗಿದೆ. ಖೋಡೆ ಅಂಡರ್‌ಪಾಸ್ ಸಹಿತ ಕೆಳಸೇತುವೆಗಳಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ನಾರಾಯಣ ನೇತ್ರಾಲಯ ಪಕ್ಕದ ಒ.ಆರ್. ಟೆಕ್ ಟೂಲ್ಸ್ ಕಂಪನಿಗೆ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿರುವ ಮನೆಗಳಿಗೆ ನೀರು ನುಗ್ಗಿದೆ. ಮೈಸೂರು ರಸ್ತೆ ಸೇರಿದಂತೆ ನಗರದ ಹಲವು ರಸ್ತೆಗಳಲ್ಲಿಯೇ ನೀರು ಹರಿದು ಕಾಲುವೆಯಂತಾಗಿದೆ. ಹೊಸತಾಗಿ ಹಾಕಿದ್ದ ಡಾಂಬರು ಕಿತ್ತು ಹೋಗಿದೆ.

ನಿಧನ ವಾರ್ತೆ

ನಟ ಸುದೀಪ್ ತಾಯಿ ಸರೋಜಾ



ಬೆಂಗಳೂರು: ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ನಟ ಸುದೀಪ್ ಅವರ ತಾಯಿ ಸರೋಜಾ ಸಂಜೀವ್ ಭಾನುವಾರ ಬೆಳಿಗ್ಗೆ ನಿಧನರಾದರು. 74 ವರ್ಷದ ಅವರಿಗೆ ಪತಿ ಹಾಗೂ ಮೂವರು ಮಕ್ಕಳಿದ್ದಾರೆ.

ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದ ಸರೋಜಾ ಅವರನ್ನು ಜಯನಗರದ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಿಗ್ಗೆ ಕೊನೆಯುಸಿರೆಳೆದರು.

ಜೆಪಿ ನಗರದ ಸುದೀಪ್ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಟರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಡಾಲಿ ಧನಂಜಯ, ನಟಿಯರಾದ ತಾರಾ, ರಕ್ಷಿತಾ ಪ್ರೇಮ್ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಸಂಜೆ ವಿಲ್ಸನ್ ಗಾರ್ಡನ್‌ನಲ್ಲಿರುವ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ಮರ ಕಡಿಯಲು ತೆರಳಿದಾಗ ವಿದ್ಯುತ್ ಸ್ಪರ್ಶ: ಇಬ್ಬರ ಸಾವು

ಧರ್ಮಪುರ (ಚಿತ್ರದುರ್ಗ ಜಿಲ್ಲೆ): ರುದ್ರಾಕ್ಷಿ ಮಾಲೆ ತಯಾರಿಸಿ ಮಾರಾಟ ಮಾಡಲು ಅಗತ್ಯವಿರುವ ಕಟ್ಟಿಗೆ ತುಂಡುಗಳಿಗಾಗಿ ಮರ ಕಡಿದು ತರಲು ಹೋಗಿದ್ದ ಹೊರರಾಜ್ಯದ ಇಬ್ಬರು ವ್ಯಕ್ತಿಗಳು ವಿದ್ಯುತ್ ತಗುಲಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸಮೀಪದ ಕೃಷ್ಣಾಪುರ ಗ್ರಾಮದ ಬಳಿಯ ಜಮೀನಿನಲ್ಲಿ ಶನಿವಾರ ರಾತ್ರಿ ಸಂಭವಿಸಿದೆ. ಮೃತರನ್ನು ಮಧ್ಯಪ್ರದೇಶದ ಬಜ್ಜಲ್‌ಪುರ ಜಿಲ್ಲೆಯ ಕಟ್ನಿ ಗ್ರಾಮದ ಮೋಹಿತ್ (24), ಅಕರ್‌ಲಾಲ್ (32) ಎಂದು ಗುರುತಿಸಲಾಗಿದೆ. ಮೃತದೇಹಗಳ ಬಳಿ ಕೊಡಲಿ, ಗರಗಸ, ಇತರೆ ಸಾಧನ ಪತ್ತೆಯಾಗಿದ್ದರಿಂದ ಇವರು ಮರ ಕಡಿಯಲು ಬಂದಿದ್ದರೆಂದು ಅಂದಾಜಿಸಲಾಗಿದೆ.

ಯುಜಿ ನೀಟ್: ಕಾಲೇಜಿನಲ್ಲೇ ದಾಖಲೆ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುಜಿ ನೀಟ್- 24 ಮಾಪ್ ಅಪ್ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆ ಆಗಿರುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳ ಸಹಿತ ಸಂಬಂಧಪಟ್ಟ ಕಾಲೇಜುಗಳಿಗೆ ತೆರಳಿ ವರದಿ ಮಾಡಿಕೊಳ್ಳಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯ-ನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ತಿಳಿಸಿದ್ದಾರೆ.

'ಈ ಅಭ್ಯರ್ಥಿಗಳು ದಾಖಲೆಗಳನ್ನು ಸಲ್ಲಿಸಲು ಸೋಮವಾರ (ಅ.21) ಕೆಇಎ ಕಚೇರಿಗೆ ಬರುವ ಅಗತ್ಯ ಇಲ್ಲ. ಶುಲ್ಕ ಪಾವತಿ ಮಾಡುವುದಕ್ಕೆ ಮತ್ತು ಕಾಲೇಜಿಗೆ ದಾಖಲೆಗಳನ್ನು ಸಲ್ಲಿಸಿ ವರದಿ ಮಾಡಿಕೊಳ್ಳಲು ಮಂಗಳವಾರದವರೆಗೆ (ಅ. 22) ಅವಕಾಶವಿದೆ. ಮೂಲ ದಾಖಲೆಗಳನ್ನು ಸಲ್ಲಿಸಲು ಕೆಇಎಗೆ ಬರುವಂತೆ ಈ ಹಿಂದೆ ಸೂಚಿಸಲಾಗಿತ್ತು' ಎಂದು ಅವರು ಹೇಳಿದ್ದಾರೆ.

ವಿಮಾನಗಳಿಗೆ ಬಾಂಬ್ ಬೆದರಿಕೆ: ವಾರದಲ್ಲಿ 100 ಹುಸಿ ಸಂದೇಶ

ಒಂದನೇ ಪುಟದಿಂದ...

'ನಮ್ಮ ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆ ಹಾಗೂ ಭದ್ರತೆಯು ನಮ್ಮ ಆದ್ಯತೆಯಾಗಿದೆ. ಮಾರ್ಗಸೂಚಿ ಪ್ರಕಾರ ಎಲ್ಲ ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದೇವೆ' ಎಂದು ಅದು ಹೇಳಿದೆ.

ವಿಸ್ತಾರಾದ ಆರು ವಿಮಾನಗಳಿಗೆ ಇದೇ ರೀತಿಯ ಸಂದೇಶಗಳು ಬಂದಿದ್ದು, ದೆಹಲಿ-ಫ್ರಾಂಕ್‌ಫರ್ಟ್, ಸಿಂಗಪುರ-ಮುಂಬೈ, ಬಾಲಿ-ದೆಹಲಿ, ಸಿಂಗಪುರ-ದೆಹಲಿ, ಸಿಂಗಪುರ-ಪುಣೆ ಮತ್ತು ಮುಂಬೈನಿಂದ ಸಿಂಗಪುರಕ್ಕೆ ಸಂಚರಿಸಬೇಕಿದ್ದ ವಿಮಾನಗಳ ಹಾರಾಟದ ಮೇಲೆ ಪರಿಣಾಮ ಬೀರಿದೆ. ಅಧಿಕಾರಿಗಳು ನೀಡಿರುವ ನಿರ್ದೇಶನದಂತೆ ಭದ್ರತಾ ಕಾರ್ಯ ವಿಧಾನಗಳನ್ನು ಕೈಗೊಳ್ಳಲಾಗಿದೆ ಎಂದು ವಿಸ್ತಾರಾ ಹೇಳಿದೆ.

ಆಕಾಸಾ ಏರ್ ಸಂಸ್ಥೆಯ, ದೇಶದ ಪ್ರಮುಖ ನಗರಗಳ ನಡುವೆ ಸಂಚರಿಸುವ ಆರು ವಿಮಾನಗಳಿಗೆ ಇಂತಹದೇ ಸಂದೇಶಗಳು ಬಂದಿವೆ. 'ತುರ್ತು ಸ್ಪಂದನಾ ತಂಡಗಳು ಪರಿಸ್ಥಿತಿಯ ಮೇಲ್ವಿಚಾರಣೆ ಮಾಡುತ್ತಿವೆ. ಭದ್ರತಾ ಅಧಿಕಾರಿಗಳೊಂದಿಗೆ ಸಂಪರ್ಕ ದಲ್ಲಿದ್ದೇವೆ' ಎಂದು ಆಕಾಸಾ ಏರ್ ತಿಳಿಸಿದೆ.

ಹುಸಿ ಸಂದೇಶಗಳ ಬಗ್ಗೆ ಮುಂಬೈ ಮತ್ತು ದೆಹಲಿಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ದೇಶದ ರಾಜಧಾನಿಯಲ್ಲಿ ದಾಖಲಾದ ಪ್ರಕರಣದ ತನಿಖೆಗಾಗಿ ದೆಹಲಿ ಪೊಲೀಸರ ವಿಶೇಷ ಘಟಕವನ್ನು ನಿಯೋಜಿಸಲಾಗಿದೆ. ಸುಳ್ಳು ಸಂದೇಶ ಕಳುಹಿಸುವವರನ್ನು 'ಹಾರಾಟ ನಿಷೇಧ' ('ನೋ – ಫ್ಲೈ') ಪಟ್ಟಿಗೆ ಸೇರಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ.

ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಭದ್ರತೆ

ಬೆಳಗಾವಿ: ಬಾಂಬ್ ಬೆದರಿಕೆ ಸಂದೇಶ ಬಂದಿದ್ದರಿಂದ ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಭಾನುವಾರ ಹೆಚ್ಚಿನ ಭದ್ರತೆ ಒದಗಿಸಲಾಗಿತ್ತು.

ಅಧಿಕಾರಿಗಳು ಮತ್ತು ಪೊಲೀಸರು, ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದವರು ವಿಮಾನ ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದರು.

'ವಿಮಾನ ನಿಲ್ದಾಣದ ಇ-ಮೇಲ್ ಐಡಿಗೆ ಅ. 18 ಮತ್ತು 19ರಂದು ಎರಡು ಬೆದರಿಕೆ ಮೇಲ್ ಬಂದಿವೆ. ಈ ಸಂಬಂಧ ಮಾರಿಹಾಳ ಠಾಣೆಯಲ್ಲಿ ದೂರು ದಾಖಲಿಸಿದ್ದು, ಇಡೀ ನಿಲ್ದಾಣದಲ್ಲಿ ಭದ್ರತೆ ಬಿಗಿಗೊಳಿಸಿದ್ದೇವೆ. ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಅಗತ್ಯ ಕ್ರಮ ವಹಿಸಿದ್ದೇವೆ. ವೇಳಾಪಟ್ಟಿಗೆ ಅನುಗುಣವಾಗಿ ಎಲ್ಲ ವಿಮಾನಗಳೂ ಭಾನುವಾರ ಹಾರಾಟ ನಡೆಸಿವೆ' ಎಂದು ವಿಮಾನ ನಿಲ್ದಾಣ ನಿರ್ದೇಶಕ ಎಸ್.ತ್ಯಾಗರಾಜನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಇಡೀ ವಿಮಾನ ನಿಲ್ದಾಣದ ಒಳಗೆ ಮತ್ತು ಹೊರಗೆ ತಪಾಸಣೆ ಮಾಡಲಾಗಿದೆ. ಆದರೆ, ಬಾಂಬ್ ಇರುವ ಬಗ್ಗೆ ಯಾವುದೇ ಸುಳಿವೂ ಸಿಕ್ಕಿಲ್ಲ. ಇ-ಮೇಲ್ ಮೂಲಕ ಬೆದರಿಕೆ ಹಾಕಿದವರ ಪತ್ತೆಗೆ ತನಿಖೆ ನಡೆಸುತ್ತಿದ್ದೇವೆ' ಎಂದು ನಗರ ಪೊಲೀಸ್ ಉಪ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ರೋಹನ್ ಜಗದೀಶ ತಿಳಿಸಿದ್ದಾರೆ.

ಬೆಂಗಳೂರು, ಬೆಳಗಾವಿ ವಿಮಾನ ನಿಲ್ದಾಣಗಳಿಗೂ ಬೆದರಿಕೆ

ಒಂದನೇ ಪುಟದಿಂದ...

ಕೂಡಲೇ ಕಾರ್ಯಪ್ರವೃತ್ತರಾದ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಹಾಗೂ ಹೊರಡುವ ಎಲ್ಲಾ ವಿಮಾನಗಳನ್ನೂ ತಪಾಸಣೆ ಮಾಡಿದರು. ಬಳಿಕ ಇದೊಂದು ಹುಸಿ ಬಾಂಬ್ ಬೆದರಿಕೆ ಎಂದು ತಿಳಿದು ಬಂದಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ಗಳ ಆಗಮನ ಮತ್ತು ನಿರ್ಗಮನ ದ್ವಾರಗಳಲ್ಲಿ ಶ್ವಾನದಳದ ಮೂಲಕ ಪರಿಶೀಲನೆ ಮಾಡಲಾಯಿತು. ತಪಾಸಣೆ ಕಾರ್ಯಾಚರಣೆಯಿಂದಾಗಿ ಮಧ್ಯಾಹ್ನದಿಂದ ಹಲವು ವಿಮಾನಗಳ ಹಾರಾಟ ಸಮಯದಲ್ಲಿ ಸ್ವಲ್ಪ ವ್ಯತ್ಯಯವಾಗಿದೆ. ಕೆಲವು ವಿಮಾನಗಳು ತಡವಾಗಿ ಸಂಚರಿಸಿದವು.

ವಿಮರ್ಶಕ ಜಿ.ಎಸ್‌.ಆಮೂರ ಜನ್ಮ ಶತಮಾನೋತ್ಸವ ಉದ್ಘಾಟನಾ ಸಮಾರಂಭ

'ಬರಹ ತಪಸ್ವಿಯಾಗಿದ್ದ ಜಿ.ಎಸ್.ಆಮೂರ'

ಪ್ರಜಾವಾಣಿ ವಾರ್ತೆ

ಧಾರವಾಡ: 'ವಿಮರ್ಶಕ ಜಿ.ಎಸ್.ಆಮೂರ ಅವರು ಬರವಣಿಗೆಯ ಬದುಕನ್ನು ತಪಸ್ಸಿನಂತೆ ಸಾಗಿಸಿದರು. ಅವರ ಕಾರ್ಯಗಳು, ದಾರಿಗಳು ಬರಹಗಾರರಿಗೆ ಪ್ರೇರಕ ಶಕ್ತಿ' ಎಂದು ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಬಣ್ಣಿಸಿದರು.

ನಗರದ ಜಿ.ಬಿ.ಜೋಶಿ ಮೆಮೊರಿಯಲ್ ಟ್ರಸ್ಟ್, ಡಾ.ಜಿ.ಎಸ್.ಆಮೂರ ಜನ್ಮ ಶತಮಾನೋತ್ಸವ ಸಮಿತಿ ವತಿಯಿಂದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಜಿ.ಎಸ್.ಆಮೂರ ಜನ್ಮ ಶತಮಾನೋತ್ಸವ' ಸಮಾರಂಭದಲ್ಲಿ ಅವರು ಮಾತನಾಡಿದರು.

'ಆಮೂರ ಅವರ ಬರವಣಿಗೆ ಯನ್ನು ಎರಡು (ಕನ್ನಡ ಮತ್ತು ಇಂಗ್ಲಿಷ್) ಪರ್ವಗಳಲ್ಲಿ ಕಾಣಬಹುದು. ಅವರ 57ನೇ ವರ್ಷದವರೆಗೆ ಇಂಗ್ಲಿಷ್ ಪರ್ವದಲ್ಲಿ ತೊಡಗಿಕೊಂಡಿದ್ದರು. ಆನಂತರ ಕನ್ನಡ ಪರ್ವದಲ್ಲಿ ತೊಡಗಿಕೊಂಡರು. 'ಹಳೆಗನ್ನಡ, ನಡುಗನ್ನಡ ಓದುವ ಅವಶ್ಯಕತೆ ಇಲ್ಲ' ಎಂಬ ವಾದಗಳು ನವ್ಯ ಸಾಹಿತ್ಯದ ಆರಂಭದಲ್ಲಿ ಎದ್ದಿದ್ದವು. ನವ್ಯ ಮತ್ತು ನವೋದಯದ ಕಾರಣಗಳನ್ನು ಒಟ್ಟಾಗಿ ಅವಲೋಕಿಸಿದಾಗ ಯಾವ ಕಾಲಗಳು ಯಾವುದನ್ನು ಒಳಗೊಂಡವು, ಯಾವುದನ್ನು ಕೈಬಿಟ್ಟವು ಎಂಬುದು ಮುಖ್ಯ. ಕೈಬಿಟ್ಟ ಕಾಲದಲ್ಲಿ ಆಮೂರ ಬರೆಯವು ದನ್ನು ಆರಂಭಿಸಿ ಅದನ್ನು ಮೀರುವ ಪ್ರಯತ್ನ ಮಾಡಿದರು' ಎಂದರು.

'ಆಮೂರ ಅವರು ಸಾಹಿತ್ಯ, ತತ್ವ ಮತ್ತು ಸಾಹಿತ್ಯದ ಪ್ರಯೋಗವನ್ನು ಪ್ರತ್ಯೇಕವಾಗಿ ನೋಡಿದ ಬಗೆ ಒಂದಿದೆ. ಕುವೆಂಪು, ಬೇಂದ್ರೆ, ಯು.ಆರ್.ಅನಂತಮೂರ್ತಿ, ನಿರಂಜನ ಅವರೆಲ್ಲರ ಕುರಿತು ಸಮಗ್ರ ಅಧ್ಯಯನ ಪುಸ್ತಕಗಳನ್ನು ಆಮೂರ ರಚಿಸಿದ್ದಾರೆ' ಎಂದರು. ಈ ಸಂದರ್ಭದಲ್ಲಿ ಬಿಡುಗಡೆ ಯಾದ 'ಒಳಗಿರುವ ಬೆಳಕು' ಕೃತಿ ಕುರಿತು ಕೃತಿ ಸಂಪಾದಕ ಜಿ.ಎಂ. ಹೆಗಡೆ ಮಾತನಾಡಿ, 'ಬೇಂದ್ರೆ ಸಾಹಿತ್ಯ ವಿಮರ್ಶೆ ಕುರಿತು ಆಮೂರ ಅವರ ಅಧ್ಯಯನದ ಆಳ ಜ್ಞಾನದ ವಿವಿಧ ಮುಖಗಳನ್ನು ಕಟ್ಟಿಕೊಡಲಾಗಿದೆ' ಎಂದರು.

ಸಾಹಿತಿ ರಾಜೇಂದ್ರ ಚೆನ್ನಿ, ಪ್ರೊ.ಮಲ್ಲಿಕಾರ್ಜುನ ಹಿರೇಮಠ, ಲೇಖಕಿ ಎಂ.ಎಸ್.ಆಶಾದೇವಿ ಮಾತನಾಡಿದರು. ಲೇಖಕ ಹ.ವೆಂ.ಕಾಖಂಡಿಕಿ ನಿರೂಪಣೆ ಮಾಡಿದರು.

ಜಿ.ಎಸ್‌.ಆಮೂರ ಜನ್ಮ ಶತಮಾನೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಎಚ್‌.ಎಸ್‌.ರಾಘವೇಂದ್ರ ರಾವ್ ಮಾತನಾಡಿದರು. ಪ್ರೊ.ಮಲ್ಲಿಕಾರ್ಜುನ ಹಿರೇಮಠ, ರಾಘವೇಂದ್ರ ಪಾಟೀಲ, ರಮಾಕಾಂತ ಜೋಶಿ, ವೀಣಾಶಾಂತೇಶ್ವರ, ಜಿ.ಎಂ.ಹೆಗಡೆ, ಶ್ಯಾಮ ಆಮೂರ ಪಾಲ್ಗೊಂಡಿದ್ದರು

ಪುಸ್ತಕ ವಿವರ

ಕೃತಿ: ಒಳಗಿರುವ ಬೆಳಕು (ಜಿ.ಎಸ್.ಆಮೂರರ 'ಭುವನದ ಭಾಗ್ಯ'ದ ನಂತರದ ಬೇಂದ್ರೆ ಸಾಹಿತ್ಯದ ವಿಮರ್ಶೆಯ ಲೇಖನಗಳು)
ಸಂಪಾದಕ: ಜಿ.ಎಂ.ಹೆಗಡೆ
ಪ್ರಕಾಶನ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಪುಟ: 312, ಬೆಲೆ: ₹ 300

ಕುಟುಂಬ ಮತ್ತು ಸ್ನೇಹಿತರಿಗೆ ಸವಿಯೂಟ

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 3 Powered by Sri Krishna

ಕರುನಾಡ ಸವಿಯೂಟ ಸೀಸನ್-3 ಪಾಕ ಪದ್ಧತಿಯ ಈ ವಾರದ ವಿಶೇಷ ಹುರುಳಿ ಕಾಳು ಬಸ್ಸಾರು ಮತ್ತು ಮಲೆನಾಡು ಕೋಳಿ ಸಾರು. ಪ್ರಸಿದ್ಧ ಬಾಣಸಿಗರಾದ ಸಿಹಿ ಕಹಿ ಚಂದ್ರು ಮತ್ತು ಆದರ್ಶ್ ತತ್ಪತಿ ಅವರಿಂದ ನಿಮ್ಮ ಕುಟುಂಬ ಮತ್ತು ನಿಮ್ಮ ಸ್ನೇಹಿತರಿಗೆ ಸವಿಯೂಟದ ಸತ್ಕಾರ. ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸಲಿರುವ ಈ ಅಡುಗೆಗಳಿಗೆ ಶ್ರೀ ಕೃಷ್ಣ ಹಸುವಿನ ತುಪ್ಪ ಸಹಯೋಗ ನೀಡಲಿದೆ.

ಹುರುಳಿ ಕಾಳು ಬಸ್ಸಾರು

ಬೇಕಾದ ಪದಾರ್ಥಗಳು: ಮೊಳಕೆ ಹುರುಳಿಕಾಳು 2 ಕಪ್, -ಹೆಚ್ಚಿದ ಈರುಳ್ಳಿ 1, ಬೆಳ್ಳುಳ್ಳಿ 8 ಎಸಳು, ಅರ್ಧ ಕಪ್ ತೆಂಗಿನತುರಿ, ಗುಂಟೂರು ಮೆಣಸಿನಕಾಯಿ 4, ಬ್ಯಾಡಗಿ ಮೆಣಸಿನಕಾಯಿ 8, ಹುಣಿಸೆಹಣ್ಣಿನ ರಸ 2 ಚಮಚ, ಬೆಲ್ಲ 1 ಚಮಚ, ದನಿಯಾ 2 ಚಮಚ, ಜೀರಿಗೆ 1 ಚಮಚ, ಮೆಂತ್ಯ ಕಾಲು ಚಮಚ, ದಾಲ್ಚಿನ್ನಿ 1 ಇಂಚು, ಲವಂಗ 4, ಕಾಳುಮೆಣಸು ಅರ್ಧ ಚಮಚ, ಕರಿಬೇವು ಎಲೆ 10, ಎಣ್ಣೆ, 2 ಚಮಚ, ಅರ್ಧ ಚಮಚ ಸಾಸಿವೆ, ಇಂಗು ಕಾಲು ಚಮಚ, ಉಪ್ಪು ರುಚಿಗೆ ತಕ್ಕಷ್ಟು.

ಮಾಡುವ ವಿಧಾನ: ಕುಕ್ಕರ್‌ನಲ್ಲಿ ಮೊಳಕೆ ಕಟ್ಟಿದ ಹುರುಳಿಕಾಳು ಹಾಕಿ ಅದಕ್ಕೆ ಮೂರು ಲೋಟ ನೀರು ಮತ್ತು ಸ್ವಲ್ಪ ಉಪ್ಪು ಬೆರೆಸಿ, ಮುಚ್ಚಳ ಮುಚ್ಚಿ ಮೂರು ವಿಸಿಲ್ ಬರುವವರೆಗೆ ಬೇಯಿಸಿ. ತಣ್ಣಗಾಗುವವರೆಗೆ ಬಿಡಿ. ಒಂದು ಪ್ಯಾನ್ ಮೇಲೆ ಗುಂಟೂರು ಮತ್ತು ಬ್ಯಾಡಗಿ ಮೆಣಸಿನಕಾಯಿ, ದನಿಯಾ, ಜೀರಿಗೆ, ಮೆಂತ್ಯ, ಚಕ್ಕೆ, ಲವಂಗ, ಕರಿಮೆಣಸು ಒಂದೊಂದಾಗಿ ಹುರಿದುಕೊಳ್ಳಿ. ನಂತರ ಅದೇ ಪ್ಯಾನ್‌ನಲ್ಲಿ ಹೆಚ್ಚಿಟ್ಟ ಈರುಳ್ಳಿ ಹಾಗೂ ಬೆಳ್ಳುಳ್ಳಿ ಎಸಳುಗಳಿಗೆ ಒಂದು ಚಮಚ ಎಣ್ಣೆ ಹಾಕಿ ಬಾಡಿಸಿ. ತೆಂಗಿನ ತುರಿ, ಹುಣಿಸೆಹುಳಿ ಸೇರಿದಂತೆ ಎಲ್ಲ ಪದಾರ್ಥಗಳನ್ನು ಮಿಕ್ಸಿ ಜಾರ್‌ಗೆ ಹಾಕಿಕೊಂಡು ನುಣ್ಣಗೆ ರುಬ್ಬಿಕೊಳ್ಳಿ. ಕುಕ್ಕರ್ ಮುಚ್ಚಳ ತೆಗೆದು ಹುರುಳಿಕಾಳ ಕಟ್ಟು (ನೀರನ್ನು) ಸೋಸಿ ಬೇರ್ಪಡಿಸಿ. ಹುರುಳಿಕಟ್ಟು ಒಂದು ಪಾತ್ರೆಗೆ ಹಾಕಿ, ಅದಕ್ಕೆ ರುಬ್ಬಿಟ್ಟ ಪೇಸ್ಟ್ ಅನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಅಗತ್ಯಕ್ಕೆ ತಕ್ಕಂತೆ ನೀರು ಬೆರಿಸಿ. ಉಪ್ಪು ಸೇರಿಸಿ ಸ್ಟೋವ್ ಮೇಲೆ ಕುದಿಯಲು ಇಡಿ. ತುಪ್ಪ, ಇಂಗು, ಸಾಸಿವೆ ಮತ್ತು ಕರಿಬೇವಿನ ಒಗ್ಗರಣೆ ಮಾಡಿಕೊಂಡು ಸಾರಿಗೆ ಹಾಕಿ ಕೆಳಗಿಸಿ. ಕೊತ್ತಂಬರಿ ಸೊಪ್ಪನ್ನು ಸಣ್ಣಗೆ ಹೆಚ್ಚಿ ಹಾಕಿದರೆ ರುಚಿಕರ ಮೊಳಕೆ ಹುರುಳಿಕಾಳಿನ ಬಸ್ಸಾರು ತಯಾರು.

ಮಲೆನಾಡು ಕೋಳಿ ಸಾರು

ಬೇಕಾದ ಪದಾರ್ಥಗಳು: **1 ಕೆ.ಜಿ. ಕೋಳಿ ಮಾಂಸ, 2 ಮಧ್ಯಮ ಗಾತ್ರದ ಈರುಳ್ಳಿ, 1 ಚಮಚ ಶುಂಠಿ, ಬೆಳ್ಳುಳ್ಳಿ ಪೇಸ್ಟ್, 2 ಮಧ್ಯಮ ಗಾತ್ರದ ಟೊಮೊಟೊ, ಒಂದು ಚಮಚ ದನಿಯ, ಒಂದು ಚಮಚ ಜೀರಿಗೆ, 4-5 ಬ್ಯಾಡಗಿ ಮೆಣಸಿನಕಾಯಿ, 2-3 ಗುಂಟೂರು ಮೆಣಸಿನಕಾಯಿ, ಅರ್ಧ ಸ್ಪೂನ್ ಹರಿಶಿನ ಪುಡಿ, ಅರ್ಧ ಚಮಚ ಕೆಂಪು ಮೆಣಸಿನ ಪುಡಿ, ಅರ್ಧ ಚಮಚ ಗರಂ ಮಸಾಲ, ಕರಿಮೆಣಸಿನ ಮತ್ತು ಕೆಂಪು ಮೆಣಸಿನ ಪುಡಿ, 2 ಚಮಚ ತೆಂಗಿನಎಣ್ಣೆ, 2 ಚಮಚ ತೆಂಗಿನಕಾಯಿ ಹಾಲು, ಸ್ವಲ್ಪ ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು.**

ಮಾಡುವ ವಿಧಾನ: ದನಿಯಾ, ಜೀರಿಗೆ, ಬ್ಯಾಡಗಿ ಕೆಂಪು ಮೆಣಸಿನಕಾಯಿ

ಹುರಿದುಕೊಂಡು ಮಿಕ್ಸಿಗಾಗಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಪ್ಯಾನ್ ಮೇಲೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಕತ್ತರಿಸಿಟ್ಟ ಈರುಳ್ಳಿ, ಬೆಳ್ಳುಳ್ಳಿ ಮತ್ತು ಶುಂಠಿ ಬೆಳ್ಳುಳ್ಳಿ ಪೇಸ್ಟ್ ಹಾಕಿ, ಈರುಳ್ಳಿ ಕಂದು ಬಣ್ಣ ಬರುವವರೆಗೆ ಬಾಡಿಸಿ. ನಂತರ ಹೆಚ್ಚಿದ ಟೊಮೆಟೊ, ಹರಿಶಿನ, ಗರಂ ಮಸಾಲ ಮತ್ತು ಕರಿಮೆಣಸು ಕಾಳನ್ನು ಹಾಕಿ. ಟೊಮೆಟೊ ಮೆತ್ತಗಾಗುವವರೆಗೆ ಬೆಯಿಸಿ. ಇದಕ್ಕೆ ಸಣ್ಣದಾಗಿ ಕತ್ತರಿಸಿ ಕೋಳಿ ತುಂಡುಗಳನ್ನು ಸೇರಿಸಿ. ಪುಡಿ ಮಾಡಿಟ್ಟುಕೊಂಡಿರುವ ಪದಾರ್ಥ ಗಳನ್ನು ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಮಾಂಸದ ತುಂಡುಗಳು ಮುಳುಗುವ ವರೆಗೆ ನೀರನ್ನು ಸೇರಿಸಿ ಕುದಿಯಲು ಇಡಿ. ಕುದಿ ಬಂದ ನಂತರ ಸ್ಟೌವ್ ಅನ್ನು ಸಿಮ್‌ನಲ್ಲಿಟ್ಟು ಮತ್ತೆ 25 ನಿಮಿಷ ಬೆಯಿಸಿ. ತೆಂಗಿನಹಾಲು ಬೆರೆಸಿ 5 ನಿಮಿಷ ಬೆಯಿಸಿ, ಕೊತ್ತಂಬರಿ ಸೊಪ್ಪು ಉದುರಿಸಿದರೆ ಕೋಳಿ ಸಾರು ರೆಡಿ.



ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

LPG Partner: Indane | Hygiene Partner: EXO | Special Partner: KSDA | Associate Sponsors: Philips, Preethi, SSP Hing, Vencobb | Rice Partner: India Gate Basmati Rice | Supported by: Sujay Water Saving Irrigation Systems

ಶಿಕ್ಷಣ



ಸೂತ್ರ ಮರೆಯದಿರುವ ಮಂತ್ರ



ಗಣಿತವೇಕೆ ಕಬ್ಬಿಣದ ಕಡಲೆ? ಈ ಪ್ರಶ್ನೆಯನ್ನು ಮುಂದಿರಿಸಿಕೊಂಡು ಮಕ್ಕಳಿಗೆ ಪ್ರಶ್ನೆ ಕೇಳಿದರೆ, ಸೂತ್ರಗಳೇ ನೆನಪಿರುವುದಿಲ್ಲ. ಒಮ್ಮೆ ಸೂತ್ರ ನೆನಪಾದರೆ ಲೆಕ್ಕಗಳನ್ನು ಪರಿಹರಿಸುತ್ತ ಹೋಗಬಹುದು. ಆದರೆ ಸೂತ್ರಗಳನ್ನು ನೆನಪಿಟ್ಟುಕೊಳ್ಳುವುದು ಹೇಗೆ?

ಬಹುತೇಕ ಮಕ್ಕಳಿಗೆ ಐದು ಆರನೆಯ ತರಗತಿಯಿಂದಲೇ ಗಣಿತ ಕಠಿಣವೆನಿಸುತ್ತ ಹೋಗುತ್ತದೆ. ಹಾಗೆಯೇ ಸೂತ್ರಗಳನ್ನು ಆಧರಿಸಿದ ವಿಷಯಗಳಾದ ಭೌತವಿಜ್ಞಾನವು ಕಠಿಣವೆನಿಸತೊಡಗುತ್ತದೆ. ಸೂತ್ರಗಳನ್ನು ಅರಿತರೆ ಬಿಡಿಸುತ್ತ ಹೋಗುವುದು ಮಕ್ಕಳಿಗೂ ಆಸಕ್ತಿಕರ ಆಟವಾಗಿ ಬದಲಾಗುತ್ತದೆ. ಆದರೆ ಸೂತ್ರಗಳನ್ನು ಬಾಯಿಪಾಠ ಮಾಡಿಸದೇ ಕಲಿಸಬಹುದೆ?

ಬಾಯಿಪಾಠ ಮಾಡಿಸುವ ಮೊದಲು ಸೂತ್ರಗಳನ್ನು ಅರ್ಥ ಮಾಡಿಸುವುದು ಬಹಳ ಮುಖ್ಯವಾಗಿದೆ. ಹೀಗೆ ಅರ್ಥ ಮಾಡಿಸುವಾಗ ಮೂಲಸೂತ್ರವೇನು? ಅವುಗಳಲ್ಲಿ ಸೂಚಿಸುವ ಬೀಜಾಕ್ಷರಗಳು ಹೇಗೆ ವರ್ತಿಸುತ್ತವೆ? ಸಂಖ್ಯೆಗಳ ನಡುವಿನ ಸಂಕೇತಗಳು, ಸಂಕಲನ ಮತ್ತು ವ್ಯವಕಲನಗಳ ಚಿಹ್ನೆಗಳೊಂದಿಗೆ ಸೂತ್ರದಲ್ಲಿ ಬರುವ ಕಂಸ (), {}, ಗಳ ಅರ್ಥವನ್ನೂ ತಿಳಿಸಬೇಕು.

ಪ್ರತಿ ಸಂಖ್ಯೆಯ ಗುಣ, ಸಂಕೇತಗಳ ಅರ್ಥ ಮತ್ತು ಅವುಗಳ ನಿಯಮಗಳನ್ನು ಕಲಿಸಬೇಕು. ಆಗ ಸೂತ್ರವನ್ನು ವಿವರಿಸುವುದು ಸುಲಭವಾಗುತ್ತದೆ.

ಈಗ ಬೀಜಗಣಿತದ ಸೂತ್ರಗಳು, ಭೌತವಿಜ್ಞಾನದ ಸೂತ್ರಗಳು, ಅಂಕಗಣಿತದ ಸೂತ್ರಗಳು ಇವೆಲ್ಲವನ್ನೂ ಕಲಿಸುವ ಮೊದಲೇ ಮೂಲಗುಣಗಳನ್ನು ಹೇಳಿಕೊಡಬೇಕು. ಮಕ್ಕಳಿಗೆ ಅರ್ಥವಾಗದೇ ಇದ್ದಾಗ ಮಕ್ಕಳನ್ನೇ ರೂಪಕಗಳಾಗಿಸಿ ತಿಳಿಸಿಕೊಡಬೇಕು. ಒಮ್ಮೆ ಸೂತ್ರದ ಸ್ವರೂಪ ತಿಳಿದ ನಂತರ, ಉರುವು ಹಚ್ಚಿದರೆ ಗಣಿತವನ್ನು ಸಲೀಸಾಗಿ ಅನ್ವಯಿಸುವುದನ್ನು ಕಲಿಯುತ್ತಾರೆ.

ಅಭ್ಯಾಸ ಮಾಡಿಸಿ: ಉರು ಹೊಡೆಯುವ ಬದಲು ಬರೆಬರೆದು ತೆಗೆಯಬೇಕು. ಅಭ್ಯಾಸ ಮಾಡಿಸಿದಷ್ಟೂ ಹೆಚ್ಚು ಹೆಚ್ಚು ಮನವರಿಕೆಯಾಗುತ್ತವೆ.

ನೆನಪಿಗೂ ಮಂತ್ರ

ನೆನಪಿನಲ್ಲಿರಿಸಿಕೊಳ್ಳಲು ಸೂತ್ರಕ್ಕೆ ಅನುಗುಣವಾಗಿ ನೆನಪಿನಲ್ಲಿಡಬಹುದಾದ ಪರ್ಯಾಯ ಪದಗಳನ್ನು ಸೂಚಿಸಿ. ಅವು ಮಕ್ಕಳಿಗೆ ನಿತ್ಯದ ಬದುಕಿನಲ್ಲಿ ಬಳಸುವಂಥವಾಗಿರಬೇಕು. ಗುಣಿಸು ಪದವನ್ನು ಗುಣಕ್ಕೂ, ಕೂಡಿಸುವುದಕ್ಕೆ ಕೂಡಲು.. ಹೀಗೆ ನೆನಪಿಡುವಂಥ ಸಮೀಪದ ಪದಗಳನ್ನು ಸೂಚಿಸಬೇಕು.

ಚಿತ್ರಕ ಸ್ಮರಣೆ: ಚಿತ್ರಕಶಕ್ತಿ ಹೆಚ್ಚುವಂತೆ ಚಿತ್ರಗಳ ಮೂಲಕ ಸ್ಮರಿಸುವುದನ್ನು ಹೇಳಿಕೊಡಿ. ಈ ಅಭ್ಯಾಸಕ್ಕೆ ಮಕ್ಕಳು ತಮಗಿಷ್ಟದ ಚಿತ್ರಗಳನ್ನು ಕಲ್ಪಿಸಿಕೊಳ್ಳಲು ಮುಕ್ತರಾಗಿರಬೇಕು.

ಪರಿಸರ: ಸೂತ್ರಗಳನ್ನು ಕಲಿಯುವಾಗ ಮನೆಯ ಟಿ.ವಿ, ರೇಡಿಯೊಗಳೆಲ್ಲ ಮೌನವಾಗಿರಲಿ. ನಿಮ್ಮ ಮೊಬೈಲ್ ಫೋನ್ ಸಹ ದೂರವಿರಲಿ. ಯಾವುದೇ ಬಗೆಯ ಅಡೆತಡೆಗಳಿಲ್ಲದೆ ಸೂತ್ರಗಳನ್ನು ಕಲಿಯುವಂತಾಗಲಿ.

ಶ್ರವಣ, ಸ್ಮರಣ, ಮನನ: ಸೂತ್ರಗಳನ್ನು ಆಗಾಗ ವಿದ್ಯಾರ್ಥಿಗಳು ಪರಸ್ಪರ ಹೇಳಿಕೊಳ್ಳಲಿ. ಹೀಗೆ ಇನ್ನೊಬ್ಬರು ಹೇಳುವುದನ್ನು ಕೇಳಿದಾಗಲೂ ಸ್ಮರಣೆಯ ಕೋಶಕ್ಕೆ ಇಳಿಯುತ್ತವೆ. ಮನನವಾಗುವುದು ಹೀಗೆ ಕೇಳುವುದರಿಂದ. ಕೇಳಿದ್ದನ್ನು ಬರೆಯುವುದರಿಂದ.

ಕಣ್ಣಿಗೆ ಕಾಣಲಿ: ನಿಮಗೆ ಕಠಿಣವೆನಿಸುವ ಸೂತ್ರಗಳನ್ನು ಆಗಾಗ ಬರೆದು, ನಿಮ್ಮ ಓದುವ ಮೇಜಿನ ಮುಂದೆ, ನಿಮ್ಮ ಗಮನ ಸೆಳೆಯುವಲ್ಲಿ ಬರೆದು ಅಂಟಿಸಿ. ಆಗಾಗ ಅವನ್ನು ನೋಡುತ್ತ, ಹೇಳಿಕೊಳ್ಳುತ್ತ ಇದ್ದರೆ ಸೂತ್ರಗಳು ಬಾಯಿಪಾಠವಾಗುತ್ತವೆ.

ಹೀಗೆ ಮನನವಾಗಿರುವ ಸೂತ್ರಗಳನ್ನು ವಿದ್ಯಾರ್ಥಿಗಳು ಎಲ್ಲಿ ಬೇಕಾದರೂ ಅನ್ವಯಿಸಿ, ವಿಷಯಗಳಲ್ಲಿ ಆಸಕ್ತಿಯನ್ನು ಮೂಡಿಸುತ್ತವೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ಬಿವೈಪಿಎಲ್ ಸಶಕ್ತ್

ಸಮಾಜದ ಹಿಂದುಳಿದ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಮುಂದುವರಿಸಲು ಬಿಎಸ್ಇಎಸ್ ಯಮುನಾ ಪವರ್ ಲಿಮಿಟೆಡ್ (ಬಿವೈಪಿಎಲ್) ನೀಡುವ ಅವಕಾಶ ಇದಾಗಿದೆ.

ಅರ್ಹತೆ: ಪಿಯುಸಿ ಕಲಿಯುತ್ತಿರಬೇಕು. ಮುಂಚಿನ ಪರೀಕ್ಷೆಗಳಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳನ್ನು ಪಡೆದಿರಬೇಕು. ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ₹ 6,00,000 ಮೀರಬಾರದು.
ಆರ್ಥಿಕ ನೆರವು: ₹ 30,000ದವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನ: 14-11-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/BYPL5

ಡಿಎಕ್ಸ್‌ಸಿ ಪ್ರೊಗ್ರೆಸಿಂಗ್ ಮೈಂಡ್ಸ್

ಡಿಎಕ್ಸ್‌ಸಿ ಟೆಕ್ನಾಲಜಿಯ ಉಪಕ್ರಮವಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಕ್ರೀಡಾ ವೆಚ್ಚಗಳಿಗೆ ನೆರವು ನೀಡಲಿದೆ.

ಅರ್ಹತೆ: ಸ್ಟೆಮ್-ಸಂಬಂಧಿತ ಕ್ಷೇತ್ರಗಳಲ್ಲಿ ಯಾವುದೇ ವರ್ಷದ ಪದವಿ ಅಭ್ಯಾಸ ಮಾಡುತ್ತಿರುವ ಮಹಿಳೆಯರು ಮತ್ತು ಲಿಂಗಪರಿವರ್ತಿತರು ಅರ್ಜಿ ಸಲ್ಲಿಸಬಹುದು.
13ರಿಂದ 25 ವರ್ಷ ವಯಸ್ಸಿನೊಳಗಿನ ಮತ್ತು ಕಳೆದ ಮೂರು ವರ್ಷಗಳಲ್ಲಿ ರಾಜ್ಯ/ ರಾಷ್ಟ್ರೀಯ / ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ / ದೇಶವನ್ನು ಪ್ರತಿನಿಧಿಸಿರುವ ಮಹಿಳಾ ಕ್ರೀಡಾಪಟುಗಳೂ ಅರ್ಜಿ ಸಲ್ಲಿಸಬಹುದು.
ಹಿಂದಿನ ತರಗತಿ/ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60ಅಂಕಗಳನ್ನು ಪಡೆದಿರಬೇಕು.
ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹4,00,000ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು (ಕ್ರೀಡಾಪಟುಗಳಿಗೆ ₹5,00,000)
ಆರ್ಥಿಕನೆರವು: ಸ್ಟೆಮ್‌ನಲ್ಲಿ ಪದವಿಗೆ - ₹50,000
ಕ್ರೀಡಾಪಟುಗಳಿಗೆ - ₹1,25,000
ಅರ್ಜಿ ಸಲ್ಲಿಸಲು ಕೊನೆ ದಿನ: 31-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/DXCS4

ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್

ಎಸ್‌ಬಿಐ ಫೌಂಡೇಷನ್‌ನ ಉಪಕ್ರಮವಾಗಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲಿದೆ.

ಅರ್ಹತೆ: 6 ರಿಂದ 12 ನೇ ತರಗತಿಯವರೆಗಿನ ಶಾಲಾ ವಿದ್ಯಾರ್ಥಿಗಳು, ಅಗ್ರ 100 ಎನ್‌ಐಆರ್‌ಎಫ್ ವಿಶ್ವವಿದ್ಯಾಲಯಗಳು/ಕಾಲೇಜುಗಳ ಪದವಿಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಐಐಟಿಗಳ ಪದವಿಪೂರ್ವ ವಿದ್ಯಾರ್ಥಿಗಳು ಮತ್ತು ಐಐಎಂಗಳ ಎಂಬಿಎ/ಪಿಜಿಡಿಎಂ ಕೋರ್ಸ್‌ಗಳಲ್ಲಿ ಕಲಿಯುತ್ತಿರುವವರು ಅರ್ಜಿ ಸಲ್ಲಿಸಬಹುದು. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75 ಅಂಕಗಳನ್ನು ಗಳಿಸಿರಬೇಕು. ವಾರ್ಷಿಕ ಆದಾಯವು ₹ 6 ಲಕ್ಷದವರೆಗೆ ಇರಬೇಕು (6-12ನೇ ತರಗತಿಯ ವಿದ್ಯಾರ್ಥಿಗಳಾದರೆ ₹ 3 ಲಕ್ಷದವರೆಗೆ).
ಅರ್ಹತೆ: 6 ರಿಂದ 12ನೇ ತರಗತಿಯವರೆಗೆ: ತಲಾ ₹ 15,000 **ಯುಜಿ ವಿದ್ಯಾರ್ಥಿಗಳು:** ₹50,000ದ ವರೆಗೆ
ಪಿಜಿ ವಿದ್ಯಾರ್ಥಿಗಳು: ₹ 70,000ದ ವರೆಗೆ
ಐಐಟಿಗಳ ಯುಜಿ ವಿದ್ಯಾರ್ಥಿಗಳು: ₹2,00,000ದವರೆಗೆ
ಐಐಎಂಗಳ ಎಂಬಿಎ ವಿದ್ಯಾರ್ಥಿಗಳು: ₹7,50,000ದ ವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನ: 31-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/SBIFS7

ಕೋಟಕ್ ಕನ್ಯಾ

ಕೋಟಕ್ ಮಹೀಂದ್ರಾ ಗ್ರೂಪ್ 12ನೇ ತರಗತಿಯ ನಂತರ ವೃತ್ತಿಪರ ಶಿಕ್ಷಣ ಪಡೆಯಲು ಹಂಬಲಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡಲಿದೆ.

ಅರ್ಹತೆ: ಭಾರತದಾದ್ಯಂತ ಇರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಶೇ 75 ಅಥವಾ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು₹ 6,00,000ಕ್ಕಿಂತ ಕಡಿಮೆ ಇರಬೇಕು. ಮಾನ್ಯತೆ ಪಡೆದ ಎನ್‌ಆರ್‌ಎಫ್/ಎನ್‌ಎಎಸಿ ಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ 2024-25 ಶೈಕ್ಷಣಿಕ ವರ್ಷದಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಬಿಡಿಎಸ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ (5 ವರ್ಷಗಳು), ಬಿ.ಎಸ್‌ಸಿ ನರ್ಸಿಂಗ್, ಬಿ.ಫಾರ್ಮಸಿ, ಇಂಟಿಗ್ರೇಟೆಡ್ ಬಿಎಸ್-ಎಂಎಸ್/ಬಿಎಸ್-ರಿಸರ್ಚ್ ಇನ್ ಐಎಸ್‌ಇಆರ್, ಐಐಎಸ್‌ಸಿ (ಬೆಂಗಳೂರು) ಅಥವಾ (ಡಿಸೈನ್, ಆರ್ಕಿಟೆಕ್ಚರ್, ಇತ್ಯಾದಿ) ಇತರ ವೃತ್ತಿಪರ ಕೋರ್ಸ್‌ಗಳ ಮೊದಲ ವರ್ಷಕ್ಕೆ ಪ್ರವೇಶ ಪಡೆದಿರಬೇಕು.
ಆರ್ಥಿಕ ಸಹಾಯ: ವರ್ಷಕ್ಕೆ ₹1.5 ಲಕ್ಷ
ಅರ್ಜಿ ಸಲ್ಲಿಸಲು ಕೊನೆ ದಿನ: 31-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/KKGS3

ನೀಟ್ ಪರೀಕ್ಷೆಗೆ ಸಿದ್ಧತೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ಈ ವರ್ಷದ ನೀಟ್ ಪರೀಕ್ಷೆಯಲ್ಲಿ ನಿರೀಕ್ಷಿಸಿದಷ್ಟು ಫಲಿತಾಂಶ ಬರದೆ ಮೆಡಿಕಲ್ ಸೀಟ್ ಸಿಗಲಿಲ್ಲ. ಹಾಗಾಗಿ ಮುಂದಿನ ವರ್ಷದ ನೀಟ್ ಪರೀಕ್ಷೆಗೆ ತಯಾರಾಗುತ್ತಿದ್ದೇನೆ. ಈ ನಿರ್ಧಾರ ಸರಿಯೇ? ಓದಿದ್ದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ವೈದ್ಯರಾಗಬೇಕೆನ್ನುವ ಗುರಿಯಿಂದ ವಿಚಲಿತರಾಗದೆ, ಅಲ್ಪವಿರಾಮದ ಮೂಲಕ ಹೆಚ್ಚಿನ ಪರಿಶ್ರಮ ಮತ್ತು ಕಾರ್ಯತಂತ್ರದಿಂದ ಮುಂದಿನ ನೀಟ್ ಪರೀಕ್ಷೆಗೆ ತಯಾರಾಗುವ ನಿರ್ಧಾರ ಸರಿಯಾಗಿದೆ. ಓದಿದ್ದು ಜ್ಞಾಪಕದಲ್ಲಿರಬೇಕಾದರೆ ಈ ಸಲಹೆಗಳನ್ನು ಅನುಸರಿಸಿ:

- ತರಗತಿಯಲ್ಲಿ ಭೋಧಿಸುವ ವಿಷಯ ಅರ್ಥವಾಗದಿದ್ದರೆ ಸಂಕೋಚವಿಲ್ಲದೆ ಪ್ರಶ್ನೆಗಳನ್ನು ಕೇಳಬೇಕು. ಏಕೆಂದರೆ, ಪ್ರಶ್ನೆಗಳನ್ನು ಕೇಳುವುದರಿಂದ ವಿಮರ್ಶಾತ್ಮಕ ಚಿಂತನಾ ಕೌಶಲಗಳ ಅಭಿವೃದ್ಧಿಯ ಜತೆಗೆ, ವಿಷಯದ ಬಗ್ಗೆ ಒಳನೋಟಗಳು ಲಭಿಸಿ ಕಲಿಕೆ ಪರಿಣಾಮಕಾರಿಯಾಗುತ್ತದೆ.
- ತರಗತಿಯಲ್ಲಿ ಪರಿಣಾಮಕಾರಿಯಾಗಿ ಟಿಪ್ಪಣಿ (ನೋಟ್ಸ್) ಬರೆಯುವುದರಿಂದ ಕಲಿಕೆಯ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ.
- ಪರಿಣಾಮಕಾರಿ ಓದುವಿಕೆಯ ಕಲೆಯನ್ನು ಎಸ್‌ಕ್ಯು3ಆರ್‌ನಂಥ ತಂತ್ರಗಾರಿಕೆಯ ಮೂಲಕ ರೂಢಿಸಿಕೊಳ್ಳಿ. ಇದರಿಂದ, ಜ್ಞಾಪಕಶಕ್ತಿಯೂ ವೃದ್ಧಿಸುತ್ತದೆ.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೋಗಳನ್ನು ವೀಕ್ಷಿಸಿ:
https://www.youtube.com/watch?v=3PzmKRaJHmk
https://www.youtube.com/watch?v=Y2IPeZ6lbeM

2. ನಾನು ಈಗಷ್ಟೇ ಬಿ.ಎ ಪದವಿಗೆ ಸೇರಿರುವ ಗ್ರಾಮೀಣ ಭಾಗದ ವಿದ್ಯಾರ್ಥಿ. ಮುಂದೆ, ಎಂಬಿಎ ಮಾಡುವ ಯೋಜನೆಯಿದೆ. ಆದರೆ, ಇಂಗ್ಲಿಷ್ ಮಾತನಾಡುವುದರಲ್ಲಿ ಸಮಸ್ಯೆಯಿದೆ. ಸುಲಲಿತವಾಗಿ ಇಂಗ್ಲಿಷ್ ಮಾತನಾಡುವುದು ಮತ್ತು ಕಲಿಯುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಇಂಗ್ಲಿಷ್ ಭಾಷೆ ಕಬ್ಬಿಣದ ಕಡಲೆಯಲ್ಲ; ನಿಮ್ಮ ಅಗತ್ಯಕ್ಕೆ ತಕ್ಕಂತೆ ಸೂಕ್ತವಾದ ಕಾರ್ಯತಂತ್ರ ಮತ್ತು ಪರಿಶ್ರಮವಿದ್ದಲ್ಲಿ, ಇಂಗ್ಲಿಷ್ ಕಲಿಯಬಹುದು. ಮೊದಲಿಗೆ, ಈ ಸಲಹೆಗಳನ್ನು ಅನುಸರಿಸಿ:

- **ಆತ್ಮವಿಶ್ವಾಸ:** ಇಂಗ್ಲಿಷ್ ಭಾಷೆಯನ್ನು ಕಲಿಯುವಾಗ ಹಿಂಜರಿಕೆಯಿಲ್ಲದೆ, ಆತ್ಮವಿಶ್ವಾಸದಿಂದ ಪ್ರಾರಂಭಿಸಿ.
- **ಓದುವುದು:** ಇಂಗ್ಲಿಷ್ ವಾರ್ತಾಪತ್ರಿಕೆಗಳನ್ನು, ಪುಸ್ತಕಗಳನ್ನು, ಲೇಖನಗಳನ್ನು ನಿತ್ಯ ಓದಿ. ಪದಬಳಕೆ, ವಾಕ್ಯ ರಚನೆ, ವ್ಯಾಕರಣವನ್ನು ಗಮನಿಸಿ. ಸಾಧ್ಯವಾದರೆ, ಉಚ್ಚಾರಣೆಗೆ ಸಹಾಯವಾಗುವಂತೆ ಜೋರಾಗಿ ಓದಿ. ಅರ್ಥವಾಗದ ಪದಗಳನ್ನು ನಿಘಂಟಿನ ಮೂಲಕ ಅರ್ಥೈಸಿಕೊಳ್ಳಿ.
- **ಮಾತನಾಡುವುದು:** ಆತ್ಮೀಯರೊಂದಿಗೆ ಸರಳವಾದ ವಿಷಯಗಳನ್ನು ಮಾತನಾಡಲು ಪ್ರಯತ್ನಿಸಿ. ತಪ್ಪು-ಒಪ್ಪುಗಳಾದಲ್ಲಿ, ಸಂಕೋಚವಿಲ್ಲದೆ ಪ್ರಯತ್ನವನ್ನು ಮುಂದುವರಿಸಿ. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು, ಕನ್ನಡಿಯ ಮುಂದೆ ಆಂಗಿಕ ಭಾಷೆಯನ್ನು ಬಳಸಿ ಮಾತನಾಡಿ.
- **ವಿಡಿಯೊ, ಚಲನಚಿತ್ರಗಳ ವೀಕ್ಷಣೆ:** ಕನ್ನಡದ ಉಪಶೀರ್ಷಿಕೆಗಳಿರುವ ಇಂಗ್ಲಿಷ್ ಚಲನಚಿತ್ರಗಳು, ಟಿವಿ ಕಾರ್ಯಕ್ರಮಗಳು, ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಿ. ಅದೇ ರೀತಿ, ಯೂಟ್ಯೂಬ್‌ನಲ್ಲಿ ಇಂಗ್ಲಿಷ್ ಕಲಿಕೆಗೆ ನೆರವಾಗುವ ವಿಡಿಯೊಗಳನ್ನು ವೀಕ್ಷಿಸಿ. ಹಾಗೆಯೇ, ಸಾಧಕರ ಭಾಷಣಗಳನ್ನು ಕೇಳುವುದರಿಂದ ಪ್ರೇರೇಪಿತರಾಗುವುದರ ಜೊತೆಗೆ ಇಂಗ್ಲಿಷ್ ಕಲಿಯುವಿಕೆಗೆ ಸಹಾಯವಾಗುತ್ತದೆ.
- **ಮೊಬೈಲ್ ಅಪ್ಲಿಕೇಶನ್ಸ್ ಬಳಕೆ:** ಇಂಗ್ಲಿಷ್ ಕಲಿಕೆಗೆ ಅನುಕೂಲವಾಗುವ ಹಲವಾರು ಮೊಬೈಲ್ ಅಪ್ಲಿಕೇಶನ್‌ಗಳಿವೆ (ಹೆಲೊ ಇಂಗ್ಲಿಷ್, ಡ್ಯುಒಲಿಂಗೊ, ಹೆಲೊ ಟಾಕ್ ಇತ್ಯಾದಿ). ಇವುಗಳನ್ನು ಬಳಸಿ.

ಈ ಸಲಹೆಗಳನ್ನು ನಿರಂತರವಾಗಿ ಕೆಲವು ತಿಂಗಳ ಕಾಲ ಅನುಸರಿಸಿದ ನಂತರ ನಿಮ್ಮ ಇಂಗ್ಲಿಷ್ ಕಲಿಕೆ ಒಂದು ಹಂತಕ್ಕೆ ತಲುಪುತ್ತದೆ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=NoFcIQAFDCA

3. ನಾನು ಬಿಕಾಂ ಪದವಿ ಮಾಡುತ್ತಿದ್ದು, ಮುಂದೆ ಬಿ.ಇಡಿ ಮಾಡಿ ಶಿಕ್ಷಕಿಯಾಗಬೇಕು. ಬಿ.ಇಡಿ ಕೋರ್ಸ್‌ನಲ್ಲಿ ಕಲಾ ವಿಭಾಗದ ವಿಷಯವನ್ನು ತೆಗೆದುಕೊಳ್ಳಬಹುದೇ?

ಹೆಸರು, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ, ಬಿ.ಇಡಿ ಕೋರ್ಸ್‌ನಲ್ಲಿ ಆಯ್ಕೆ ಮಾಡಿಕೊಳ್ಳುವ ವಿಷಯಗಳನ್ನು ಪದವಿಯಲ್ಲಿ ಓದಿರಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

16) ಯಾವ ಹಿನ್ನೆಲೆಯಲ್ಲಿ 1773ರ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೊಂಡಿತು

ಉತ್ತರ:– (.......ಹಿಂದಿನ ಸಂಚಿಕೆಯಿಂದ)
ಅನೈತಿಕ ವ್ಯವಹಾರಗಳು ಗೊತ್ತಿದ್ದರೂ ಯಾವುದೇ ಕ್ರಮವನ್ನು ಜರುಗಿಸದೇ ಸುಮ್ಮನಿದ್ದುದೇ ಅವನು ಹೀಗೆ ಹೇಳಲು ಕಾರಣವಾಗಿತ್ತು. ಇವರು ಸಂಪಾದಿಸಿದ ಹಣದ ಪ್ರಮಾಣ ಎಷ್ಟಿತ್ತೆಂದರೆ ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯನ್ನು ಬಡುಮೇಲು ಮಾಡಬಹುದೆನ್ನುವ ಆತಂಕ ಇಂಗ್ಲೆಂಡಿನಲ್ಲಿ ಅನೇಕರಿಗಿತ್ತು. ಈ ಹಿನ್ನೆಲೆಯಲ್ಲಿ ರೆಗ್ಯುಲೇಟಿಂಗ್ ಕಾಯ್ದೆ 1773ರಲ್ಲಿ ಜಾರಿಗೊಂಡಿತು.

17) 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳೇನು?

ಉತ್ತರ:– 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳು 1. ಈ ಕಾಯ್ದೆಯು ಜಾರಿಗೆ ಬರುವ ಪೂರ್ವದಲ್ಲಿ ಬ್ರಿಟಿಷರ ಅಧೀನದಲ್ಲಿದ್ದ ಪ್ರಾಂತ್ಯಗಳನ್ನು ಮೂರು ಪ್ರೆಸಿಡೆನ್ಸಿಗಳಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಅವುಗಳು ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಈ ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.

2. ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.

3. ಗವರ್ನರ್ ಜನರಲ್ಲನಿಗೆ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಈ ಕಾನೂನು ನೀಡಿತು.

4 ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ (Court of Directors) ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ. ತೀರ ತುರ್ತಾದ ಸಂದರ್ಭಗಳಲ್ಲಿ ಮಾತ್ರ ಇಂತಹ ನಿಬಂಧನೆಗಳಿಂದ ವಿನಾಯಿತಿ ಇತ್ತು.

5. ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ 'ಸುಪ್ರೀಂ ಕೋರ್ಟ್' ಅನ್ನು ಸ್ಥಾಪಿಸಲಾಯಿತು. ಈ ಕೇಂದ್ರ ನ್ಯಾಯಾಲಯದಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಮತ್ತು ಮೂರು ಜನ ಸಾಮಾನ್ಯ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಿದ್ದರು. ಹೀಗೆ ರೆಗ್ಯುಲೇಟಿಂಗ್ ಕಾಯ್ದೆ, ತನ್ನ ಹೆಸರೇ ಸೂಚಿಸುವಂತೆ ಕಂಪನಿಯನ್ನು ಒಳಗೊಂಡಂತೆ ಒಟ್ಟಾರೆ ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯವಾಗಿತ್ತು

18) 1784ರ ಪಿಟ್ಸ್ ಇಂಡಿಯಾ ಕಾಯ್ದೆ ಬರೆಯಿರಿ

ಉತ್ತರ: 1773ರ ರೆಗ್ಯುಲೇಟಿಂಗ್ ಕಾಯ್ದೆಯಲ್ಲಿ ಕೆಲವು ಅನಿಶ್ಚಿತತೆಗಳು ಇದ್ದವು. ಇವುಗಳನ್ನು ನಿವಾರಿಸುವುದರ ಜೊತೆಗೆ ಬ್ರಿಟಿಷ್ ಸರ್ಕಾರದ ಅಧಿಕಾರವನ್ನು ಮತ್ತು ಕಂಪನಿ ಸರ್ಕಾರಕ್ಕಿದ್ದ ಅಧಿಕಾರದ ಮಿತಿಗಳನ್ನು ಸ್ಪಷ್ಟಪಡಿಸುವುದೇ ಈ ಕಾಯ್ದೆಯ ಪ್ರಮುಖ ಉದ್ದೇಶ. ಇಂಗ್ಲೆಂಡ್‌ನ ಸರ್ಕಾರ ಈ ಕಾಯ್ದೆಯಲ್ಲಿ ಹೊಸ ನಿಬಂಧನೆಗಳನ್ನು ಹೇರುವುದರ ಮೂಲಕ ಭಾರತದಲ್ಲಿ ಕಂಪನಿ ಸರ್ಕಾರವನ್ನು ನಿರ್ಣಾಯಕವಾಗಿ ನಿಯಂತ್ರಿಸಿತು.

ಮತ್ತೊಂದು ಪ್ರಮುಖ ಅಂಶವೆಂದರೆ 'ನಿಯಂತ್ರಣ ಮಂಡಳಿ' (Board of Control) ಎನ್ನುವ ಆರು ಜನ ಕಮಿಷನರ್‌ಗಳನ್ನೊಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಈ ಹಿಂದೆ ಇದ್ದ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು. ಈ ಮಂಡಳಿಯು ನಾಗರಿಕ, ಮಿಲಿಟರಿ, ಕಂದಾಯದ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಪಡೆದಿತ್ತು. ಇಂಗ್ಲೆಂಡಿನಲ್ಲಿ ನಿರ್ದೇಶಕ ಮಂಡಳಿ (Court of Directors) ಮತ್ತು ನಿಯಂತ್ರಣ ಮಂಡಳಿ (Board of Control) ಎರಡೂ ಜಾರಿಯಲ್ಲಿದ್ದವು. "ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬ್ರಿಟಿಷ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆಯೇ ವಿನಾ ಅವರದೇ ಸ್ವಂತ ಹಕ್ಕಲ್ಲ" ಎಂದು ಈ ಕಾಯ್ದೆಯಲ್ಲಿ ಹೇಳುವ ಮೂಲಕ ಭಾರತೀಯರ ರಾಜಕೀಯ ಹಕ್ಕುಗಳನ್ನು ನಿರ್ಣಾಯಕವಾಗಿ ಮೊಟಕುಗೊಳಿಸಿತು. ಈ ಕಾಯ್ದೆಯು ಭಾರತದಲ್ಲಿದ್ದ ಕಂಪನಿಯ ಅಧೀನದ ಪ್ರದೇಶ(The British Possessions)ಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿತು.

19) ಚಾರ್ಟರ್ ಕಾಯ್ದೆಗಳು ಯಾವ ಉದ್ದೇಶದಿಂದ ಜಾರಿಯಾದವು?

ಉತ್ತರ:– ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿ (permit)ಯನ್ನು ವಿಸ್ತರಿಸುವ ಉದ್ದೇಶದಿಂದ. 1793, 1813, 1833 ಮತ್ತು 1853ರಲ್ಲಿ ಚಾರ್ಟರ್ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ಪ್ರತಿ 20 ವರ್ಷಕ್ಕೊಮ್ಮೆ ಕಂಪನಿಗೆ ಪರವಾನಗಿಯನ್ನು ನವೀಕರಣ ಮಾಡುವ ಸಂದರ್ಭದಲ್ಲಿ ಇಂಗ್ಲೆಂಡಿನ ಸರ್ಕಾರ ತೆಗೆದುಕೊಂಡ ಹೊಸ ನೀತಿಗಳನ್ನು ಈ ಕಾಯ್ದೆಗಳಲ್ಲಿ ಸೇರಿಸಲಾಯಿತು.

20) 1813ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳು ಯಾವುವು?

ಉತ್ತರ : 1813ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳು
1. ಈ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು. ಈ ಕಾಯ್ದೆಯು ಜಾರಿಗೊಳ್ಳುವ ಪೂರ್ವದಲ್ಲಿ ಭಾರತದಲ್ಲಿ ವ್ಯಾಪಾರ ಮಾಡುವ ಅಧಿಕಾರವನ್ನು ಕಂಪನಿಗೆ ಮಾತ್ರವಲ್ಲದೆ ಇಚ್ಛೆಯುಳ್ಳವರೆಲ್ಲರಿಗೂ ನೀಡಬೇಕೆಂದು ದೊಡ್ಡ ಹೋರಾಟ ನಡೆಯಿತು. ಈ ಹಿನ್ನೆಲೆಯಲ್ಲಿ ಇಚ್ಛೆಯಿದ್ದವರೆಲ್ಲರಿಗೂ ಈ ಕಾಯ್ದೆಯು ಅವಕಾಶವನ್ನು ಮುಕ್ತವಾಗಿಸಿತು. ಇದರ ಪರಿಣಾಮವಾಗಿ ಮುಕ್ತ ವ್ಯಾಪಾರದ ಹೊಸ ಶಕೆ ಆರಂಭಗೊಂಡಿತು.
2. ಅನುಮತಿ ಮತ್ತು ಪರವಾನಿಗೆಯ ಹೊಸ ಕಾಲ ಆರಂಭವಾಯಿತು. 3. ಇನ್ನು ಮುಂದೆ ಗವರ್ನರ್ ಜನರಲ್ ಮತ್ತು ಸೇನೆಯ ಮಹಾ ಮುಖ್ಯಸ್ಥರನ್ನು (commander-in-chief) ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರವನ್ನು ಹೊಂದಿತು.
4. ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು. ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ಅವರ ನೈತಿಕ ಮತ್ತು ಧಾರ್ಮಿಕ ಬದುಕನ್ನು ಎತ್ತರಿಸುವ ಜವಾಬ್ದಾರಿಯನ್ನು ಮಿಶನರಿ ಸಂಸ್ಥೆಗಳು ವಹಿಸಿಕೊಳ್ಳಬೇಕು ಎಂಬ ನಿರ್ದೇಶನವನ್ನು ನೀಡಲಾಯಿತು.

(ಮುಂದುವರಿಯುವುದು)

II PUC - MATHS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

APPLICATIONS OF DERIVATIVES

MAXIMA AND MINIMA

3. Show the function $f(x) = x^3 - 6x^2 + 12x - 16$ is an increasing function for all x.

Ans: – Given that –

$$f(x) = x^3 - 6x^2 + 12x - 16$$

On differentiating we get,

$$f'(x) = 3x^2 - 12x + 12$$
$$\Rightarrow f'(x) = 3(x^2 - 4x + 4)$$
$$= 3(x-2)^2$$

Since $(x-2)^2$ is a perfect square, it is always positive. Thus f`(x) is positive for all x. Hence f(x) is increasing for all x.

4. Show that as x increases, the function x^{2m+1} where $m > 0$ increases for all values of x.

Soln: – Let $f(x) = x^{2m+1}$

$\therefore f'(x) = (2m+1)x^{2m} = (2m+1)(x^m)^2 > 0$

for all values of x and $m > 0$

$\Rightarrow f(x)$ is an increasing function for all x.

5. Show that $\frac{\log x}{x}$ steadily decreases from 'e' upwards.

Soln:- Let $f(x) = \frac{\log x}{x}$

differentiating the above function we get,

$$f'(x) = \frac{x.\frac{1}{x} - \log x}{x^2} = \frac{1 - \log x}{x^2} < 0$$

$\log x > 1$ as x increases from e.

$\therefore$ f (x) is a decreasing function as x increases from e upwards.

6. When is the function neither minimum nor maximum?

Ans:- The function is neither minimum nor maximum if $\frac{dy}{dx} = 0$ and $\frac{d^2y}{dx^2} = 0$

7. What are the maximum and minimum values of a cosx + b sinx + c?

Ans:- The maximum value of a cosx + b sinx + c is $c + \sqrt{a^2 + b^2}$ and minimum is $c - \sqrt{a^2 + b^2}$.

8. What are the maximum and minimum values of $a \sin^2 x + b \cos^2 x$, if $a > b$?

Ans:- The maximum value of $a \sin^2 x + b \cos^2 x$, if $a > b$ is a and minimum value is b respectively.

9. Mention the working rule in determining the values of x for which the function f(x) is increasing or decreasing.

Ans:- The following is the working rule in determining the values of x for which the function f(x) is increasing or decreasing –

(a) Find f`(x) by differentiating the function f(x)

(b) To find the values of x for which f (x) is increasing, find the values of x for which $f'(x) > 0$.

(c) To find the values of x for which f (x) is decreasing, find the values of x for which $f'(x) < 0$.

10. Find the values of x for which the function $f(x) = \frac{x}{x^2+1}$ is increasing or decreasing.

Soln: – Given that $f(x) = \frac{x}{x^2+1}$

On differentiating we get

$$f'(x) = \frac{(x^2+1).1 - x(2x)}{(x^2+1)^2}$$
$$= \frac{x^2+1-2x^2}{(x^2+1)^2} = \frac{1-x^2}{(x^2+1)^2}$$

We see that $(x^2+1)^2$ is a perfect square hence it is always positive.

Consider $1 - x^2 = (1+x)(1-x)$

$x^2 - 1 = 0 \Rightarrow (x-1)(x+1) = 0$

$\Rightarrow x = 1, -1 \; (-1 < 1)$

$x^2 - 1 < 0$ for $-1 < x < 1$

$\Rightarrow -(x^2-1) = 1 - x^2 > 0$ for $-1 < x < 1$

$x^2 - 1 > 0$ for $x < -1$ (or) $x > 1$

$\Rightarrow -(x^2-1) = 1 - x^2 < 0$ for $x < -1$ (or) $x > 1$

Thus, $f'(x) > 0$ for $-1 < x < 1$ and

$f'(x) < 0$ for $x < -1$ or $x > 1$

Hence, f(x) is increasing for $-1 < x < 1$ and $f'(x) < 0$ for $x < -1$ (or) $x > 1$

11. Determine the values of x for which the function $f(x) = \frac{x}{\log x}; \; (x \neq 1)$ is increasing and for which it is decreasing.

Soln: – Given that $f(x) = \frac{x}{\log x}$

Differentiating the above function,

$$\text{we get } f'(x) = \frac{\log x.(1) - x\left(\frac{1}{x}\right)}{(\log x)^2}$$
$$= \frac{\log x - 1}{(\log x)^2}$$

Clearly, $(\log x)^2 > 0$ for all $x > 0, x \neq 1$

$\therefore f'(x) > 0$ if $\log x - 1 > 0$;

i.e., if $\log x > 1$; i.e., if $x > e$.

$\Rightarrow f(x)$ is increasing for $x > e$

(Contd…..)

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ತಿರುಗೇಟು

‘ಸನ್ಯಾಸತ್ವ ಸ್ವೀಕರಿಸಿಲ್ಲ, ಹೋರಾಡ್ತೀವಿ’

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ‘ನಾವೇನು ಸನ್ಯಾಸತ್ವ ಸ್ವೀಕರಿಸಿದ್ದೇವೆಯೇ? ನಾವೂ ಹೋರಾಟ ಮಾಡುತ್ತೇವೆ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

‘ಚನ್ನಪಟ್ಟಣದಲ್ಲಿ ಜೆಡಿಎಸ್‌ನವರು ಸೀಟು ಬಿಟ್ಟು ಕೊಡುತ್ತಾರಂತೆ, ಅವರು ಅಷ್ಟು ವೀಕ್ ಆಗಿದ್ದಾರೆ’ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಇಲ್ಲಿ ಭಾನುವಾರ ತಿರುಗೇಟು ನೀಡಿದ ಕುಮಾರಸ್ವಾಮಿ, ‘ನಾವೇನು ಸನ್ಯಾಸತ್ವ ಸ್ವೀಕರಿಸಿಲ್ಲ. ಅವರು ಹೇಳಿದಂತೆ ಆಗುತ್ತದೆಯೇ? ಚುನಾವಣೆ ಗೆಲ್ಲಲು ಏನು ಬೇಕೋ ಆ ನಿರ್ಧಾರವನ್ನು ನಾವೂ ಮಾಡುತ್ತೇವೆ’ ಎಂದರು.

‘ಮಾಜಿ ಸಂಸದ ಡಿ.ಕೆ.ಸುರೇಶ್ ನನ್ನ ವಿರುದ್ಧ ಏಕವಚನ ಬಳಸಿದ್ದನ್ನು ಗಮನಿಸಿದ್ದೇನೆ. ಅವರ ಸಂಸ್ಕೃತಿ ಬಗ್ಗೆ ನಾನು ಮಾತನಾಡುವುದಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ

‘ಜನರು ಬಹಳ ನಿರೀಕ್ಷೆ ಇಟ್ಟುಕೊಂಡು ಕಾಂಗ್ರೆಸ್‌ಗೆ ಬಹುಮತ ನೀಡಿದ್ದಾರೆ. ಆದರೆ, ಈ ಸರ್ಕಾರ ರಾಜ್ಯದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ಜನರು ನೋಡುತ್ತಿದ್ದಾರೆ. ದಿನವೂ ಒಂದೊಂದು ಅಕ್ರಮಗಳು ಬೆಳಕಿಗೆ ಬರುತ್ತಿವೆ. ನನಗೆ ಮಣ್ಣಿನ ಮೇಲೆ ಆಸೆಯೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಲೇ ಇರುತ್ತಾರೆ. ಇನ್ನೊಂದೆಡೆ, ಒಂದೊಂದೇ ವಿಕೆಟ್ ಬೀಳುತ್ತಲೇ ಇದೆ. ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ನೋಡಿದರೆ, ಯಾವ ಕ್ಷಣದಲ್ಲಿ ಏನು ಬೇಕಾದರೂ ಆಗಬಹುದು ಎನ್ನುವಂತೆ ಇದೆ’ ಎಂದರು.

‘5 ವರ್ಷದ ಪೂರ್ಣ ಬಹುಮತದ ಸರ್ಕಾರವನ್ನು ಜನರು ನನಗೆ ನೀಡಬಹುದು ಎಂದು ವಿಶ್ವಾಸ ಹೊಂದಿದ್ದೇನೆ. ನಾನು ವಿಶ್ವಾಸ ಇಟ್ಟುಕೊಳ್ಳಲು ಅವರ (ಡಿಕೆಶಿ) ಅನುಮತಿ ತೆಗೆದುಕೊಳ್ಳಬೇಕಾ?’ ಎಂದರು.

‘ರಾಜ್ಯದಲ್ಲಿ ಹಣದ ಕೊರತೆ ಇಲ್ಲ. ಆದರೆ, ಈ ಸರ್ಕಾರ ಜನರ ಹಣವನ್ನು ಪೋಲು ಮಾಡುತ್ತಿದೆ. ಜನರು ಇದಕ್ಕೆ ಕಡಿವಾಣ ಹಾಕಿ ನೆಮ್ಮದಿಗಾಗಿ ನನಗೆ ಅವಕಾಶ ನೀಡುತ್ತಾರೆ ಎನ್ನುವುದು ತಪ್ಪಾ’ ಎಂದು ಪ್ರಶ್ನಿಸಿದರು.

ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಸೀತಾಪುರದ ಬಳಿ ರೈತರ ಜಮೀನಿನಲ್ಲಿ ತಾವು ನಾಟಿ ಮಾಡಿದ್ದ ಭತ್ತದ ಬೆಳೆಯನ್ನು ಭಾನುವಾರ ವೀಕ್ಷಿಸಿದರು. ತಮ್ಮೊಂದಿಗೆ ನಾಟಿ ಮಾಡಿದ್ದ ಮಹಿಳೆಯರೊಂದಿಗೆ ಬಾಡೂಟ ಸವಿದರು. ಮಾಜಿ ಸಚಿವ ಸಿ.ಎಸ್‌.ಪುಟ್ಟರಾಜು ಜೊತೆಗಿದ್ದರು —ಪ್ರಜಾವಾಣಿ ಚಿತ್ರ

‘ಅವನೂ ಸಚಿವ ಸ್ಥಾನ ಕಳೆದುಕೊಳ್ಳುತ್ತಾನೆ’

ಬೆಂಗಳೂರು: ‘ಇನ್ನೊಂದು ಆರು ತಿಂಗಳೊ, ವರ್ಷಕ್ಕೊ ಅವನೂ ಸಚಿವ ಸ್ಥಾನ ಕಳೆದುಕೊಂಡು ಮನೆಗೆ ಹೋಗುತ್ತಾನೆ. ಏನು ಬೇಕಾದರೂ ಮಾತಾಡ್ತೀನಿ ಎಂದರೆ ನನಗೂ ಎಲ್ಲ ಭಾಷೆ ಬರುತ್ತೆ. ಇದು ಟ್ರಯಲ್ ಅಷ್ಟೇ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ. ಸುರೇಶ್ ಏಕವಚನದಲ್ಲಿ ದಾಳಿ ನಡೆಸಿದರು.

‘ರಾಜ್ಯ ಕಾಂಗ್ರೆಸ್ ಸರ್ಕಾರ ಐದು ವರ್ಷ ಪೂರ್ಣ ಮಾಡುವುದಿಲ್ಲ’ ಎಂಬ ಕುಮಾರಸ್ವಾಮಿ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಅವರು, ‘ನಮ್ಮ ಸರ್ಕಾರ ಇರಲ್ಲ ಎಂದಿರುವ ಕುಮಾರಸ್ವಾಮಿನೂ ಮಂತ್ರಿಯಾಗಿ ಇರಲ್ಲ. ಅವನು ಯಾವ ಕಾರಣಕ್ಕೆ ನಮ್ಮ ಸರ್ಕಾರ ಇರಲ್ಲ ಎಂದು ಹೇಳಿದನೊ ಅದೇ ಕಾರಣಕ್ಕೆ ನಾನೂ ಹೇಳುತ್ತಿದ್ದೇನೆ’ ಎಂದರು.

‘ಆ ಪಾರ್ಟಿನೂ (ಕುಮಾರಸ್ವಾಮಿ) ಸಚಿವನಾಗಿ ಇರುವುದಿಲ್ಲ. ಅವರ ಸರ್ಕಾರವೂ ಇರುವುದಿಲ್ಲ. ಏನು ಬೇಕಾದರೂ ಮಾತಾಡುತ್ತೇನೆ ಎಂದರೆ ಹೇಗೆ? ಅದಕ್ಕೊಂದು ಲೆಕ್ಕ ಇಲ್ಲವೇ? ಕೇಂದ್ರದ ಮಂತ್ರಿ ಆದವರು ಸ್ವಲ್ಪ ತೂಕ ಇಟ್ಟುಕೊಂಡು ಮಾತನಾಡಲಿ’ ಎಂದು ಗುಡುಗಿದರು.

‘ವರಿಷ್ಠರಿಗೆ ಪಟ್ಟಿ ಹೋಗಿತ್ತು’

ಹುಬ್ಬಳ್ಳಿ: ‘ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ಯಾರಿಗೆ ಟಿಕೆಟ್ ನೀಡಬೇಕು ಎನ್ನುವ ಕುರಿತು ರಾಜ್ಯದಿಂದ ವರಿಷ್ಠರಿಗೆ ಪಟ್ಟಿ ಹೋಗಿತ್ತು. ದೆಹಲಿಗೆ ಕರೆದು ಚರ್ಚೆ ಮಾಡುವ ವಿಚಾರವೂ ಇತ್ತು. ಆದರೆ, ಅಷ್ಟರಲ್ಲಿಯೇ ಟಿಕೆಟ್ ಘೋಷಣೆಯಾಗಿದೆ. ಗೆಲುವು ಮುಖ್ಯವಾಗಿದ್ದು, ಎಲ್ಲರ ಅಭಿಪ್ರಾಯ ಪಡೆದು ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಅವರಿಗೆ ಟಿಕೆಟ್ ನೀಡಲಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ತಿಳಿಸಿದರು.

‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಎನ್‌ಡಿಎ ಅಭ್ಯರ್ಥಿಯಾಗಿ ಸಿ.ಪಿ.ಯೋಗೇಶ್ವರ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆಯಿದೆ. ಗೆಲ್ಲುವ ಎಲ್ಲ ಅರ್ಹತೆಯೂ ಅವರಿಗಿದೆ. ಟಿಕೆಟ್ ಯಾರಿಗೆ ನೀಡಬೇಕು ಎನ್ನುವ ತೀರ್ಮಾನವನ್ನು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ವರಿಷ್ಠರು ನೀಡಿದ್ದಾರೆ. ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ಸಿಗಲಿದೆ’ ಎಂದರು.

ಚನ್ನಪಟ್ಟಣ ಟಿಕೆಟ್ ಜೆಡಿಎಸ್ ಘೋಷಿಸಲಿದೆ: ಬಿಎಸ್‌ವೈ

ಬೆಂಗಳೂರು: ‘ಚನ್ನಪಟ್ಟಣ ಜೆಡಿಎಸ್ ಕ್ಷೇತ್ರ, ಅವರು ಯಾರಿಗೆ ಬೇಕೋ ಅವರಿಗೆ ಟಿಕೆಟ್ ಘೋಷಣೆ ಮಾಡುತ್ತಾರೆ’ ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಕೇಂದ್ರ ಸಚಿವ ಅಮಿತ್ ಶಾ ಕೂಡ ಚನ್ನಪಟ್ಟಣ ಕ್ಷೇತ್ರದಲ್ಲಿ ಜೆಡಿಎಸ್‌ನವರು ಅಭ್ಯರ್ಥಿ ಘೋಷಣೆ ಮಾಡುತ್ತಾರೆ ಎಂದಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ಪಕ್ಷದಿಂದ ಈಗಾಗಲೇ ಬಿಜೆಪಿ ಇಬ್ಬರು ಅಭ್ಯರ್ಥಿಗಳನ್ನು ಘೋಷಣೆ ಮಾಡಿದ್ದೇವೆ. ಜೆಡಿಎಸ್‌ನವರು ಅಭ್ಯರ್ಥಿಯನ್ನು ಘೋಷಿಸಿದ ಬಳಿಕ ಎರಡೂ ಪಕ್ಷಗಳು ಸೇರಿ ಮೂರೂ ಕ್ಷೇತ್ರಗಳನ್ನು ಗೆಲ್ಲುವುದಕ್ಕೆ ಶ್ರಮ ಹಾಕುತ್ತೇವೆ’ ಎಂದು ಅವರು ಹೇಳಿದರು. ‘ಬಿಜೆಪಿಯವರು ಜೆಡಿಎಸ್ ಚಿಹ್ನೆಯಡಿ ಸ್ಪರ್ಧೆ ಮಾಡುವ ಆಲೋಚನೆ ಇಲ್ಲ. ಸಿ.ಪಿ. ಯೋಗೇಶ್ವರ್ ಸ್ಪರ್ಧೆ ತೀರ್ಮಾನವನ್ನು ದೆಹಲಿಯವರು ತೆಗೆದುಕೊಳ್ಳುತ್ತಾರೆ. ಈ ವಿಚಾರದಲ್ಲಿ ನಾನು ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ’ ಎಂದರು.

3 ಬ್ಯಾಗ್ ದಾಖಲೆ ಹೊತ್ತೊಯ್ದರು

ಶೀಘ್ರದಲ್ಲೇ ಇ.ಡಿಯಿಂದಲೂ ಸಿ.ಎಂಗೆ ನೋಟಿಸ್ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಲ್ಲಿ ಸುದೀರ್ಘ 30 ತಾಸು ಶೋಧ ನಡೆಸಿದ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ತಂಡವು ವಿಚಾರಣೆ ಪೂರ್ಣಗೊಳಿಸಿ, ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಹೊತ್ತೊಯ್ದಿದೆ.

ದಾಳಿಯ ಎರಡನೇ ದಿನವಾದ ಶನಿವಾರ ಬೆಳಿಗ್ಗೆ 10ಕ್ಕೆ ವಿಚಾರಣೆ ಆರಂಭಿಸಿದ್ದ ಇ.ಡಿ.ಯ 12 ಅಧಿಕಾರಿಗಳ ತಂಡವು ಸತತ 17 ತಾಸು ಶೋಧದ ಬಳಿಕ ಭಾನುವಾರ ನಸುಕಿನಲ್ಲಿ 2.45ರ ಸುಮಾರಿಗೆ ಮುಡಾ ಕಚೇರಿ ಬಾಗಿಲು ತೆರೆದು ಹೊರಬಂದಿತು. ದಾಖಲೆಗಳನ್ನು ತುಂಬಿದ ಮೂರು ಕೆಂಪು ಬ್ಯಾಗ್ ಹಾಗೂ ಎರಡು ಹಾರ್ಡ್‌ಡಿಸ್ಕ್ ಹಿಡಿದು ಬೆಂಗಳೂರಿನತ್ತ ಪ್ರಯಾಣ ಬೆಳೆಸಿತು.

ಸಿ.ಎಂ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ. ಪಾರ್ವತಿ ಸೇರಿ ನಾಲ್ವರ ವಿರುದ್ಧ ದಾಖಲಾದ ‘ಇಸಿಐಆರ್’ ಆಧರಿಸಿ ಅ. 18ರಂದು ಬೆಳಿಗ್ಗೆ 10.30ರ ವೇಳೆಗೆ ಮುಡಾ ಕಚೇರಿಗೆ ಇ.ಡಿ ತಂಡವು ದಾಳಿ ನಡೆಸಿದ್ದು, ರಾತ್ರಿ 11ರವರೆಗೂ ಶೋಧ ಮುಂದುವರಿಸಿತ್ತು. ಬಳಿಕ ಮುಡಾ ಕಚೇರಿಯಲ್ಲೇ ವಾಸ್ತವ್ಯ ಹೂಡಿತ್ತು.

ಇದೇ ವೇಳೆ ಮೈಸೂರು ತಾಲ್ಲೂಕು ಕಚೇರಿ ಹಾಗೂ ಬೆಂಗಳೂರಿನ ಕೆಂಗೇರಿಯಲ್ಲಿರುವ ಜೆ. ದೇವರಾಜು ಅವರ ನಿವಾಸದಲ್ಲೂ ಅಧಿಕಾರಿಗಳು ದಾಳಿ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದರು. ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಇ.ಡಿ. ಸಂಗ್ರಹಿಸಿದ್ದು, ಅವುಗಳನ್ನು ಡಿಜಿಟಲ್ ರೂಪದಲ್ಲೂ ಪಡೆದಿದೆ. ಸಿದ್ದರಾಮಯ್ಯ ಪತ್ನಿ ಮುಡಾಕ್ಕೆ ಬರೆದಿದ್ದ ವೈಟ್ನರ್ ಹಚ್ಚಿದ ಪತ್ರ ಸಹ ಇದರಲ್ಲಿ ಸೇರಿದೆ. ದೇವನೂರು ಬಡಾವಣೆಯ ನಕ್ಷೆ, ಅಲ್ಲಿ ಹಂಚಿಕೆಯಾದ ಹಾಗೂ ಲಭ್ಯವಿರುವ ನಿವೇಶನಗಳ ಮಾಹಿತಿಯನ್ನು ಅಧಿಕಾರಿಗಳು ಮುಡಾ ಆಯುಕ್ತರಿಂದ ಕೇಳಿ ಪಡೆದಿದ್ದಾರೆ. 50:50 ಅನುಪಾತದಲ್ಲಿ ಮುಡಾದಲ್ಲಿ ಈಚಿನ ವರ್ಷಗಳಲ್ಲಿ ಹಂಚಿಕೆಯಾದ ಎಲ್ಲ ನಿವೇಶನಗಳ ದಾಖಲೆ ಸಂಗ್ರಹಿಸಿದ್ದಾರೆ.

ಮೊಬೈಲ್ ಫೋನ್ ಶೋಧ: ಮುಡಾದ ಈ ಹಿಂದಿನ ಆಯುಕ್ತರಾದ ಡಿ.ಬಿ. ನಟೇಶ್ ಹಾಗೂ ಜಿ.ಟಿ. ದಿನೇಶ್‌ಕುಮಾರ್ ಅವರಿಗೆ ಆಪ್ತ ಸಹಾಯಕರಾಗಿದ್ದ ಮೂವರು ಸಿಬ್ಬಂದಿಯ ಮೊಬೈಲ್ ಫೋನ್‌ಗಳನ್ನು ಇ.ಡಿ. ತಂಡ ವಶಕ್ಕೆ ಪಡೆದಿತ್ತು. ಸುಮಾರು 10 ಗಂಟೆವರೆಗೆ ಮೊಬೈಲ್‌ಗಳನ್ನು ಅಧಿಕಾರಿಗಳ ತಂಡವು ಶೋಧಿಸಿದ್ದು, ಮೊಬೈಲ್ ಕರೆಗಳು, ವಾಟ್ಸ್‌ಅಪ್ ಸಂದೇಶಗಳು ಮೊದಲಾದ ಮಾಹಿತಿಯನ್ನು ಹೆಕ್ಕಿ ತೆಗೆದಿದೆ. ನಂತರ ಫೋನ್‌ಗಳನ್ನು ಹಿಂತಿರುಗಿಸಲಾಗಿದೆ.

ಸದ್ಯ ಇ.ಡಿ. ಅಧಿಕಾರಿಗಳು ವಾಪಸ್ ಆಗಿದ್ದರಿಂದ ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿಟ್ಟುಸಿರು ಬಿಟ್ಟಿದ್ದಾರೆ. ಸೋಮವಾರ ಎಂದಿನಂತೆ ಮುಡಾ ಕಚೇರಿ ಕಾರ್ಯ ನಿರ್ವಹಿಸಲಿದೆ. ದಾಳಿ ಕಾರಣದಿಂದ ಮುಡಾಕ್ಕೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಈ ಪ್ರಾಧಿಕಾರದ ಇತಿಹಾಸದಲ್ಲೇ ಇಷ್ಟು ಸುದೀರ್ಘ ದಾಳಿ ಇದೇ ಮೊದಲ ಬಾರಿಯಾಗಿದೆ.

ಇ.ಡಿ. ಅಧಿಕಾರಿಗಳು ಮುಡಾ ಕಚೇರಿಯಲ್ಲಿ ಪರಿಶೀಲನೆ ಮುಗಿಸಿದ್ದು, ಅವರು ಕೇಳಿದ ಎಲ್ಲ ಮಾಹಿತಿ ನೀಡಿದ್ದೇವೆ. ಸೋಮವಾರ ಎಂದಿನಂತೆ ಕಚೇರಿ ಕಾರ್ಯ ನಿರ್ವಹಿಸಲಿದೆ

ರಘುನಂದನ್ ಮುಡಾ ಆಯುಕ್ತ

ಒಂದೆರಡು ದಿನದಲ್ಲೇ ಸಿದ್ದರಾಮಯ್ಯ ವಿಚಾರಣೆ?

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಮೈಸೂರು ಲೋಕಾಯುಕ್ತ ಪೊಲೀಸರು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನ ಸ್ವಾಮಿ ಸೇರಿದಂತೆ ಹಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಪ್ರಕರಣದ ಮೊದಲೆರಡು ಆರೋಪಿಗಳಾಗಿರುವ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಶೀಘ್ರದಲ್ಲೇ ನೋಟಿಸ್ ಜಾರಿಯಾಗಲಿದ್ದು, ಒಂದೆರಡು ದಿನದಲ್ಲೇ ವಿಚಾರಣೆಗೆ ಕರೆಯುವ ಸಾಧ್ಯತೆ ಇದೆ.

ಮುಡಾ ಕಚೇರಿಯಲ್ಲಿ ಶೋಧ ಕಾರ್ಯ ಮುಗಿಸಿರುವ ಇ.ಡಿ. ಅಧಿಕಾರಿಗಳ ತಂಡವು ಪ್ರಕರಣದ 4ನೇ ಆರೋಪಿ ದೇವರಾಜು ಮನೆ ಮೇಲೆ ಈಗಾಗಲೇ ದಾಳಿ ನಡೆಸಿದೆ. ಉಳಿದ ಮೂವರು ಆರೋಪಿಗಳಾದ ಸಿದ್ದರಾಮಯ್ಯ ಕುಟುಂಬಸ್ಥರಿಗೆ ಇ.ಡಿಯಿಂದಲೂ ಶೀಘ್ರದಲ್ಲೇ ನೋಟಿಸ್ ಜಾರಿಯಾಗುವ ಸಾಧ್ಯತೆ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಭೇಟಿ ನೀಡುತ್ತಿದ್ದು, ಮಂಗಳವಾರ ವರುಣ ಕ್ಷೇತ್ರದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

‘ಇ.ಡಿ ದಿನಪತ್ರಿಕೆ ಕೊಂಡೊಯ್ದಿದೆ’

ಚಿತ್ರದುರ್ಗ: ‘ಇ.ಡಿ ಅಧಿಕಾರಿಗಳು ಮುಡಾ ಕಚೇರಿಯಿಂದ 2 ಬ್ಯಾಗ್‌ಗಳಲ್ಲಿ ದಾಖಲೆಗಳನ್ನು ಕೊಂಡೊಯ್ದಿಲ್ಲ. 25 ವರ್ಷದ ಪ್ರಕರಣದಲ್ಲಿ ಅಷ್ಟೊಂದು ದಾಖಲೆ ಸಿಗಲು ಸಾಧ್ಯವೇ? ತೋರಿಕೆಗಾಗಿ ಇ.ಡಿ ಅಧಿಕಾರಿಗಳು ಬ್ಯಾಗ್‌ಗಳಲ್ಲಿ ದಿನಪತ್ರಿಕೆಗಳನ್ನು ತುಂಬಿಕೊಂಡು ತೆರಳಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವ್ಯಂಗ್ಯವಾಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರಾಜಕೀಯ ಲಾಭಕ್ಕಾಗಿ 2 ಬ್ಯಾಗ್ ಪ್ರದರ್ಶನ ಮಾಡಲಾಗಿದೆ. ಚುನಾವಣಾ ಬಾಂಡ್, ಪಿ.ಎಂ. ಕೇರ್, ನೋಟ್ ಬ್ಯಾನ್ ಹಗರಣಗಳಲ್ಲಿ ದೋಚಿದಂತೆ ಮುಡಾ ಪ್ರಕರಣವನ್ನೂ ತೋರಿಸಲು ಮುಂದಾಗಿದ್ದಾರೆ. ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರು ಪಯೋಗ ಮಾಡಿಕೊಳ್ಳುತ್ತಿರುವ ಬಿಜೆಪಿ, ಮುಂದಿನ ಚುನಾವಣೆ ವೇಳೆಗೆ ಭ್ರಷ್ಟಾಚಾರ ಜನತಾ ಪಾರ್ಟಿ ಎಂದು ಹೆಸರು ಬದಲಾಯಿಸಿಕೊಳ್ಳಲಿ’ ಎಂದರು.

ಅಭ್ಯರ್ಥಿ ಆಯ್ಕೆ: ಕಾಂಗ್ರೆಸ್‌ನಲ್ಲಿ ಮುಂದುವರಿದ ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಚುನಾವಣೆ ನಡೆಯುವ ಮೂರೂ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ವಿಚಾರದಲ್ಲಿ ಕಾಂಗ್ರೆಸ್‌ನಲ್ಲಿ ಗೊಂದಲ ಮುಂದುವರಿದಿದೆ.

ಶಿಗ್ಗಾವಿ ಕ್ಷೇತ್ರಕ್ಕೆ ಅಜಂ ಪೀರ್ ಖಾದ್ರಿ, ವಿನೋದ್ ಅಸೂಟಿ ಮತ್ತು ಸಂಜೀವಕುಮಾರ ನೀರಲಗಿ ಅಥವಾ ಸೋಮಣ್ಣ ಬೇವಿನಮರದ ಈ ಪೈಕಿ ಒಬ್ಬರಿಗೆ ಮಣೆ ಹಾಕುವ ಬಗ್ಗೆ ಚರ್ಚೆ ನಡೆದಿದೆ. ಈ ಮಧ್ಯೆ, ವಿನಯ್ ಕುಲಕರ್ಣಿ ಅವರು ತಮ್ಮ ಪತ್ನಿ ಶಿವಲೀಲಾ ಕುಲಕರ್ಣಿ ಟಿಕೆಟ್ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಅಲ್ಪಸಂಖ್ಯಾತ ಅಭ್ಯರ್ಥಿಗೆ ಈ ಬಾರಿಯೂ ಟಿಕೆಟ್ ನೀಡುವಂತೆ ಮುಸ್ಲಿಂ ಸಮುದಾಯದ ಕೆಲವು ಮುಖಂಡರು ಪಟ್ಟು ಹಿಡಿದಿದ್ದಾರೆ.

ಕಳೆದ ನಾಲ್ಕು ಅವಧಿಯಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಸೋಲಾಗಿದೆ. ಹೀಗಾಗಿ ಈ ಬಾರಿ, ಕುರುಬ ಅಥವಾ ಲಿಂಗಾಯತ ಸಮುದಾಯದ ಅಭ್ಯರ್ಥಿಯೊಬ್ಬರನ್ನು ಶಿಗ್ಗಾವಿಯಿಂದ ಕಣಕ್ಕಿಳಿಸಲು ಕೈ ನಾಯಕರಲ್ಲಿ ಒಲವು ವ್ಯಕ್ತವಾಗಿದೆ. ಕುರುಬ ಸಮುದಾಯದವರಾದ ವಿನೋದ್ ಅಸೂಟಿ ಹೆಸರು ಮುಂಚೂಣಿಯಲ್ಲಿದೆ ಎನ್ನಲಾಗಿದೆ.

ಚನ್ನಪಟ್ಟಣ ಕ್ಷೇತ್ರದಿಂದ ಡಿ.ಕೆ. ಸುರೇಶ್ ಅವರನ್ನು ಕಣಕ್ಕಿಳಿಸುವಂತೆ ಕಾರ್ಯಕರ್ತರು ಒತ್ತಡ ಹೇರುತ್ತಿದ್ದಾರೆ. ಸಂಡೂರು ಕ್ಷೇತ್ರದಿಂದ ಸಂಸದ ಇ. ತುಕಾರಾಮ್ ಕುಟುಂಬಕ್ಕೆ ಟಿಕೆಟ್ ಬಹುತೇಕ ಅಂತಿಮವಾಗಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಶಿಗ್ಗಾವಿ ಟಿಕೆಟ್ ಸಂಬಂಧ ವಿನಯ್ ಕುಲಕರ್ಣಿ, ಆರ್. ಶಂಕರ್, ಅಜಂ ಪೀರ್ ಖಾದ್ರಿ ಬೆಂಬಲಿಗರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭಾನುವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ನನ್ನ ಮೇಲೆ ಒತ್ತಡವಿದೆ: ಡಿ.ಕೆ.ಸುರೇಶ್

‘ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಣಕ್ಕಿಳಿಯುವಂತೆ ನನ್ನ ಮೇಲೆ ಒತ್ತಡವಿದೆ. ಪಕ್ಷದ ತೀರ್ಮಾನಕ್ಕೆ ನಾನು ಬದ್ಧ’ ಎಂದು ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿದರು. ಆ ಮೂಲಕ, ಚುನಾವಣೆಯಲ್ಲಿ ಸ್ಪರ್ಧಿಸಲು ಪರೋಕ್ಷವಾಗಿ ಅವರು ಒಲವು ವ್ಯಕ್ತಪಡಿಸಿದ್ದಾರೆ.

‘ಕ್ಷೇತ್ರದ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಸಭೆ ಆಗಿದೆ. ಪಕ್ಷದ ತೀರ್ಮಾನಕ್ಕೆ ಎಲ್ಲರೂ ಬದ್ಧ ಎಂದಿದ್ದಾರೆ. ನಾನು ಪಕ್ಷದ ಶಿಸ್ತಿನ ಸಿಪಾಯಿ. ನನ್ನ ಆಚಾರ ವಿಚಾರಗಳನ್ನು ಪಕ್ಷದ ಮುಖಂಡರ ಗಮನಕ್ಕೆ ತರುತ್ತೇನೆ. ನಾನು ಅಧಿಕಾರಕ್ಕಾಗಿ ಚುನಾವಣೆಗೆ ನಿಲ್ಲಬೇಕು ಎನ್ನುವ ಉದ್ದೇಶ ಹೊಂದಿರುವವನಲ್ಲ. ಈ ಬಗ್ಗೆ ಪಕ್ಷದ ಮುಖಂಡರ ಬಳಿ ಚರ್ಚೆ ಮಾಡುತ್ತೇನೆ. ಪಕ್ಷಕ್ಕೆ ನಾನು ಅನಿವಾರ್ಯವಲ್ಲ. ನನಗೆ ಪಕ್ಷ ಅನಿವಾರ್ಯ’ ಎಂದರು.

‘ನಮ್ಮ ಕಾರ್ಯಕರ್ತರು ಚುನಾವಣೆಗೆ ಸಜ್ಜಾಗಿದ್ದಾರೆ. ಶುಕ್ರವಾರದ ತನಕ ಸಮಯವಿದೆ. ಇನ್ನೂ ಐದು ದಿನಗಳು ಸಮಯವಿದ್ದು ನಮ್ಮ ತೀರ್ಮಾನವನ್ನು ತಿಳಿಸುತ್ತೇವೆ. ಬಿಜೆಪಿ, ಜೆಡಿಎಸ್ ಅವರು ಅವರ ಅಭ್ಯರ್ಥಿಗಳನ್ನು ಘೋಷಣೆ ಮಾಡಬೇಕು. ಅಲ್ಲಿಯವರೆಗೂ ಕಾಯೋಣ. ಪಕ್ಷವನ್ನು ಬೇರು ಮಟ್ಟದಿಂದ ಕಟ್ಟುವ ಕೆಲಸ ಮಾಡುತ್ತೇವೆ’ ಎಂದರು.

ಉಪಚುನಾವಣೆ: ಸಚಿವರು, ಶಾಸಕರಿಗೆ ಹೊಣೆ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿ ಚುನಾವಣೆ ಸಂದರ್ಭದಲ್ಲೂ ಬಿಜೆಪಿಯವರು ಸವಾಲಿಗೆ ಬಿದ್ದವರಂತೆ ಸುಳ್ಳುಗಳನ್ನು ಹೇಳುತ್ತಾರೆ. ಅವರ ಸುಳ್ಳುಗಳನ್ನು ಜನರೆದುರು ಬಯಲುಗೊಳಿಸ ಬೇಕು’ ಎಂದು ಸಂಪುಟ ಸಹೋದ್ಯೋಗಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ಹೇಳಿದ್ದಾರೆ.

ಉಪ ಚುನಾವಣೆಗೆ ತಯಾರಿ ನಡೆಸುವ ಸಂಬಂಧ ಚರ್ಚಿಸಲು ತಮ್ಮ ಸರ್ಕಾರಿ ನಿವಾಸ ಕಾವೇರಿಯಲ್ಲಿ ಮುಖ್ಯಮಂತ್ರಿ ಭಾನುವಾರ ಮಂತ್ರಿ ಪರಿಷತ್ ಸಭೆ ನಡೆಸಿದರು.

ಉಪ ಚುನಾವಣೆ ನಡೆಯಲಿರುವ ಮೂರೂ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರಕ್ಕೆ ತಲಾ 20 ರಿಂದ 30 ಶಾಸಕರನ್ನು ಮತ್ತು ಕೆಲವು ಸಚಿವರನ್ನು ಹೋಬಳಿವಾರು ನಿಯೋಜಿಸಲು ಈ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅಲ್ಲದೆ, ಜಾತಿ ಜನಗಣತಿ, ಒಳ ಮೀಸಲಾತಿ ಮತ್ತು ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತು ಹೇಳಿಕೆಗಳನ್ನು ನೀಡುವ ವೇಳೆ ಎಚ್ಚರಿಕೆ ವಹಿಸುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.

‘ಈ ಮೂರೂ ಕ್ಷೇತ್ರಗಳ ಉಪ ಚುನಾವಣೆಯಲ್ಲೂ ಹೊಸ ಹೊಸ ಸುಳ್ಳುಗಳನ್ನು ಬಿಜೆಪಿಯವರು ಹೇಳುತ್ತಲೇ ಇರುತ್ತಾರೆ. ಈ ಸುಳ್ಳುಗಳಿಗೆ ಪ್ರತಿಯಾಗಿ ವಾಸ್ತವ ವಿಷಯವನ್ನು ತೆರೆದಿಡಬೇಕು. ನಮ್ಮ ಪಕ್ಷದ (ಕಾಂಗ್ರೆಸ್) ಅಭ್ಯರ್ಥಿಗಳು ಈ ಮೂರೂ ಕ್ಷೇತ್ರಗಳಲ್ಲಿ ಗೆಲ್ಲುವ ಸಾಧ್ಯತೆಗಳು ಹೆಚ್ಚಾಗಿವೆ. ಹೀಗಾಗಿ, ಪ್ರತಿಯೊಬ್ಬರೂ ತಾವು ವಹಿಸಿಕೊಂಡ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಸಂಪೂರ್ಣ ಶ್ರಮ ಹಾಕಿ ಚುನಾವಣೆ ನಿರ್ವಹಿಸಬೇಕು’ ಎಂದು ಸಚಿವರಿಗೆ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

‘ಲೋಕಸಭೆ ಚುನಾವಣೆ ಮುಗಿದ ಮರುದಿನವೇ ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿಯವರಿಂದ ಹಿಡಿದು ಸಿ.ಟಿ.ರವಿವರೆಗೆ ಪ್ರತಿಯೊಬ್ಬರೂ ರಾಶಿ ರಾಶಿ ಸುಳ್ಳು ಹೇಳಿದ್ದರು. ಉಪಚುನಾವಣೆ ಮುಗಿಯುವರೆಗೂ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಪ್ರಮಾಣ ಇನ್ನೂ ಹೆಚ್ಚಲಿದೆ’ ಎಂದಿದ್ದಾರೆ.

‘ಜಾತಿ ಗಣತಿ ವರದಿ, ಒಳ ಮೀಸಲಾತಿ, ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತಂತೆ ಕೂಡ ಬಿಜೆಪಿಯವರು ಅಪಪ್ರಚಾರ ಮಾಡುತ್ತಾರೆ. ಈ ವಿಚಾರಗಳ ಬಗ್ಗೆಯೂ ನಮ್ಮ ನಿಲುವು ಸ್ಪಷ್ಟವಾಗಿದೆ. ಆಯಾ ಸಮುದಾಯದ ಮುಖಂಡರು ಮತ್ತು ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿ ನಮ್ಮ ಬೆಂಬಲ ಇರುವುದನ್ನು ಮನದಟ್ಟು ಮಾಡಿಸಿದ್ದೇವೆ. ಆದರೂ ಸರಣಿ ಸುಳ್ಳುಗಳ ಮೂಲಕ ಬಿಜೆಪಿ ನಿರಂತರ ಅಪಪ್ರಚಾರ ಮಾಡುತ್ತಿದೆ’ ಎಂದಿದ್ದಾರೆ.

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
1ನೇ ಮಹಡಿ, ಎಸ್‌.ಎಸ್‌.ಎಲ್‌.ಆರ್. ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255

No: BMC/2024-25/IND0011 Date: 20.10.2024

ತಿದ್ದುಪಡಿ

ಟೆಂಡರ್ ಸಂಖ್ಯೆ: BMC/2023-24/IND0011 ದಿನಾಂಕ: 15.10.2024 ಗೆ ಸಂಬಂಧಿಸಿದಂತೆ ಟೆಂಡರ್ ಸಂಖ್ಯೆ: BMC/2023-24/IND0011 ಅನ್ನು ಈ ಕೆಳಗಿನಂತೆ ಓದಬೇಕು.
ಟೆಂಡರ್ ಸಂಖ್ಯೆ: “BMC/2024-25/IND0011”

ಸಹಿ/– ಸಹಾಯಕ ಆಯುಕ್ತರು, ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

ಆರ್ಥಿಕ ಇಲಾಖೆ
ವಿಧಾನ ಸೌಧ, ಬೆಂಗಳೂರು.

ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿರುವ ಸರಕು ಮತ್ತು ಸೇವೆಗಳ ತೆರಿಗೆ ಅಪೀಲು ನ್ಯಾಯಾಧೀಕರಣದ ರಾಜ್ಯ ನ್ಯಾಯಪೀಠಗಳಿಗೆ ಇಬ್ಬರು ತಾಂತ್ರಿಕ ಸದಸ್ಯ (ರಾಜ್ಯ) ರನ್ನು ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ:

1) ತಾಂತ್ರಿಕ ಸದಸ್ಯ (ರಾಜ್ಯ): ಅಖಿಲ ಭಾರತ ಸೇವೆಗಳು ಅಥವಾ ಗ್ರೂಪ್ ‘ಎ’ ಅಥವಾ ತತ್ಸಮಾನ ಹುದ್ದೆಯಲ್ಲಿ ಕನಿಷ್ಠ 25 ವರ್ಷಗಳ ಸೇವೆ ಸಲ್ಲಿಸಿರುವ ಮತ್ತು ವಾಣಿಜ್ಯ ತೆರಿಗೆ ಅಪರ ಆಯುಕ್ತರ ಶ್ರೇಣಿಗಿಂತ ಕಡಿಮೆ ಇಲ್ಲದಂತಹ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ಅಥವಾ ಪರೋಕ್ಷ ತೆರಿಗೆಗಳು ಅಥವಾ ಹಣಕಾಸು ಮತ್ತು ತೆರಿಗೆ ಆಡಳಿತದಲ್ಲಿ ಕನಿಷ್ಠ 3 ವರ್ಷಗಳ ಅನುಭವ ಪಡೆದಿರುವ ಸೇವೆಯಲ್ಲಿರುವ ಅಥವಾ ನಿವೃತ್ತರಾಗಿರುವ ಅಧಿಕಾರಿಗಳು.

2) ಅರ್ಜಿ ಹಾಕಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ 50 ವರ್ಷಗಳು ತುಂಬಿರಬೇಕು.

3) ಮಾಸಿಕ ವೇತನ ರೂ.2,25,000 (ನಿಗದಿತ). ಸದರಿ ವೇತನ ಹೊಂದಿರುವ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಲಭ್ಯವಿರುವ ಎಲ್ಲಾ ಇತರೆ ಭತ್ಯೆಗಳು (ತುಟ್ಟಿ ಭತ್ಯೆ, ವೈದ್ಯಕೀಯ ಭತ್ಯೆ ಇತರೆ) ಮತ್ತು ಸೇವಾ ನಿಯಮಗಳು ಮತ್ತು ಷರತ್ತುಗಳು ಅನ್ವಯ (ಪ್ರಸ್ತುತ ಅಧಿಕಾರಿಯ ವೇತನ ಮಟ್ಟ 17).

4) ಅರ್ಹತೆ ಮತ್ತು ಇತರೆ ನಿಯಮಗಳು ಮತ್ತು ಷರತ್ತುಗಳ ವಿವರಗಳು ಆರ್ಥಿಕ ಇಲಾಖೆಯ ಜಾಲತಾಣ https://finance.karnataka.gov.in/ ದಲ್ಲಿ ಲಭ್ಯವಿವೆ.

5) ಆನ್‌ಲೈನ್‌ಲ್ಲಿ ಅರ್ಜಿಗಳನ್ನು ಜಾಲತಾಣ https://gstn.org.in/gstat-state-application/#/home.ಕ್ಕೆ ಒದಗಿಸಿರುವ ಲಿಂಕನ್ನು ಬಳಸಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ದಿನಾಂಕ : 21–10–2024ರಿಂದ ಸಲ್ಲಿಸಬಹುದು. ಸಂಬಧಿತ ಲಗತ್ತುಗಳೊಂದಿಗೆ ಅರ್ಜಿಯನ್ನು ದಿನಾಂಕ : 20–11–2024ರ ಸಂಜೆ 5 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

ಸಹಿ/–
DIPR/CP/2634/Zen/2024-25 ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ.

ರದ್ದಾದ ಪರೀಕ್ಷೆ ವೆಚ್ಚ ₹13.40 ಕೋಟಿ

ಒಂದನೇ ಪುಟದಿಂದ...

‘ಪರೀಕ್ಷೆ ನಡೆಸಲು ಇಷ್ಟು ದೊಡ್ಡ ಮೊತ್ತ ವೆಚ್ಚ ಆಗಿರುವುದಕ್ಕೆ ಆಯೋಗದ ಸದಸ್ಯರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಇಷ್ಟು ಮೊತ್ತ ಆಗಿದೆಯೇ ಎಂದು ಕೆಲವು ಸದಸ್ಯರು ಆಯೋಗದ ಸಭೆಯಲ್ಲಿ ಪ್ರಶ್ನೆ ಎತ್ತಿದ್ದಾರೆ. ಭಾಷಾಂತರ ಲೋಪಕ್ಕೆ ಕಾರಣರಾಗಿ ₹13.40 ಕೋಟಿ ನಷ್ಟವಾಗಲು ಕಾರಣರಾದವರನ್ನು ಗುರುತಿಸಲು ಆಂತರಿಕ ಸಮಿತಿ ರಚಿಸಲು ಕೆಲವರು ಒತ್ತಾಯಿಸಿದ್ದಾರೆ. ಆದರೆ, ಸಭೆಯಲ್ಲಿ ಈ ಕುರಿತು ಯಾವುದೇ ತೀರ್ಮಾನ ಆಗಿಲ್ಲ’ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಪ್ರಶ್ನೆಪತ್ರಿಕೆಯಲ್ಲಿನ ಕನ್ನಡ ಅನುವಾದದ ದೋಷಗಳಿಗೆ ಪರೀಕ್ಷಾರ್ಥಿಗಳು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಸೇರಿದಂತೆ ಕನ್ನಡ ಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. ಹಾಗಾಗಿ, ಮುಂದಿನ 2 ತಿಂಗಳುಗಳ ಒಳಗೆ ಮರುಪರೀಕ್ಷೆ ನಡೆಸುವಂತೆ ಸಿ.ಎಂ ಸಿದ್ದರಾಮಯ್ಯ ಅವರು ಸೆ. 2ರಂದೇ ಕೆಪಿಎಸ್‌ಸಿಗೆ ಸೂಚನೆ ನೀಡಿದ್ದರು. ಅಲ್ಲದೆ, ಈ ಲೋಪಗಳಿಗೆ ಕಾರಣರಾದ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗುವುದು ಎಂದೂ ಹೇಳಿದ್ದರು.

ಪೂರ್ವಭಾವಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು, ಪ್ರಶ್ನೆಪತ್ರಿಕೆ 1ರಲ್ಲಿ 28 ಮತ್ತು ಪ್ರಶ್ನೆಪತ್ರಿಕೆ 2ರಲ್ಲಿ 29 ಸೇರಿ ಒಟ್ಟು 57 ಪ್ರಶ್ನೆಗಳಲ್ಲಿ ಲೋಪದೋಷಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಮಾಡಿ ಆಕ್ರೋಶ ವ್ಯಕ್ತಪಡಿಸಿದ್ದರು. ಹೀಗಾಗಿ, ಈ ಕುರಿತು ಅಭಿಪ್ರಾಯ ಪಡೆಯಲು ಮೂವರು ವಿಷಯ ತಜ್ಞರ ಸಮಿತಿಯನ್ನು ಕೆಪಿಎಸ್‌ಸಿ ನೇಮಿಸಿತ್ತು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ ಪ್ರಶ್ನೆಗಳ ಪೈಕಿ ಒಟ್ಟು 33ರಲ್ಲಿ ಭಾಷಾಂತರದಲ್ಲಿ ವ್ಯತ್ಯಾಸವಿತ್ತು. ಆದರೂ 23 ಪ್ರಶ್ನೆಗಳ ಸರಿ ಉತ್ತರದಲ್ಲಿ (ಕೀ ಉತ್ತರ) ಬದಲಾವಣೆಯ ಅವಶ್ಯಕತೆ ಇಲ್ಲ ಮತ್ತು 10 ಪ್ರಶ್ನೆಗಳ ಕೀ ಉತ್ತರಗಳನ್ನು ಪರಿಷ್ಕರಿಸಬೇಕು ಎಂದು ಈ ಸಮಿತಿ ವರದಿ ನೀಡಿತ್ತು. ಈ ವರದಿಯನ್ನು ಸೆ. 20ರಂದು ರಾಜ್ಯ ಸರ್ಕಾರಕ್ಕೆ ಕೆಪಿಎಸ್‌ಸಿ ಸಲ್ಲಿಸಿತ್ತು. ಒಟ್ಟು 2,10,910 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದರು. ಈ ಪೈಕಿ, 1,31,885 (ಶೇ 62.52) ಅಭ್ಯರ್ಥಿಗಳಷ್ಟೆ ಪೂರ್ವಭಾವಿ ಪರೀಕ್ಷೆಗೆ ಹಾಜರಾಗಿದ್ದರು.

ಸಿ.ಸಿ.ಟಿ.ವಿ ಕ್ಯಾಮೆರಾ, ಜಾಮರ್, ಫ್ರಿಸ್ಕಿಂಗ್ ವೆಚ್ಚ

ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್‌ಗಳನ್ನು ಅಳವಡಿಸುವ ಕಾರ್ಯನಿರ್ವಹಣೆ, ಫ್ರಿಸ್ಕಿಂಗ್ (ಅಭ್ಯರ್ಥಿಗಳ ತಪಾಸಣೆ), ಫೇಸ್ ರೆಕಗ್ನಿಷನ್, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಗೂ ಭಾರಿ ಮೊತ್ತ ವ್ಯಯ ಆಗಿದೆ. ಅತಿ ಸೂಕ್ಷ್ಮವೆಂದು ಗುರುತಿಸಿದ ಕೇಂದ್ರಗಳಲ್ಲಿ 46,048 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಈ ಕೇಂದ್ರಗಳಲ್ಲಿ ಜಾಮರ್‌ಗಳನ್ನು ಅಳವಡಿಸಲು ತೆರಿಗೆ ಸೇರಿ ₹22,82,139 ವೆಚ್ಚವಾಗಿದೆ. ಎಲ್ಲ 2,10,910 ಅಭ್ಯರ್ಥಿಗಳ ಫ್ರಿಸ್ಕಿಂಗ್‌ಗೆ (ಪ್ರತಿ ಅಭ್ಯರ್ಥಿಗೆ, ಬೆಳಗ್ಗಿನ ಮತ್ತು ಮಧ್ಯಾಹ್ನದ ಪರೀಕ್ಷೆಗೆ) ₹52,72,750, ಫೇಸ್ ರೆಕಗ್ನಿಷನ್‌ಗೆ ₹48,50,930, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲು (ಪ್ರತಿ 24 ಅಭ್ಯರ್ಥಿಗಳಿಗೆ ಒಂದು ಕ್ಯಾಮೆರಾ) ₹1,58,880 ವೆಚ್ಚವಾಗಿದೆ.

ವರ್ಚಸ್ಸಿಗೆ ಧಕ್ಕೆ ತರಲು ಬಿಜೆಪಿಯ ಕೆಲವರ ಯತ್ನ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯ ಕೇಂದ್ರದ ನಾಯಕರ ಜತೆ ನಾನು ಚೆನ್ನಾಗಿದ್ದೇನೆ. ಹೀಗಾಗಿ ನನ್ನ ವರ್ಚಸ್ಸಿಗೆ ಧಕ್ಕೆ ತರಬೇಕು ಎಂದು ಬಿಜೆಪಿಯ ಕೆಲ ನಾಯಕರು ಪ್ರಯತ್ನಿಸುತ್ತಿದ್ದಾರೆ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಎಚ್‌.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರ ಜತೆ ಮಾತನಾಡಿ, ‘ನನ್ನ ವರ್ಚಸ್ಸನ್ನು ಮುಗಿಸಬೇಕು ಎಂದು ಕಾಂಗ್ರೆಸ್‌ನ ಕೆಲ ನಾಯಕರು ಯತ್ನಿಸುತ್ತಿದ್ದಾರೆ. ಇದಕ್ಕಾಗಿಯೇ ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ಆಯ್ಕೆಯಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಅವರೊಟ್ಟಿಗೆ ನಮ್ಮ ಪಕ್ಷದ ಕೆಲವು ನಾಯಕರೂ ಸೇರಿದ್ದಾರೆ’ ಎಂದು ಆರೋಪಿಸಿದರು.

‘ಪ್ರಧಾನಿ ಅವರಿಗೆ ಬಲ ನೀಡುವುದು ನನ್ನ ಇಚ್ಛೆ. ಅದಕ್ಕೆ ಧಕ್ಕೆ ತರಲು ಕಾಂಗ್ರೆಸ್ ನಾಯಕರು ಹುನ್ನಾರ ಮಾಡುತ್ತಿದ್ದಾರೆ. ಅದಕ್ಕೆ ಬಲಿಯಾಗಬೇಡಿ ಎಂದು ಬಿಜೆಪಿ ನಾಯಕರಿಗೆ ಹೇಳುತ್ತೇನೆ’ ಎಂದರು.

ಸಿ.ಪಿ.ಯೋಗೇಶ್ವರ್ ಅವರನ್ನು ಮನವೊಲಿಸುವ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ‘ಅಭ್ಯರ್ಥಿ ಆಯ್ಕೆ ಮಾಡುವ ವಿಚಾರವನ್ನು ಕೇಂದ್ರದ ನಾಯಕರು ನನಗೆ ಬಿಟ್ಟಿದ್ದಾರೆ. ಯೋಗೇಶ್ವರ್ ಏನೇ ಮಾತನಾಡಿದರೂ, ಅವರ ಮೇಲೆ ದೊಡ್ಡ ನಾಯಕರು ಇದ್ದಾರೆ. ನಿಖಿಲ್ ಉಪ ಚುನಾವಣೆಯಲ್ಲಿ ನಿಲ್ಲುವುದಿಲ್ಲ ಎಂದು ಈಗಾಗಲೇ ಹೇಳಿದ್ದಾರೆ. ನಾನೂ ಅವರು ನಿಲ್ಲುತ್ತಾರೆ ಎಂದು ಎಲ್ಲೂ ಹೇಳಿಲ್ಲ. ಎನ್‌ಡಿಎ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುತ್ತೇವೆ’ ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ, (ತ್ಯಾನೀನಿ–ಪಶ್ಚಿಮ) 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	(ತ್ಯಾನೀನಿ–ಎನ್) ವಿ.ವಿ.	ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/777/2024–25 ದಿನಾಂಕ: 18.10.2024	1	ರೂ.85.02 ಲಕ್ಷಗಳು ರೂ.1,70,100/–	28.10.2024ರ ಸಂಜೆ 5:30 ಗಂಟೆಯವರೆಗೆ	30.10.2024ರ ಸಂಜೆ 4:00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/777/2024–25 ದಿನಾಂಕ: 18.10.2024 (ಪರಿಶಿಷ್ಟ ಜಾತಿಗೆ ಮೀಸಲು)	2	ರೂ.55.56 ಲಕ್ಷಗಳು ರೂ.55,600/–		
3			3	ರೂ.51.13 ಲಕ್ಷಗಳು ರೂ.51,200/–		
4		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/777/2024–25 ದಿನಾಂಕ: 18.10.2024 (ಪರಿಶಿಷ್ಟ ಪಂಗಡಕ್ಕೆ ಮೀಸಲು)	4	ರೂ.49.32 ಲಕ್ಷಗಳು ರೂ.49,500/–		
5		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/777/2024–25 ದಿನಾಂಕ: 18.10.2024	5	ರೂ.77.77 ಲಕ್ಷಗಳು ರೂ.1,55,600/–		
6			6	ರೂ.59.31 ಲಕ್ಷಗಳು ರೂ.1,18,700/–		
7		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/779/2024–25 ದಿನಾಂಕ: 18.10.2024		ರೂ.67.73 ಲಕ್ಷಗಳು ರೂ.1,35,500/–	04.11.2024ರ ಸಂಜೆ 5:30 ಗಂಟೆಯವರೆಗೆ	06.11.2024ರ ಸಂಜೆ 4:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್)ವಿ.ವಿ.

ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
8	ಪಶ್ಚಿಮ–1	ಬೆಂಜಮಂ/ಕಾನಿಅ(ಪ–1)/ಪಿಬಿ/2879/2024–25, ದಿನಾಂಕ: 19.10.2024 (ಪರಿಶಿಷ್ಟ ಜಾತಿಗೆ ಮೀಸಲು)	ರೂ.31,16,095/– ರೂ.31,200/–	05.11.2024ರ ಸಂಜೆ 4:00 ಗಂಟೆಯವರೆಗೆ	06.11.2024ರ ಸಂಜೆ 4:30 ಗಂಟೆಯ ನಂತರ
9		ಬೆಂಜಮಂ/ಕಾನಿಅ(ಪ–1)/ಪಿಬಿ/2878/2024–25, ದಿನಾಂಕ: 19.10.2024	ರೂ.36,99,845/– ರೂ.74,000/–		
10		ಬೆಂಜಮಂ/ಕಾನಿಅ(ಪ–1)/ಪಿಬಿ/2876/2024–25, ದಿನಾಂಕ: 19.10.2024	ರೂ.21,83,805/– ರೂ.43,700/–		
11		ಬೆಂಜಮಂ/ಕಾನಿಅ(ಪ–1)/ಪಿಬಿ/2877/2024–25, ದಿನಾಂಕ: 19.10.2024	ರೂ.47,58,346/– ರೂ.95,200/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/BCPL/2623/2024-25

ಮಾಜಿ ಉಪಮುಖ್ಯಮಂತ್ರಿ ಕೆ.ಎಸ್‌. ಈಶ್ವರಪ್ಪ ಘೋಷಣೆ

ಸಂಕ್ರಾಂತಿಗೆ ನೂತನ ‘ಬ್ರಿಗೇಡ್’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಬರುವ ಜನವರಿಯ ಸಂಕ್ರಾಂತಿ ದಿನ ನೂತನ ಬ್ರಿಗೇಡ್ ಅಸ್ತಿತ್ವಕ್ಕೆ ಬರಲಿದೆ’ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ತಿಳಿಸಿದರು.

ನಗರದ ಚರಂತಿಮಠ ಕಲ್ಯಾಣ ಮಂಟಪದಲ್ಲಿ ಭಾನುವಾರ, ಸಾಧು ಸಂತರು ಹಾಗೂ ಸ್ವಾಮೀಜಿಗಳ ನೇತೃತ್ವದಲ್ಲಿ ಜರುಗಿದ ‘ಹಿಂದುಳಿದ, ದಲಿತ ಹಾಗೂ ಸಮಗ್ರ ಹಿಂದೂ ಸಮಾಜದ ಸಮಸ್ಯೆ ಮತ್ತು ಸವಾಲುಗಳು’ ಚಿಂತನ-ಮಂಥನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಬಸವಣ್ಣನವರ ಐಕ್ಯಸ್ಥಳ ಕೂಡಲಸಂಗಮದಲ್ಲಿ ಸಂಕ್ರಾಂತಿ ದಿನ ಒಂದು ಸಾವಿರ ಸ್ವಾಮೀಜಿಗಳು ಸೇರಿ ಬ್ರಿಗೇಡ್ ಗೆ ಹೆಸರನ್ನು ತೀರ್ಮಾನಿಸಲಿದ್ದಾರೆ. ಅವರ ಮಾರ್ಗದರ್ಶನದಲ್ಲಿಯೇ ಬ್ರಿಗೇಡ್ನ ಕಾರ್ಯಸೂಚಿ ತಯಾರಿಸ ಲಾಗುತ್ತಿದೆ. ಕಾರ್ಯಕ್ರಮಕ್ಕೆ ನಾಡಿನ ಮೂಲೆ ಮೂಲೆಗಳಿಂದ 50 ಸಾವಿರಕ್ಕೂ ಹೆಚ್ಚು ಜನ ಸೇರಲಿದ್ದಾರೆ’ ಎಂದು ಹೇಳಿದರು.

ಬಾಗಲಕೋಟೆಯಲ್ಲಿ ಭಾನುವಾರ ಸಾಧುಸಂತರು, ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಚಿಂತನಮಂಥನ ಸಭೆಯಲ್ಲಿ ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪ ಮಾತನಾಡಿದರು

‘ಬ್ರಿಗೇಡ್ ಸ್ಥಾಪನೆ ನನಗಾಗಿಯೂ ಅಲ್ಲ, ನನ್ನ ಮಗನಿಗೂ ಅಲ್ಲ. ದಲಿತ ಮತ್ತು ಹಿಂದುಳಿದ ವರ್ಗಗಳ ಸ್ವಾಮೀಜಿಗಳ ಅಪೇಕ್ಷೆಯಂತೆ ಸನಾತನ ಹಿಂದೂ ಧರ್ಮದ ಸಂಸ್ಕೃತಿ ಎತ್ತಿ ಹಿಡಿದು, ಹಿಂದುತ್ವ ರಕ್ಷಿಸಿ, ಹಿಂದುಳಿದವರು ಹಾಗೂ ದಲಿತ ಸಮುದಾಯಗಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಿ ನ್ಯಾಯ ಕೊಡಿಸುವುದಕ್ಕಾಗಿ ಸ್ಥಾಪಿಸಲಾಗುತ್ತಿದೆ’ ಎಂದರು.

ಕನಕ ಗುರುಪೀಠದ ತಿಂತಣಿ ಶಾಖಾ ಮಠದ ಸಿದ್ಧರಾಮಾನಂದಪುರಿ ಸ್ವಾಮೀಜಿ, ಮಕನಾಪುರ ಸೋಮಲಿಂಗೇಶ್ವರ ಸ್ವಾಮೀಜಿ, ಹುಬ್ಬಳ್ಳಿಯ ಚಂದ್ರಶೇಖರ ಸ್ವಾಮೀಜಿ, ಅಭಿನವ ಬಸವರಾಜ ಸ್ವಾಮೀಜಿ, ಮಾಧುಲಿಂಗ ಸ್ವಾಮೀಜಿ, ಹುಲಿಜಂತಿ ಮಾಳಿಂಗರಾಯ ಸ್ವಾಮೀಜಿ, ಸೇಡಂನ ಮಾತಾ ನಂದೀಶ್ವರಿ, ಅಮರೇಶ್ವರ ಸ್ವಾಮೀಜಿ, ಈಶ್ವರಪ್ಪ ಪುತ್ರ ಕಾಂತೇಶ, ಮಾಜಿ ಸಚಿವ ಗೂಳಿಹಟ್ಟಿ ಶೇಖರ, ಹಾಲುಮತ ಸಮಾಜದ ಮುಖಂಡ ಮುಕುಡಪ್ಪ ಪಾಲ್ಗೊಂಡಿದ್ದರು.

ಸುಭಾಷಿತ

ಒಂದು ಕ್ಷಣದ ಸಿಟ್ಟಿನಿಂದ ಪಾರಾದರೆ, ನಾಲ್ಕು ದಿನಗಳ ದುಃಖದಿಂದ ಪಾರಾದಂತೆ.

–ಸ್ವಾಮಿ ವಿವೇಕಾನಂದ

ಬೆಂಗಳೂರಿನ ನೀರಿನ ಬೇಡಿಕೆ ಈಡೇರಿಸಲು ದೂರದೃಷ್ಟಿಯ ಯೋಜನೆಗಳು ಅಗತ್ಯ

ಬೆಂಗಳೂರು ನಗರ ಹೊರವಲಯದ 110 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಬೆಂಗಳೂರು ಜಲಮಂಡಳಿಯು ಹತ್ತು ವರ್ಷಗಳ ಹಿಂದೆ ಕಾವೇರಿ ಐದನೇ ಹಂತದ ನೀರು ಪೂರೈಕೆ ಯೋಜನೆಯ ಕಾಮಗಾರಿಯನ್ನು ಕೈಗೆತ್ತಿಕೊಂಡಿತು. ಕಾಮಗಾರಿ ಪೂರ್ಣಗೊಂಡಿದ್ದು, ಕಳೆದ ವಾರದಿಂದ ಈ ಯೋಜನೆಯಡಿ ನಗರಕ್ಕೆ ನೀರು ಪೂರೈಕೆಯೂ ಆರಂಭವಾಗಿದೆ. ನಗರಕ್ಕೆ ಮೊದಲ ಬಾರಿಗೆ ಶುದ್ಧೀಕರಿಸಿದ ನೀರು ಪೂರೈಕೆಯು ಅರ್ಕಾವತಿ ನದಿಯಿಂದ 1896ರಲ್ಲಿ ಆರಂಭವಾಯಿತು. ಕಾವೇರಿ ನದಿಯಿಂದ ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆಯು 1974ರಲ್ಲಿ ಆರಂಭವಾಗಿದ್ದು, 50 ವರ್ಷ ಪೂರೈಸಿದೆ. ಮೊದಲ ನಾಲ್ಕು ಹಂತದ ಯೋಜನೆಗಳಿಂದ ಬೆಂಗಳೂರಿಗೆ ಕಾವೇರಿ ನದಿಯಿಂದ ಪ್ರತಿನಿತ್ಯ 145 ಕೋಟಿ ಲೀಟರ್ ನೀರು ಪೂರೈಕೆಯಾಗುತ್ತಿತ್ತು. ಈಗ 77.5 ಕೋಟಿ ಲೀಟರ್ ನೀರು ಹೆಚ್ಚುವರಿಯಾಗಿ ನಗರಕ್ಕೆ ಹರಿದುಬರುತ್ತಿದೆ. 2008ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ರಚನೆಯಾದಾಗ ಏಳು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 110 ಹಳ್ಳಿಗಳನ್ನು ಬಿಬಿಎಂಪಿಯ ವ್ಯಾಪ್ತಿಗೆ ತರಲಾಯಿತು. ಈ ಪ್ರದೇಶಗಳಲ್ಲಿ ವ್ಯವಸ್ಥಿತವಾದ ಕುಡಿಯುವ ನೀರಿನ ಪೂರೈಕೆ ಇರಲಿಲ್ಲ. ಅಲ್ಲಿನ ನಿವಾಸಿಗಳಿಗೂ ಕಾವೇರಿ ನೀರನ್ನು ಪೂರೈಸಬೇಕೆಂಬ ಬೇಡಿಕೆ ಇತ್ತು. ಈ ಬೇಡಿಕೆ ಈಡೇರಿಸುವ ದಿಸೆಯಲ್ಲಿ ಮೊದಲ ಹಂತದ ಯಶಸ್ಸು ದೊರಕಿದೆ. ಈ ಪ್ರದೇಶದ ಎಲ್ಲ ಮನೆಗಳು, ಕಟ್ಟಡಗಳಿಗೆ ನೀರಿನ ಸಂಪರ್ಕ ಕಲ್ಪಿಸುವುದು ಮತ್ತು ನಿಯಮಿತವಾಗಿ ನೀರು ಪೂರೈಸಲು ದೋಷವಿಲ್ಲದ ವ್ಯವಸ್ಥೆಯೊಂದನ್ನು ರೂಪಿಸಬೇಕಾದ ದೊಡ್ಡ ಸವಾಲು ಈಗ ಜಲಮಂಡಳಿಯ ಮುಂದಿದೆ.

ನೀರಿನ ಸೋರಿಕೆ ತಡೆಗೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಮಿತಬಳಕೆಯ ಬಗ್ಗೆ ಜನರಲ್ಲಿ ನಿರಂತರವಾಗಿ ಜಾಗೃತಿ ಮೂಡಿಸಬೇಕು

ಐದನೇ ಹಂತದ ಯೋಜನೆಯೂ ಸೇರಿದಂತೆ ಈಗ ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ 222.5 ಕೋಟಿ ಲೀಟರ್ ನೀರು ಸರಬರಾಜು ಆಗುತ್ತಿದೆ. ಜಲಮಂಡಳಿಯ ಅಂದಾಜಿನ ಪ್ರಕಾರ, ಕೆಲವು ವರ್ಷಗಳವರೆಗೆ ಬೇಡಿಕೆಯನ್ನು ಸರಿದೂಗಿಸಲು ಸಾಧ್ಯವಾಗುವ ಸ್ಥಿತಿ ಇದೆ. ಆದರೆ, ಭವಿಷ್ಯದ ದಿನಗಳ ಬೇಡಿಕೆಯನ್ನು ಪೂರೈಸಲು ದೂರದೃಷ್ಟಿಯ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾದ ತುರ್ತು ರಾಜ್ಯ ಸರ್ಕಾರದ ಮುಂದಿದೆ. ಜಲಮಂಡಳಿಯ ಅಂದಾಜಿನ ಪ್ರಕಾರ, ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಬೆಂಗಳೂರು ನಗರಕ್ಕೆ 2031ರಲ್ಲಿ 290 ಕೋಟಿ ಲೀಟರ್ ನೀರು ಅಗತ್ಯ. 2041ರಲ್ಲಿ ಈ ಪ್ರಮಾಣ 340 ಕೋಟಿ ಲೀಟರ್‌ಗೆ ಏರಿಕೆಯಾಗಲಿದೆ. 2051ರಲ್ಲಿ 410 ಕೋಟಿ ಲೀಟರ್‌ಗೆ ಹೆಚ್ಚಲಿದೆ. ಈಗ ಕಾವೇರಿ ಕಣಿವೆಯಲ್ಲಿ ರಾಜ್ಯದ ಪಾಲಿಗೆ ನಿಗದಿಯಾಗಿರುವ ನೀರಿನಲ್ಲಿ ಹಂಚಿಕೆಯಾಗದೇ ಉಳಿದಿದ್ದ 6 ಟಿಎಂಸಿ ಅಡಿಯನ್ನು ಬೆಂಗಳೂರು ನಗರದ ಬಳಕೆಗೆ ಮರುಹಂಚಿಕೆ ಮಾಡಲಾಗಿದೆ. ಅದರ ಹೊರತಾಗಿ ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದ ನೀರು ತರಲು ಅವಕಾಶವೇ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ಆರನೇ ಹಂತದ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿಯೂ ಘೋಷಿಸಿದ್ದಾರೆ. ಅಲ್ಲಿಗೆ ಕಾವೇರಿ ಕಣಿವೆಯಲ್ಲಿ ಲಭ್ಯವಿರುವ ನೀರಿನ ಬಳಕೆಯ ಅವಕಾಶಗಳು ಪೂರ್ಣಗೊಂಡಂತಾಗುತ್ತದೆ.

ಜನಸಂಖ್ಯೆ ಹೆಚ್ಚಳ ಮತ್ತು ನಗರದ ವ್ಯಾಪ್ತಿ ವಿಸ್ತಾರವಾದಂತೆ ಬೆಂಗಳೂರಿನ ನೀರಿನ ಬೇಡಿಕೆಯೂ ಹೆಚ್ಚುತ್ತಿದೆ. ಸಮೃದ್ಧವಾಗಿ ಮಳೆಯಾದ ವರ್ಷಗಳಲ್ಲಷ್ಟೇ ಕಾವೇರಿ ಕಣಿವೆಯಿಂದ ಬೆಂಗಳೂರಿಗೆ ಪೂರ್ಣ ಪ್ರಮಾಣದಲ್ಲಿ ನೀರು ತರಲು ಸಾಧ್ಯ. ಮಳೆ ಕೊರತೆಯಾದರೆ ಅದರ ಪರಿಣಾಮ ರಾಜ್ಯ ರಾಜಧಾನಿಯ ಕುಡಿಯುವ ನೀರಿನ ಪೂರೈಕೆಯ ಮೇಲೂ ಆಗುತ್ತದೆ. ರಾಜ್ಯವು ಬರಗಾಲ ಎದುರಿಸಿದ ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದ್ದ ದಿನಗಳನ್ನು ಕಂಡಿದ್ದೇವೆ. ಈಗ ಬೆಂಗಳೂರಿನಲ್ಲಿ ಉಳಿದಿರುವ 189 ಕೆರೆಗಳ ನೀರಿನ ಗುಣಮಟ್ಟ ಸುಧಾರಿಸಿ, ಬಳಸಿಕೊಳ್ಳುವ ಬಗ್ಗೆಯೂ ವೈಜ್ಞಾನಿಕವಾಗಿ ಪರಿಶೀಲಿಸಿ, ಆ ದಿಸೆಯಲ್ಲಿ ಹೆಜ್ಜೆ ಇಡಬೇಕಿದೆ. ಜಲಮಂಡಳಿಯ ಅಂಕಿಅಂಶದ ಪ್ರಕಾರ, ಬೆಂಗಳೂರಿನಲ್ಲಿ 148 ಕೋಟಿ ಲೀಟರ್ ಕೊಳಚೆ ನೀರು ಉತ್ಪತ್ತಿಯಾಗುತ್ತಿದ್ದು, ಅದರಲ್ಲಿ 121.2 ಕೋಟಿ ಲೀಟರ್ ಅನ್ನು ಶುದ್ಧೀಕರಿಸಲಾಗುತ್ತಿದೆ. ಶುದ್ಧೀಕರಣಗೊಂಡ ಬಹುಪಾಲು ನೀರನ್ನು ಕೆ.ಸಿ. ವ್ಯಾಲಿ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕೆರೆಗಳಿಗೆ ಹರಿಸಲಾಗುತ್ತಿದೆ. ಸಂಸ್ಕರಿಸಿದ ಕೊಳಚೆ ನೀರನ್ನು ಕೈಗಾರಿಕೆ, ಕಟ್ಟಡ ನಿರ್ಮಾಣದಂತಹ ಉದ್ದೇಶಗಳಿಗೆ ಬಳಸಿಕೊಳ್ಳುವುದನ್ನು ಕಡ್ಡಾಯಗೊಳಿಸುವ ದಿಸೆಯಲ್ಲಿ ಜಲಮಂಡಳಿ ಹಾಗೂ ರಾಜ್ಯ ಸರ್ಕಾರ ದೃಢವಾದ ಹೆಜ್ಜೆ ಇಡಬೇಕಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ನಗರಕ್ಕೆ ಪೂರೈಕೆಯಾಗುವ ನೀರು ಪೋಲಾಗುವುದನ್ನು ತಡೆಯುವ ಕೆಲಸ ಮಾಡಬೇಕಿದೆ. ನೀರಿನ ಸೋರಿಕೆ ತಡೆಯುವುದಕ್ಕೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಮಿತಬಳಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ಆಗಬೇಕು. ನಗರದಲ್ಲಿ ಸುರಿಯುವ ಮಳೆನೀರನ್ನು ಮುತುವರ್ಜಿಯಿಂದ ಸಂಗ್ರಹಿಸಿ, ಸಂಸ್ಕರಿಸಿ ಬಳಕೆ ಮಾಡಿದರೆ ಬೆಂಗಳೂರಿಗೆ ಬಾಹ್ಯ ಜಲಮೂಲಗಳ ಅವಲಂಬನೆಯ ಅಗತ್ಯವೇ ಇಲ್ಲ ಎಂಬುದು ಜಲತಜ್ಞರ ಅಭಿಪ್ರಾಯ. ಮಳೆನೀರು ಸಂಗ್ರಹವನ್ನು ಕಡ್ಡಾಯಗೊಳಿಸಿದ್ದರೂ ಅದು ಕಾಟಾಚಾರಕ್ಕೆ ಪಾಲನೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತಹ ಬಿಗಿ ನಿಲುವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕು. ಆಗ, ಬೆಂಗಳೂರಿನ ನೀರಿನ ಬೇಡಿಕೆ ಈಡೇರಿಸುವ ವಿಚಾರದಲ್ಲಿ ದೃಢವಾದ ಹೆಜ್ಜೆ ಇರಿಸಿದಂತಾಗುತ್ತದೆ.

ನಾವೀನ್ಯದ ಕುರಿತು ಸದಾ ಮಾತನಾಡುವ ನಾವು, ಸಂಶೋಧನೆಗೆ ಅಗತ್ಯ ಅನುದಾನ ಒದಗಿಸಿದ್ದೇವೆಯೇ?

ಮೇಕ್ ಇನ್ ಇಂಡಿಯಾ: ಮಿಶ್ರಫಲ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಮೇಕ್ ಇನ್ ಇಂಡಿಯಾ ಯೋಜನೆಗೆ ಹತ್ತು ವರ್ಷಗಳು ತುಂಬಿವೆ. ಜೊತೆಗೆ ಯೋಜನೆಯ ಯಶಸ್ಸು, ಅಪಯಶಸ್ಸು ಕುರಿತು ದೊಡ್ಡ ಮಟ್ಟದ ಚರ್ಚೆಗಳೇ ಶುರುವಾಗಿವೆ. ಮನ್ ಕಿ ಬಾತ್‌ನ (ಮನದ ಮಾತು) 114ನೇ ಆವೃತ್ತಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಯೋಜನೆಯು ಅದ್ಭುತ ಯಶಸ್ಸು ಕಂಡಿದೆ ಎಂದು ಹೇಳಿದರು. ತಮ್ಮ ಮನದ ಮಾತಿನ ಕಾರ್ಯಕ್ರಮಕ್ಕೂ ಒಂದು ದಶಕ ತುಂಬಿರುವುದನ್ನು ಅತ್ಯಂತ ಭಾವುಕವಾಗಿ ಸ್ಮರಿಸಿದ್ದಲ್ಲದೆ, ನಾಡಿನ ಸಮಸ್ತರೂ ದೇಶೀಯವಾಗಿ ತಯಾರಾದ ಉತ್ಪನ್ನಗಳನ್ನೇ ಹಬ್ಬ- ಹರಿದಿನಗಳಲ್ಲಿ ಬಳಸಬೇಕು ಮತ್ತು ಪ್ರೀತಿಪಾತ್ರರಿಗೆ ಉಡುಗೊರೆ ನೀಡುವಾಗಲೂ ಇವುಗಳಿಗೇ ಆದ್ಯತೆ ಕೊಡಬೇಕು ಎಂದು ಕರೆ ಕೊಟ್ಟರು. ಯೋಜನೆಯ ಯಶಸ್ಸಿನ ಕುರಿತು ಹಲವಾರು ಉದಾಹರಣೆಗಳನ್ನು ಕೊಡುತ್ತಾ, ಈ ಒಂದು ದಶಕದಲ್ಲಿ ದೇಶವು ತಯಾರಿಕಾ ವಲಯದ ಪವರ್‌ಹೌಸ್ ಎನಿಸಿಕೊಂಡಿದೆ, ಈ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು ಮಾಡಿ ಇಡೀ ವಿಶ್ವದ ಗಮನವನ್ನು ತನ್ನತ್ತ ಸೆಳೆದುಕೊಂಡಿದೆ, ಇದಕ್ಕೆ ದೇಶದ ಯುವಸಮೂಹದ ಕೊಡುಗೆ ಅತ್ಯಂತ ದೊಡ್ಡದು ಎಂದರು. ಈ ಮಧ್ಯೆ ವಿಶ್ವ ಮಾರುಕಟ್ಟೆಯಲ್ಲಿ ಭಾರತದ ಉತ್ಪನ್ನಗಳಿಗೆ ದೊಡ್ಡ ನೆಲೆ ಕಲ್ಪಿಸಿದ್ದ ರತನ್ ಟಾಟಾ ಅವರು ನಮ್ಮನ್ನು ಅಗಲಿದ್ದಾರೆ.

ಉದ್ಯೋಗ ಸೃಷ್ಟಿ, ಉತ್ಪಾದನೆಯ ಹೆಚ್ಚಳದಿಂದ ಜಿಡಿಪಿ ವೃದ್ಧಿ, ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಹೆಚ್ಚಳ, ಮೂಲಸೌಕರ್ಯ ಅಭಿವೃದ್ಧಿ, ವಿದೇಶಗಳಿಂದ ಭಾರತಕ್ಕೆ ಮರಳಿದ 300ಕ್ಕೂ ಹೆಚ್ಚು ಪಾರಂಪರಿಕ ವಸ್ತುಗಳಂತಹವು ಮೇಕ್ ಇನ್ ಇಂಡಿಯಾ ಯೋಜನೆಯ ಯಶಸ್ಸಿನ ಕುರುಹುಗಳು ಎಂಬುದು ಕೆಲವು ಮಾರುಕಟ್ಟೆ ತಜ್ಞರ ಅಂಬೋಣ.

ಆದರೆ ವಾಸ್ತವದಲ್ಲಿ ಏನಾಗಿದೆ ಎಂಬುದನ್ನು ಗಮನಿಸೋಣ. ಯೋಜನೆಯು 2014ರಲ್ಲಿ ಪ್ರಾರಂಭ ಆದಾಗ ಎರಡು ಮುಖ್ಯ ಉದ್ದೇಶಗಳಿದ್ದವು. ಮೊದಲನೆಯದು, ದೇಶದ ಜಿಡಿಪಿಗೆ ಶೇಕಡ 14ರಿಂದ 15ರಷ್ಟು ಕೊಡುಗೆ ನೀಡುತ್ತಿದ್ದ ತಯಾರಿಕಾ ವಲಯದ ಪಾಲನ್ನು ಹತ್ತು ವರ್ಷಗಳಲ್ಲಿ ಶೇಕಡ 25ಕ್ಕೆ ಏರಿಸುವುದು.

ಎರಡನೆಯದು, 2025ರ ವೇಳೆಗೆ ತಯಾರಿಕಾ ವಲಯದಲ್ಲಿ 10 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದು. ಈ ಎರಡೂ ಉದ್ದೇಶಗಳು ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರದಲ್ಲಿ 2012ರಲ್ಲಿ ರೂಪುಗೊಂಡ ಉತ್ಪಾದನಾ ನೀತಿಯ ಪ್ರಮುಖ ಅಂಶಗಳಾಗಿದ್ದವು. ಇವೇ ಅಂಶಗಳು ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿ ಪುನರಾವರ್ತನೆಯಾಗಿವೆ.

ಯೋಜನೆಯ ಪ್ರಾರಂಭದ ದಿನಗಳಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಹೆಚ್ಚಿಸುವುದು, ತಯಾರಿಕಾ ವಲಯದ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವುದು, ವಿವಿಧ ವಲಯಗಳ ರಫ್ತನ್ನು ಹೆಚ್ಚಿಸುವುದು, ನಾವೀನ್ಯದ ಕೆಲಸಗಳಿಗೆ ಹೆಚ್ಚಿನ ಧನಸಹಾಯ ನೀಡುವುದು, ಬಂಡವಾಳ ಹೂಡಿಕೆ ಪ್ರಕ್ರಿಯೆ ಸರಳಗೊಳಿಸುವುದು, ನವೀನ ಆವಿಷ್ಕಾರಗಳನ್ನು ಹೆಚ್ಚಿಸಲು ಬೌದ್ಧಿಕ ಆಸ್ತಿ ಹಕ್ಕು ಪಡೆಯುವುದನ್ನು ಮತ್ತಷ್ಟು ಪರಿಣಾಮಕಾರಿ ಆಗಿಸುವುದು ಮತ್ತು ಜನರ ಕೌಶಲಗಳನ್ನು ವೃದ್ಧಿಸುವ ಉದ್ದೇಶಗಳಿದ್ದವು.

ಇವೆಲ್ಲ ಈಡೇರಿದ್ದರೆ ಅವುಗಳ ಪ್ರಮಾಣವೆಷ್ಟು ಎಂಬುದು ಮುಖ್ಯ ಪ್ರಶ್ನೆ. ಹೌದು ಎಂದು ನಿರೂಪಿಸಲು ಸರ್ಕಾರವು ಎಲೆಕ್ಟ್ರಾನಿಕ್ಸ್, ರಕ್ಷಣಾ ಕ್ಷೇತ್ರ ಮತ್ತು ಆಟಿಕೆ ಗೊಂಬೆಗಳ ತಯಾರಿಕೆ ಕ್ಷೇತ್ರದ ಉತ್ಪನ್ನಗಳ ರಫ್ತು ಪ್ರಮಾಣವು ತೀವ್ರ ಏರಿಕೆ ಕಂಡಿದೆ ಎಂದು ಹೇಳುತ್ತಿದೆ. ಅದು ನಿಜವೂ ಹೌದು. 2014ರಲ್ಲಿ ಮೊಬೈಲ್ ಫೋನ್‌ಗಳ ರಫ್ತಿನ ಮೌಲ್ಯವು ₹ 1,556 ಕೋಟಿಯಷ್ಟಿತ್ತು. 2024ರ ಮಾರ್ಚ್ ವೇಳೆಗೆ ಇದು ₹ 1.2 ಲಕ್ಷ ಕೋಟಿಗೆ ಏರಿದೆ. ಇದು ಸಂತಸದ ವಿಷಯವೇ. ಆದರೆ ನಮ್ಮದೇ ತಂತ್ರಜ್ಞಾನ ಬಳಸಿಕೊಂಡು ತಯಾರಾಗಿರುವ ಮೊಬೈಲ್ ಫೋನು ಯಾವುದು? ಅದು ನಮ್ಮದೇ ಮಾರುಕಟ್ಟೆಯಲ್ಲೇಕೆ ಪ್ರಸಿದ್ಧಿಗೆ ಬಂದಿಲ್ಲ. ಮೇಕ್ ಇನ್ ಇಂಡಿಯಾ ಉದ್ದೇಶವೇ ನಮ್ಮಲ್ಲಿ ತಯಾರಿಸಿದ ವಸ್ತುಗಳನ್ನು ನಾವು ಹೆಚ್ಚು ಬಳಸಬೇಕು ಎಂಬುದಲ್ಲವೇ?

ರಕ್ಷಣಾ ಸಾಮಗ್ರಿಗಳ ರಫ್ತಿನ ಮೌಲ್ಯವು ₹ 1,000 ಕೋಟಿಯಿಂದ ₹ 21,000 ಕೋಟಿಗೆ ಏರಿಕೆ ಕಂಡಿರುವುದು ಹೆಮ್ಮೆಪಡುವ ವಿಷಯ. ಆಟಿಕೆ ಗೊಂಬೆಗಳ ರಫ್ತಿನ ಪ್ರಮಾಣವು ಶೇಕಡ 239ರಷ್ಟು ಏರಿಕೆ ಕಂಡಿರುವುದು ಉತ್ಪಾದಕರನ್ನೇ ದಂಗುಬಡಿಸಿದೆ. ಇದಲ್ಲದೆ 2020ರಲ್ಲಿ ಪ್ರತ್ಯೇಕವಾಗಿ ಜಾರಿಗೆ ಬಂದ ಪ್ರೊಡಕ್ಷನ್ ಲಿಂಕ್ಡ್ ಸ್ಕೀಮ್ (ಉತ್ಪಾದನೆಗೆ ಸಂಬಂಧಿಸಿದ ಯೋಜನೆ) ಅನುಸಾರ ದೇಶದಲ್ಲೇ ಉತ್ಪಾದನೆ ಮಾಡುವ 14 ಕ್ಷೇತ್ರಗಳ ಉದ್ಯಮಗಳಿಗೆ ಹೆಚ್ಚಿನ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಅಂಕಿಅಂಶಗಳ ಪ್ರಕಾರ, 2003ರಿಂದ 2008ರ ಅವಧಿಯಲ್ಲಿ ಆರ್ಥಿಕತೆಗೆ ತಯಾರಿಕಾ ವಲಯದ ಕೊಡುಗೆ ಮತ್ತು ರಫ್ತು ಪ್ರಮಾಣ ಎರಡೂ ತಕ್ಕಮಟ್ಟಿಗೆ ಚೆನ್ನಾಗಿದ್ದವು. 2003ರಿಂದ 2013ರ ವರೆಗೂ ಜಿಡಿಪಿ ಬೆಳವಣಿಗೆಯು ಶೇಕಡ 7ರಿಂದ 8ರಷ್ಟು ಇತ್ತು. ಅದು, ಆರ್ಥಿಕತೆಗೆ ಬಲವನ್ನು ತುಂಬಿತ್ತು. ಆಮದು, ರಫ್ತಿನ ಜೊತೆಗೆ ಉದ್ಯೋಗ ಸೃಷ್ಟಿಯೂ ಸಮಾಧಾನಕರವಾಗಿತ್ತು. ಅಲ್ಲಿಂದ ಈಚೆಗೆ ಒಂದು ದಶಕವೇ ಕಳೆದಿದೆ. ನ್ಯಾಷನಲ್ ಅಕೌಂಟ್ಸ್ ಸ್ಟ್ಯಾಟಿಸ್ಟಿಕ್ಸ್ ವರದಿಯ ಪ್ರಕಾರ, 2001ರಿಂದ 2012ರವರೆಗೆ ಶೇಕಡ 8.1ರಷ್ಟಿದ್ದ ತಯಾರಿಕಾ ವಲಯದ ಒಟ್ಟಾರೆ ಮೌಲ್ಯ ಸೇರ್ಪಡೆ (ಜಿವಿಎ) ಪ್ರಮಾಣವು 2012-23ರ ಅವಧಿಯಲ್ಲಿ ಶೇ 5.5ಕ್ಕೆ ಕುಸಿದಿತ್ತು. ಜಿಡಿಪಿಗೆ ತಯಾರಿಕಾ ವಲಯದ ಕೊಡುಗೆಯು ಹಿಂದಿನ ಮೂರು ದಶಕಗಳಿಂದ ಶೇಕಡ 15ರಿಂದ 17ರಷ್ಟು ಇದೆ. ಅಲ್ಲಿಂದ ಸ್ವಲ್ಪವೂ ಏರಿಕೆ ಕಂಡಿಲ್ಲ.



ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್ (ಎನ್‌ಎಸ್‌ಎಸ್‌ಒ) ನೀಡಿರುವ ಮಾಹಿತಿಯ ಪ್ರಕಾರ, ಹಿಂದಿನ ಹತ್ತು ವರ್ಷಗಳಲ್ಲಿ ತಯಾರಿಕಾ ವಲಯದ ಉದ್ಯೋಗಾವಕಾಶದ ಪ್ರಮಾಣ ಶೇ 12.6ರಿಂದ ಶೇ 11.4ಕ್ಕೆ ಇಳಿಕೆ ಕಂಡಿದೆ. ಹಾಗೆ ನೋಡಿದರೆ, ಅಸಂಘಟಿತ ಕಾರ್ಯಕ್ಷೇತ್ರವು ಹೆಚ್ಚಿನ ಉದ್ಯೋಗಗಳನ್ನು ಮೊದಲಿನಿಂದಲೂ ಸೃಷ್ಟಿಸುತ್ತಿತ್ತು. ಅಲ್ಲೂ 82 ಲಕ್ಷ ಉದ್ಯೋಗಗಳು ನಷ್ಟಗೊಂಡಿವೆ. 2015- 16ರಲ್ಲಿ 3.8 ಕೋಟಿ ಉದ್ಯೋಗ ಸೃಷ್ಟಿಸಿದ್ದ ಅಸಂಘಟಿತ ವಲಯವು 2023ರಲ್ಲಿ ಬರೀ 3 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿತ್ತು.

ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತಿದ್ದ ಜವಳಿ, ಸಿದ್ಧ ಉಡುಪು, ಚರ್ಮದ ಉದ್ಯಮಗಳಲ್ಲೂ ನಿರೀಕ್ಷೆಯಂತೆ ಉದ್ಯೋಗ ಅವಕಾಶಗಳು ಸೃಷ್ಟಿಯಾಗಿಲ್ಲ. ಕೃಷಿ ವಲಯ ಮಾತ್ರ ಇದಕ್ಕೆ ಅಪವಾದವೆಂಬಂತೆ ಆಶಾದಾಯಕ ಬೆಳವಣಿಗೆಯನ್ನು ಕಂಡಿದ್ದು, ಶೇಕಡ 3ರಷ್ಟು ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಿವೆ. ನೇರ ವಿದೇಶಿ ಬಂಡವಾಳ ಹೂಡಿಕೆಯ ಪ್ರಮಾಣ ಇಳಿಮುಖವಾಗಿದೆ.

ಯೋಜನೆಯ ಪ್ರಾರಂಭದ ದಿನಗಳಲ್ಲಿ ಶೇ 1.5ರಷ್ಟಿದ್ದ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಮಾಣವು 2024ರ ವೇಳೆಗೆ ಶೇ 0.8ರಷ್ಟು ಆಗಿರುವುದು ಮಾರುಕಟ್ಟೆ ತಜ್ಞರಲ್ಲಿ ದೊಡ್ಡ ಮಟ್ಟದ ಆತಂಕವನ್ನು ಸೃಷ್ಟಿಸಿದೆ.

ಬಂಡವಾಳ ಹೂಡಿ ವ್ಯಾಪಾರ ಮಾಡುವುದನ್ನು ಸುಲಭವಾಗಿಸುವ (ಈಸ್ ಆಫ್ ಡೂಯಿಂಗ್ ಬಿಸಿನೆಸ್) ಹೇಳಿಕೆಗಳಿಗೆ ತದ್ವಿರುದ್ಧವಾಗಿದೆ ವಸ್ತುಸ್ಥಿತಿ. ವಿದೇಶಿ ಬಂಡವಾಳ ಹರಿದುಬರುತ್ತದೆ ಎಂದು ಕಾಯುತ್ತಾ ಕೂತದ್ದು ಮತ್ತು ತೆರಿಗೆ ಹೆಚ್ಚಳದ ಕ್ರಮಗಳು ಮೇಕ್ ಇನ್ ಇಂಡಿಯಾ ಯೋಜನೆಗೆ ದೊಡ್ಡ ಹಿನ್ನಡೆ ಉಂಟುಮಾಡಿವೆ ಎಂಬುದು ಸುಳ್ಳಲ್ಲ. ತೆರಿಗೆ ವ್ಯಾಜ್ಯಗಳನ್ನು ಎದುರಿಸುತ್ತಿರುವ ಅನೇಕ ಕಂಪನಿಗಳು ಮೇಕ್ ಇನ್ ಇಂಡಿಯಾದ ಬಗ್ಗೆ ಉತ್ಸಾಹ ತೋರಿಸುತ್ತಿಲ್ಲ. ಉತ್ಪಾದನೆ ಹೆಚ್ಚಲು ಕೌಶಲವಿರುವ ದೊಡ್ಡ ಪ್ರಮಾಣದ ಕೆಲಸಗಾರರು ಬೇಕು. ಅದರ ತೀವ್ರ ಕೊರತೆ ಇದೆ. ಈ ವಿಷಯದಲ್ಲಿ ವಿಯೆಟ್ನಾಂ ಮತ್ತು ಬಾಂಗ್ಲಾದೇಶ ನೀಡುತ್ತಿರುವ ಪೈಪೋಟಿಯನ್ನು ಸಹ ಎದುರಿಸಲಾಗುತ್ತಿಲ್ಲ.

ಮೊಬೈಲ್ ಫೋನ್ ತಯಾರಿಕೆ ಮತ್ತು ನೆಟ್‌ವರ್ಕ್ ವ್ಯಾಪಾರ ವಹಿವಾಟುಗಳಲ್ಲಿ ವಿದೇಶಿ ಕಂಪನಿಗಳದ್ದೇ ಇಂದಿಗೂ ಕಾರುಬಾರು. ನಾವೀನ್ಯದ ಕುರಿತು ಸದಾ ಮಾತನಾಡುವ ನಾವು, ಸ್ಯಾಮ್ಸಂಗ್ ಮತ್ತು ಗೂಗಲ್ ಕಂಪನಿಗಳು ಹೂಡುವಷ್ಟು ಬಂಡವಾಳವನ್ನು ಸಹ ಇಡೀ ದೇಶವಾಗಿ ಸಂಶೋಧನೆಗಳಿಗೆ ಮೀಸಲಿಡುತ್ತಿಲ್ಲ. ನಮ್ಮ ಬಹುಪಾಲು ಸಂಶೋಧನೆಗಳು ಏನಿದ್ದರೂ ಸೇವಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಡೆಯುತ್ತಿವೆಯೇ ವಿನಾ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಇಲ್ಲ. ಮೇಕ್ ಇನ್ ಇಂಡಿಯಾ ಯೋಜನೆ ನಿರೀಕ್ಷೆಯಂತೆ ಯಶಸ್ಸು ಗಳಿಸಬೇಕಾದರೆ ಈ ಧೋರಣೆ ಮೊದಲು ಬದಲಾಗಬೇಕಿದೆ.

ಚುರುಮುರಿ

ಚಂದ್ರನ ಕಸ ವಿಲೇವಾರಿ!

• ಸುಮಂಗಲಾ

‘ನೀವು ಮನುಷ್ಯರು ಎಲ್ಲಿ ಹೋದ್ರೂ ಗಲೀಜು ಮಾಡತೀರಿ, ಎಲ್ಲಾ ಕಡೆ ನಿಮ್ಮ ಕಸ ಬಿಟ್ಟು ಬರತೀರಿ’ ಎಂದು ಬೆಕ್ಕಣ್ಣ ಬೆಳಗ್ಗೆಯೇ ಮನುಷ್ಯಕುಲಕ್ಕೆ ಮಂಗಳಾರತಿ ಶುರು ಮಾಡಿತ್ತು.

‘ನೋಡಿಲ್ಲಿ... ಭೂಮಿ ಮ್ಯಾಗೆ ಎಲ್ಲಾ ಕಡೆ ಕಸದ ಬೆಟ್ಟ ಹಾಕಿದ್ದು ಸಾಲದು ಅಂತ ಅಲ್ಲಿ ಚಂದ್ರನ ಮ್ಯಾಗೂ ದೊಡ್ಡ ತೊಂಬತ್ತಾರು ಚೀಲಗಳಷ್ಟಾಗುವ ನಿಮ್ಮ ಕಸವನ್ನು ಬಿಟ್ಟು ಬಂದೀರಂತೆ’ ಎಂದು ಬೆಕ್ಕಣ್ಣ ಸುದ್ದಿ ತೋರಿಸಿ, ನನ್ನ ಮೂತಿಗೆ ತಿವಿಯಿತು. ನಾನು ಉತ್ತರಿಸಲಾಗದೇ ತ್ತೆತ್ತೆಬ್ಬೆಬ್ಬೆ ಎಂದು ತೊದಲಿದೆ.

ಆಮೇಲೆ ಘನಗಂಭೀರವಾಗಿ ಕುಳಿತು ಲ್ಯಾಪ್‌ಟಾಪ್ ತೆರೆದು ಅಧ್ಯಯನ ಮಾಡತೊಡಗಿತು. ಮಧ್ಯಾಹ್ನ ಊಟಕ್ಕೂ ಮೇಲೇಳಲಿಲ್ಲ. ಕುತೂಹಲ ತಡೆಯದೇ ಕೇಳಿದೆ.

‘ಮುಂದಿನ ಚಂದ್ರಯಾನದಾಗೆ ಕಸ ಅಲ್ಲೇ ಬಿಸಾಕಿ ಬರೂ ಹಂಗಿಲ್ಲ. ಚಂದ್ರನ ಮೇಲೆ ಗಗನಯಾತ್ರಿಗಳ ಕಸವನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡೋ ತಂತ್ರಜ್ಞಾನ ಕಂಡುಹಿಡಿದವ್ರಿಗೆ 25 ಕೋಟಿ ರೂಪಾಯಿ ಬಹುಮಾನ ಕೊಡ್ತೀವಿ ಅಂತ ನಾಸಾದವ್ರು ಹೇಳ್ಯಾರೆ. ಲ್ಯೂನಾ ರೀಸೈಕಲ್ ಚಾಲೆಂಜಿನಾಗೆ ಭಾಗವಹಿಸಿ, ಚಂದ್ರನ ಮ್ಯಾಗೆ ಕಸ ನಿರ್ವಹಣೆ ತಂತ್ರಜ್ಞಾನ ಕಂಡುಹಿಡಿದು, ಬಹುಮಾನ ಗೆಲ್ತೀನಿ’ ಬೆಕ್ಕಣ್ಣ ಬಲೇ ಹುರುಪಿನಿಂದ ವಿವರಿಸಿತು.

‘ನಮ್ಮ ದೇಶದಾಗೆ ಪ್ರತಿದಿನ ಸರಾಸರಿ 1.80 ಲಕ್ಷ ಟನ್ ಕಸ ಬಿಸಾಕತೀವಿ. ಅದ್ರಾಗೆ ಸುಮಾರು ಅರ್ಧದಷ್ಟನ್ನು ರೀಸೈಕಲ್ ಮಾಡತೀವಿ, ಇನ್ನು ಅರ್ಧದಷ್ಟನ್ನು ಹಂಗೇ ಹಾಕಿ, ಕಸದ ಪರ್ವತ ಮಾಡತೀವಿ. ಚಂದ್ರನ ಮ್ಯಾಲೆ ಕಸದ ವಿಲೇವಾರಿ ಬಿಡಲೇ, ಮೊದಲು ನಮ್ಮ ದೇಶದ ಕಸದ ನಿರ್ವಹಣೆಗೆ ಒಳ್ಳೆ ತಂತ್ರಜ್ಞಾನ ಕಂಡುಹಿಡಿ’ ಎಂದೆ.

‘ನಮ್ಮ ದೇಶದಾಗೆ ಕಸ ತೆಗೆಯಕ್ಕೆ ಪೌರ ಕಾರ್ಮಿಕರು, ಕಸ ತಗಳ್ಳಕೆ ಬರೋ ಮಂದಿ ಅದಾರೆ. ಇನ್ನು ಕಸದ ನಿರ್ವಹಣೆ ಮಾಡಿ, ರೊಕ್ಕ ಗಳಿಸಾಕೆ ಗುತ್ತಿಗೆದಾರರು, ರಾಜಕಾರಣಿಗಳು, ಮುನ್ಸಿಪಾಲ್ಟಿ ಅಧಿಕಾರಿಗಳು ಹಿಂಗೆ ದೊಡ್ಡ ಗ್ಯಾಂಗೇ ಐತಿ. ಬ್ರಹ್ಮನೇ ತಂತ್ರಜ್ಞಾನ ಕಂಡು ಹಿಡಿದ್ರೂ ಇದು ಸುಧಾರಿಸಂಗಿಲ್ಲ’ ಎಂದು ಬೆಕ್ಕಣ್ಣ ಮೂತಿ ಮುರಿಯಿತು!

ದಿನದ ಟ್ವೀಟ್

ಅಭಿವೃದ್ಧಿ–ಪರಿಸರ ಜೊತೆಗೆ ಸಾಗಲಿ

ನಮ್ಮ ರಸ್ತೆಗಳ ವಿಸ್ತೀರ್ಣಕ್ಕಿಂತ ಹೆಚ್ಚಾಗಿ ಗಾಳಿ ಮತ್ತು ಮರ–ಗಿಡಗಳ ಬಗ್ಗೆ ನನಗೆ ಹೆಚ್ಚು ಕಳಕಳಿ ಇದೆ. ಅಭಿವೃದ್ಧಿಯ ಜೊತೆ ಪರಿಸರಕ್ಕೂ ಆದ್ಯತೆ ನೀಡಲು ನಮಗೆ ಸಾಧ್ಯವಾಗದೇ?

ಲೀಲಾ ನಾಯರ್, ಪರಿಸರ ಕಾರ್ಯಕರ್ತೆ

ಕಿಡಿನುಡಿ

ಗಮನಸೆಳೆದ ಸುದ್ದಿ: ಮಹಾರಾಷ್ಟ್ರದ ನೇತಾರರು ಶಾಹು–ಫುಲೆ–ಅಂಬೇಡ್ಕರ್ ಪರಂಪರೆಯ ಬಗ್ಗೆ ದೊಡ್ಡದಾಗಿ ಮಾತನಾಡುತ್ತಾರೆ. ಆದರೆ, ಜಾಮೀನಿನ ಮೇಲೆ ಹೊರಗಿರುವ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿಯನ್ನು ಶಿವಸೇನಾವು (ಶಿಂದೆ ಬಣ) ಪಕ್ಷದ ಸದಸ್ಯನನ್ನಾಗಿ ಮಾಡಿಕೊಂಡಿದೆ. ಛತ್ರಪತಿ ಶಿವಾಜಿ ಇದನ್ನು ಒಪ್ಪುವರೇ?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಗುರುವಾರ, 21-10-1999

• **ಕಲಾಪದಲ್ಲಿ ಕರ್ನಾಟಕ ಸದಸ್ಯರ ನಿರಾಸಕ್ತಿ**

ನವದೆಹಲಿ, ಅ. 20 – ಕರ್ನಾಟಕದ ಅನೇಕ ಸದಸ್ಯರು ಗೈರುಹಾಜರಾಗುವ ಮೂಲಕ ಲೋಕಸಭೆ ಕಲಾಪದಲ್ಲಿ ನಿರಾಸಕ್ತಿ ತೋರುವ ಪರಂಪರೆ 13ನೇ ಲೋಕಸಭೆಯ ಪ್ರಥಮ ಅಧಿವೇಶನದ ಮೊದಲ ದಿನವೇ ಕಂಡುಬಂದಿತು.

ಸೋನಿಯಾ ಗಾಂಧಿ ರಾಜೀನಾಮೆಯಿಂದ ತೆರವಾಗಿರುವ ಬಳ್ಳಾರಿ ಕ್ಷೇತ್ರ ಬಿಟ್ಟು ಒಟ್ಟು 27 ಮಂದಿ ಸದಸ್ಯರ ಪೈಕಿ, ಇಬ್ಬರು ಸಚಿವರು ಸೇರಿದಂತೆ ಹದಿನೆಂಟು ಮಂದಿ ಮಾತ್ರ ಇಂದು ಪ್ರಮಾಣವಚನ ಸ್ವೀಕರಿಸಿದರು.

ಉಳಿದವರು ಸದನದ ಆರಂಭದ ದಿನ ಗೈರುಹಾಜರಾಗಿದ್ದುದು ಎದ್ದು ಕಾಣುತ್ತಿತ್ತು. ಸಚಿವ ಅನಂತ ಕುಮಾರ್ ಮತ್ತು ವಿ.ಧನಂಜಯ ಕುಮಾರ್ ಸೇರಿದಂತೆ ಸಿ.ಕೆ.ಜಾಫರ್ ಷರೀಫ್, ಮಾರ್ಗರೇಟ್ ಆಳ್ವ, ಜಿ.ಎಸ್.ಬಸವರಾಜು, ರಮೇಶ ಜಿಗಜಿಣಗಿ, ಎ.ವೆಂಕಟೇಶ ನಾಯಕ್, ಕೆ.ಎಚ್.ಮುನಿಯಪ್ಪ, ಜಿ.ಪುಟ್ಟಸ್ವಾಮಿ ಗೌಡ, ಆರ್.ಎಸ್.ಪಾಟೀಲ ಅವರು ಕನ್ನಡದಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು.

ಪುಟ್ಟಸ್ವಾಮಿ ಗೌಡ ಅವರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಸೋಲಿಸಿದ್ದಾರೆ ಎಂದು ತುಮಕೂರಿನಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಜಿ.ಎಸ್. ಬಸವರಾಜು ಸದನದ ಗಮನ ಸೆಳೆದರು.

• **ಇಂದಿನಿಂದ ಲಾರಿ ಮುಷ್ಕರ ‘ಎಸ್ಮಾ’ ಜಾರಿ ಎಚ್ಚರಿಕೆ**

ನವದೆಹಲಿ, ಅ. 20 (ಯುಎನ್‌ಐ)– ಲಾರಿ ಮಾಲೀಕರ ಸಂಘಗಳು ದೇಶದಾದ್ಯಂತ ನಡೆಸಲು ಉದ್ದೇಶಿಸಿರುವ ಮುಷ್ಕರದಿಂದ ಅವಶ್ಯಕ ವಸ್ತುಗಳ ಬೆಲೆ ಏರುವುದನ್ನು ತಡೆಯಲು ರಾಜ್ಯ ಸರ್ಕಾರಗಳು ಅವಶ್ಯಕ ಸೇವೆ ಕಾಯ್ದೆ (ಎಸ್ಮಾ) ವಿಧಿಸಬಹುದು ಎಂದು ಕೇಂದ್ರ ಸರ್ಕಾರ ಇಂದು ರಾತ್ರಿ ಪ್ರಕಟಿಸಿದೆ.

ಡೀಸೆಲ್ ಬೆಲೆ ಹೆಚ್ಚಳ ಮಾಡಿರುವುದನ್ನು ವಿರೋಧಿಸಿ ನಾಳೆ ಬೆಳಿಗ್ಗೆ 6 ಗಂಟೆಯಿಂದ ಅನಿರ್ದಿಷ್ಟ ಕಾಲದ ಲಾರಿ ಮುಷ್ಕರ ಪ್ರಾರಂಭವಾಗಲಿದೆ.

50 ವರ್ಷಗಳ ಹಿಂದೆ

ಸೋಮವಾರ, 21-10-1974

• **ವೈದ್ಯಕೀಯ ಶಿಕ್ಷಣಕ್ಕೆ ಬಡವರ ಸೇವೆಯ ಗುರಿ ಇರಲಿ– ಅಹ್ಮದ್**

ನವದೆಹಲಿ, ಅ. 20– ಭಾರತ ಮತ್ತು ಇತರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಇಂದಿನ ವೈದ್ಯಕೀಯ ಶಿಕ್ಷಣದ ಪ್ರಯೋಜನವು, ನರಳುತ್ತಿರುವ ಲಕ್ಷಾಂತರ ಜನರಿಗೆ ‘ಬಹಳ ಕಡಿಮೆ ಪ್ರಮಾಣದಲ್ಲಿ ಲಭ್ಯವಾಗುತ್ತಿದೆ’ ಎಂದು ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಅವರು ಇಂದು ಇಲ್ಲಿ ಹೇಳಿದರು.

ಅಂತರರಾಷ್ಟ್ರೀಯ ಶಾರೀರಿಕ ವಿಜ್ಞಾನಗಳ 26ನೇ ಸಮ್ಮೇಳನ ಉದ್ಘಾಟಿಸಿದ ಅವರು, ದೇಶದಲ್ಲಿ ತರಬೇತಿ ಪಡೆದ ವೈದ್ಯರ ಸಂಖ್ಯೆ ಹೆಚ್ಚಾಗಿದ್ದರೂ, ಹಳ್ಳಿಗಳಲ್ಲಿ ಕೆಲಸ ಮಾಡಲು ಇವರಲ್ಲಿ ಬಹುತೇಕರು ಹಿಂದೇಟು ಹಾಕುತ್ತಿರುವುದರಿಂದ, ಗ್ರಾಮೀಣ ಜನರಿಗೆ ಆರೋಗ್ಯ ಸೇವೆಯು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿಲ್ಲ ಎಂದು ಹೇಳಿದರು.

ಚರ್ಚೆ

ಪ್ರಭಾವಿ ಪ್ರಕಾಶಕರು: ಸರ್ಕಾರದ ಮೌನವೇಕೆ?

ಗ್ರಂಥಾಲಯ ಕ್ಷೇತ್ರವನ್ನು ಅನುತ್ಪಾದಕ ಎಂದು ಪರಿಗಣಿಸದೆ, ಪುಸ್ತಕ ಸಂಸ್ಕೃತಿಯನ್ನು ಬಿತ್ತಿ ಬೆಳೆಯುತ್ತಿರುವ ಕ್ಷೇತ್ರವೆಂದು ಪರಿಗಣಿಸಬೇಕಾದ ತುರ್ತು ಅಗತ್ಯ ಈಗ ಎದುರಾಗಿದೆ

• ರಾಜಕುಮಾರ ಕುಲಕರ್ಣಿ

ಗ್ರಂಥಾಲಯ ಇಲಾಖೆಯಿಂದ 2020ನೇ ಸಾಲಿನಲ್ಲಿ ಆಯ್ಕೆಗೊಂಡು ಪೂರೈಸಿರುವ ಪುಸ್ತಕಗಳ ಹಣ ಪೂರ್ಣಪ್ರಮಾಣದಲ್ಲಿ ಪಾವತಿ ಆಗಿಲ್ಲ ಎಂದು ಕೆಲವು ಪ್ರಕಾಶಕರು ಪತ್ರಿಕೆಯಲ್ಲಿ ಇತ್ತೀಚೆಗೆ ಅಳಲು ತೋಡಿಕೊಂಡಿದ್ದಾರೆ. ಜೊತೆಗೆ ಕೆಲವು ಪಟ್ಟಭದ್ರ ಪ್ರಕಾಶಕರು ಇಲಾಖೆಯ ಪುಸ್ತಕ ಖರೀದಿ ಆದೇಶಪತ್ರವು ಎಲ್ಲ ಪ್ರಕಾಶಕರಿಗೆ ತಲುಪುವ ಮೊದಲೇ ಪುಸ್ತಕಗಳನ್ನು ಪೂರೈಸಿ ಹಣ ಪಡೆಯುತ್ತಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಪ್ರಕಾಶಕರ ಇಂತಹ ಆರೋಪದ ಅನ್ವಯ, ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಪೂರೈಸುತ್ತಿರುವ ಪ್ರಕಾಶಕರಲ್ಲಿ ದುರ್ಬಲರು ಮತ್ತು ಸಬಲರು ಎಂದು ಎರಡು ಗುಂಪುಗಳಿರುವ ಸತ್ಯ ಬಹಿರಂಗಗೊಂಡಿದೆ.

2020ನೇ ಸಾಲಿನ ಹಣ ಪೂರ್ಣಪ್ರಮಾಣದಲ್ಲಿ ತಮಗೆ ಪಾವತಿಯಾಗದೆ 2021ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು ವ್ಯಾವಹಾರಿಕ ನೈತಿಕತೆ ಅಲ್ಲ ಎನ್ನುವ ಪ್ರಕಾಶಕರ ಮಾತಿನಲ್ಲಿ ಸತ್ಯವಿದೆ. ಹೀಗೆ ಪೂರ್ಣಪ್ರಮಾಣದಲ್ಲಿ ಹಣ ಪಾವತಿಯಾಗದೇ ಇರುವುದು ಎಲ್ಲ ಪ್ರಕಾಶಕರಿಗಲ್ಲ, ಕೆಲವು ಪ್ರಕಾಶಕರಿಗೆ ಮಾತ್ರ ಎನ್ನುವ ಸಂಗತಿ ಬೆಳಕಿಗೆ ಬಂದಿದೆ. ಇಂತಹ ತಾರತಮ್ಯದ ವಿರುದ್ಧ ಧ್ವನಿ ಎತ್ತಿರುವ ಪ್ರಕಾಶಕರ ನಡೆ ಅಭಿನಂದನಾರ್ಹ. ಪುಸ್ತಕಗಳನ್ನು ಪೂರೈಸಿರುವ ಎಲ್ಲ ಪ್ರಕಾಶಕರಿಗೆ ಹಣವನ್ನು ಪಾವತಿಸಬೇಕಾದದ್ದು ಇಲಾಖೆಯ ಜವಾಬ್ದಾರಿ. ಕೆಲವು ಪ್ರಭಾವಿ ಪ್ರಕಾಶಕರಿಗೆ ಆದ್ಯತೆ ನೀಡಿ, ಉಳಿದ ಪ್ರಕಾಶಕರ ವಿಷಯದಲ್ಲಿ ತಾರತಮ್ಯ ಧೋರಣೆ ತಳೆಯುವುದು ಸರಿಯಲ್ಲ.

ಕೆಲವರನ್ನು ಹೊರತುಪಡಿಸಿ ಹೆಚ್ಚಿನ ಪ್ರಕಾಶಕರು ಪ್ರತಿವರ್ಷ ಸೀಮಿತ ಸಂಖ್ಯೆಯಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಇಲಾಖೆಯ ವಿರುದ್ಧ ಧ್ವನಿ ಎತ್ತಿದವರಲ್ಲಿ ಬಹುತೇಕರು ಸೀಮಿತ ಸಂಖ್ಯೆಯಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಪ್ರಕಾಶಕರು ಎನ್ನುವುದು ಗಮನಿಸಬೇಕಾದ ಸಂಗತಿ. ಸರ್ಕಾರ ತಮಗೆ ಪಾವತಿಸಬೇಕಾದ ಹಣವನ್ನು ಮೊದಲು ಪಾವತಿಸಿ ನಂತರದ ವರ್ಷದ ಪುಸ್ತಕಗಳ ಆಯ್ಕೆಯ ಪ್ರಕ್ರಿಯೆಯನ್ನು ಆರಂಭಿಸಲಿ ಎನ್ನುವುದು ಅವರ ಬೇಡಿಕೆ. ಇಂತಹ ಸನ್ನಿವೇಶದಲ್ಲಿ ಪ್ರತಿವರ್ಷ ನೂರಾರು ಶೀರ್ಷಿಕೆಗಳ ಸಾವಿರಾರು ಪುಸ್ತಕಗಳನ್ನು ಪ್ರಕಟಿಸುತ್ತಿರುವ ಪ್ರಕಾಶಕರೇಕೆ ಇಲಾಖೆಯ ವಿರುದ್ಧ ಧ್ವನಿ ಎತ್ತುತ್ತಿಲ್ಲ ಎನ್ನುವ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ. ಪ್ರಕಾಶಕರ ಈ ಮೌನ ಹಲವು ಸಂದೇಹಗಳಿಗೆ ಆಸ್ಪದ ಮಾಡಿಕೊಡುತ್ತದೆ.

ಇಲಾಖೆಯ ತಾರತಮ್ಯ ಧೋರಣೆ ವಿರುದ್ಧ ಧ್ವನಿ ಎತ್ತದೇ ಇರುವ ಎಲ್ಲ ಪ್ರಕಾಶಕರನ್ನು ಅನುಮಾನದಿಂದ ನೋಡುವುದು ಅಥವಾ ಅವರ ವಿರುದ್ಧ ಆರೋಪ ಹೊರಿಸುವುದು ತಪ್ಪು. ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ತಮ್ಮದೇ ಓದುಗರ ಬಳಗವನ್ನು ಸೃಷ್ಟಿಸಿಕೊಂಡಿರುವ ಕೆಲವು ಪ್ರಕಾಶಕರು ಗ್ರಂಥಾಲಯ ಇಲಾಖೆಯನ್ನು ನೆಚ್ಚಿಕೊಂಡಿರುವುದು ಕಡಿಮೆ. ಗುಣಾತ್ಮಕ ಪುಸ್ತಕಗಳನ್ನು ಖರೀದಿಸುವಲ್ಲಿ ಓದುಗರು ತೋರಿಸುತ್ತಿರುವ ಆಸಕ್ತಿಯೇ ಕೆಲವು ಪ್ರಕಾಶಕರಿಗೆ ನಿಯಮಿತವಾಗಿ ಪುಸ್ತಕಗಳನ್ನು ಪ್ರಕಟಿಸಲು ಪ್ರೇರಣೆಯಾಗಿದೆ. ಹಾಗೆಂದು ಇಲಾಖೆಯ ವಿರುದ್ಧ ಧ್ವನಿ ಎತ್ತಿರುವ ಪ್ರಕಾಶಕರು ಗುಣಾತ್ಮಕ ಪುಸ್ತಕಗಳನ್ನು ಪ್ರಕಟಿಸುತ್ತಿಲ್ಲ ಎಂದರ್ಥವಲ್ಲ. ಹೋರಾಟದ ಕಹಳೆ ಊದಿರುವ ಪ್ರಕಾಶಕರಲ್ಲಿ ಹೆಚ್ಚಿನವರು ಪ್ರತಿವರ್ಷ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಆದರೆ ತಮ್ಮ ಸೀಮಿತ ಸಂಖ್ಯೆಯ ಪ್ರಕಟಣೆ ಹಾಗೂ ಸೀಮಿತ ಓದುಗ ಬಳಗವನ್ನು ಹೊಂದಿರುವವರಿಗೆ ಗ್ರಂಥಾಲಯ ಇಲಾಖೆಯ ನೆರವು ಬೇಕಾಗಬಹುದು. ಅದರ ಮೇಲೆ ಅವಲಂಬನೆ ಅನಿವಾರ್ಯ ಕೂಡ ಆಗಿರುತ್ತದೆ.

ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಪೂರೈಸಲೆಂದೇ ಕೆಲವು ಪ್ರಕಾಶನ ಸಂಸ್ಥೆಗಳು ಹುಟ್ಟಿಕೊಂಡಿವೆ. ಇನ್ನು ಕೆಲವು ಪ್ರಕಾಶಕರು ಅಸ್ತಿತ್ವದಲ್ಲಿಯೇ ಇಲ್ಲದ ಹತ್ತಾರು ಪ್ರಕಾಶನ ಸಂಸ್ಥೆಗಳ ಹೆಸರಿನಿಂದ ಪುಸ್ತಕಗಳನ್ನು ಪೂರೈಸಿ ಆರ್ಥಿಕವಾಗಿ ಬಲಾಢ್ಯರಾಗುತ್ತಿದ್ದಾರೆ. ಇಂತಹ ಪ್ರಕಾಶಕರೇ ಇಲಾಖೆಯನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ನಿಯಂತ್ರಿಸುತ್ತಿದ್ದಾರೆ. ಇಲಾಖೆಯ ಮೇಲಧಿಕಾರಿಗಳ ಜೊತೆಗೆ ಸ್ನೇಹ ಬೆಳೆಸಿ, ಪುಸ್ತಕ ಪೂರೈಕೆಗೆ ಸಂಬಂಧಿಸಿದ ಮಾಹಿತಿಯನ್ನು ಅಧಿಕೃತ ಆದೇಶ ಹೊರಬೀಳುವ ಮೊದಲೇ ಕಲೆಹಾಕುತ್ತಾರೆ. ಪೂರೈಸಿದ ಪುಸ್ತಕಗಳ ಹಣವನ್ನು ಕೂಡ ಎಲ್ಲರಿಗಿಂತ ಮೊದಲು ಪಡೆಯುತ್ತಿದ್ದಾರೆ.

ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ವಿಳಂಬ ಧೋರಣೆಯು ಇಲಾಖೆಯ ಸೋಮಾರಿತನ ಮತ್ತು ನಿರ್ಲಕ್ಷ್ಯಕ್ಕೆ ಕೈಗನ್ನಡಿಯಾಗಿದೆ. 2021ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು 2024ರಲ್ಲಿ ಪೂರ್ಣಗೊಳಿಸಿದ್ದು ನ್ಯಾಯಸಮ್ಮತವಲ್ಲ. ಪ್ರಕಾಶಕರ ಬೇಡಿಕೆಯಂತೆ ಆಯಾ ವರ್ಷದ ಪುಸ್ತಕಗಳ ಆಯ್ಕೆ, ಖರೀದಿ ಮತ್ತು ಹಣಪಾವತಿಯನ್ನು ಆಯಾ ಆರ್ಥಿಕ ವರ್ಷದಲ್ಲೇ ಪೂರ್ಣಗೊಳಿಸುವುದು ಸರಿಯಾದ ಕ್ರಮ. ಗ್ರಂಥಾಲಯ ಇಲಾಖೆ ಕೂಡ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಕ್ಷೇತ್ರವನ್ನು ಅನುತ್ಪಾದಕ ಕ್ಷೇತ್ರವೆಂದು ಪರಿಗಣಿಸದೆ ಪುಸ್ತಕ ಸಂಸ್ಕೃತಿಯನ್ನು ಬಿತ್ತಿ ಬೆಳೆಯುತ್ತಿರುವ ಕ್ಷೇತ್ರವೆಂದು ಪರಿಗಣಿಸಬೇಕಾಗಿದೆ. ಅಂತೆಯೇ ಸದೃಢಗೊಳಿಸಲು ಕ್ರಮ ಜರುಗಿಸಬೇಕಿದೆ.

ಗ್ರಂಥಾಲಯ ಇಲಾಖೆಯಲ್ಲಿ ಅವ್ಯವಹಾರ ಏಕೆ ತಾಂಡವವಾಡುತ್ತಿದೆ? ಪುಸ್ತಕಗಳ ಖರೀದಿ ಮತ್ತು ಹಣ ಪಾವತಿಯಲ್ಲಿ ಏಕೆ ತಾರತಮ್ಯ ಮಾಡಲಾಗುತ್ತಿದೆ? ಪ್ರಭಾವಶಾಲಿ ಪ್ರಕಾಶಕರು ಹತ್ತಾರು ಪ್ರಕಾಶನ ಸಂಸ್ಥೆಗಳ ಹೆಸರುಗಳಿಂದ ಪುಸ್ತಕಗಳನ್ನು ಪೂರೈಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿಲ್ಲವೇ? ಗಮನಕ್ಕೆ ಬಂದರೂ ಮೇಲಧಿಕಾರಿಗಳು ಕಣ್ಣಿದ್ದೂ ಕುರುಡರಂತೆ ಇರಲು ಏನು ಕಾರಣ? ಈ ಎಲ್ಲ ಪ್ರಶ್ನೆಗಳಿಗೆ ಸರ್ಕಾರ ಉತ್ತರದಾಯಿಯಾಗಬೇಕಿದೆ ಮತ್ತು ಕಠಿಣ ನಿಲುವು ತಳೆಯಬೇಕಿದೆ.

ವಾಚಕರ ವಾಣಿ

ಸ್ವದೇಶಿ ಸ್ವಾರ್ಥಿಗಳಿಂದ ಪಾರಾಗುವುದು ಹೇಗೆ?

ಬಾಲ್ಯದಲ್ಲಿ ನಮಗೆ ಪ್ರೇಮಚಂದ್ ಅವರ ‘ಜಿಸ್‌ಕೀ ಲಾಠಿ ಉಸ್‌ಕೀ ಭೈಸ್’ (ಯಾರ ಕೈಯಲ್ಲಿ ಕೋಲಿದೆಯೋ ಅವರದೇ ಎಮ್ಮೆ) ಎಂಬ ಪಾಠ ಇತ್ತು. ಹಾಗೇ ಈಗಿನ ಚುನಾವಣಾ ಅಭ್ಯರ್ಥಿಗಳನ್ನು ನೋಡಿದರೆ, ಯಾರ ಕೈಯಲ್ಲಿ ಹಣ, ಅಧಿಕಾರ ಬಲವಿದೆಯೋ ಅವರೇ ಅಭ್ಯರ್ಥಿಗಳು ಎಂಬುದು ಸ್ಪಷ್ಟವಾಗುತ್ತದೆ. ವಿಶೇಷವಾಗಿ, ತಮ್ಮ ಕುಟುಂಬದ ಪರಿಧಿಯಲ್ಲಿಯೇ ಅಧಿಕಾರ ಇರಬೇಕೆಂಬ ಇರಾದೆ. ಇದಕ್ಕೆ ಅಂತ್ಯ ಹಾಡುವುದಾದರೂ ಯಾರು? ತಂದೆ, ಮಗ, ಹೆಂಡತಿ, ಸಹೋದರ... ಹೀಗೆ ಒಂದೇ ಕುಟುಂಬದಲ್ಲಿ ಗಿರಕಿ ಹೊಡೆಯುವ ರಾಜಕಾರಣದ ಈ ಕೆಟ್ಟ ಪದ್ಧತಿ ಪಕ್ಷಾತೀತವಾಗಿ ನಡೆದುಬರುತ್ತಿದೆ. ಇದರಿಂದ ಸಾಮಾನ್ಯ ಕಾರ್ಯಕರ್ತರು ಅವಮಾನಕರ ಸ್ಥಿತಿ ಎದುರಿಸಬೇಕಾಗಿದೆ. ವೇದಿಕೆಯ ಮೇಲೆ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವಾಗ ಲೋಕೋದ್ಧಾರದ ಮುತ್ತು ಸುರಿಸುವವರು ಅಧಿಕಾರದ ತುತ್ತನ್ನು ಮಾತ್ರ ತಾವೇ ನುಂಗಿಬಿಡುತ್ತಾರೆ.

ಚುನಾವಣೆ ಎದುರಿಸಲು ಭಾರಿ ಮೊತ್ತದ ಹಣ ಬೇಕಾಗುತ್ತದೆ ಎಂಬುದು ಇದರ ಹಿಂದಿನ ಉದ್ದೇಶ. ಬೀದಿಯಲ್ಲಿ ಬಾಯಿ ಬಡಿದುಕೊಂಡು ಕಚ್ಚಾಡುವ ಕಾರ್ಯಕರ್ತರ ಕೈಯಲ್ಲಿ ಅಷ್ಟೊಂದು ಹಣ ಎಲ್ಲಿರುತ್ತದೆ? ದೇಶ, ಧರ್ಮ, ಜಾತಿ ಎಂಬ ಅಮಲಿನಲ್ಲಿ ಅವರನ್ನು ಅಡ್ಡ ಕೆಡವಲಾಗಿರುತ್ತದೆ. ದಿನಬೆಳಗಾದರೆ ಪರಸ್ಪರ ಕೆಸರೆರಚಾಡಿಕೊಂಡು ನೈತಿಕತೆಯ ಗಡಿ ದಾಟಿ ಲಾಭಕೋರತನದಿಂದ ನಡೆದುಕೊಳ್ಳುತ್ತಿರುವ ಮಂದಿಯನ್ನು ಜನ ತೀಕ್ಷ್ಣ ದೃಷ್ಟಿಯಿಂದ ಗಮನಿಸಬೇಕಾಗಿದೆ. ವಿದೇಶಿಯರನ್ನು ತೊಲಗಿಸಲು ಬಹು ದೊಡ್ಡ ಸಂಗ್ರಾಮ ನಡೆಯಿತು. ಆದರೆ ಈಗ ಸ್ವದೇಶಿ ಸ್ವಾರ್ಥಿಗಳಿಂದ ಪಾರಾಗುವುದಾದರೂ ಹೇಗೆ?

ತಿರುಪತಿ ನಾಯಕ್, ಕಲಬುರಗಿ

ರೈತರ ನೋವು, ಯಾರಿಗೋ ಹೂವು

ತುಮಕೂರಿನ ಅಂತರಸನಹಳ್ಳಿ ಮಾರುಕಟ್ಟೆಗೆ ವಿವಿಧ ಬಗೆಯ ಹೂವುಗಳನ್ನು ತಂದಿದ್ದ ರೈತರು, ಬೆಲೆ ತೀವ್ರವಾಗಿ ಕುಸಿದದ್ದರಿಂದ ಆ ಹೂವುಗಳನ್ನು ರಸ್ತೆಗೆ ಚೆಲ್ಲಿ ನಿರಾಸೆಯಿಂದ ಮನೆಗೆ ತೆರಳಿದರು ಎಂದೂ, ಮಾರುಕಟ್ಟೆಗೆ ಬಂದಿದ್ದ ಜನ ಉಚಿತವಾಗಿ ಸಿಕ್ಕ ಹೂವನ್ನು ಚೀಲಕ್ಕೆ ತುಂಬಿಸಿಕೊಂಡರು ಎಂದೂ ವರದಿಯಾಗಿದೆ (ಪ್ರ.ವಾ., ಅ. 20). ಇಂತಹ ಅನ್ಯಾಯದ ಅನೇಕ ಸಂದರ್ಭಗಳನ್ನು ರೈತ ಅನುಭವಿಸಿದ್ದಾನೆ. ಈರುಳ್ಳಿ, ಟೊಮೆಟೊ, ಬೀಟ್ರೂಟ್, ಆಲೂಗಡ್ಡೆಯಂತಹ ಹೆಚ್ಚುಕಾಲ ಸಂಗ್ರಹಿಸಿಡಲಾಗದ ಬೆಳೆಗಳನ್ನು ಬೆಳೆದು, ಸೂಕ್ತ ಬೆಲೆ ಸಿಗದೆ ರಸ್ತೆಗೆ ಸುರಿಯುವುದರ ಜೊತೆಗೆ ಕಣ್ಣೀರನ್ನೂ ಸುರಿಸಿದ್ದಾನೆ. ಬೆಳೆ ಬೆಳೆಯಲು ರೈತ ಕುಟುಂಬ ಎಷ್ಟು ಬೆವರು ಸುರಿಸಿರುತ್ತದೆ, ಎಷ್ಟು ಹಣ ಖರ್ಚು ಮಾಡಿರುತ್ತದೆ ಎಂಬ ಅರಿವು, ಉತ್ಪನ್ನವನ್ನು ಚೀಲಕ್ಕೆ ಉಚಿತವಾಗಿ ತುಂಬಿಸಿಕೊಳ್ಳುವ ಜನರಿಗೆ ಇರಬೇಕು.

ರೈತರ ಸಮಸ್ಯೆಗಳನ್ನು ಭಾಷಣಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಮಾರುಕಟ್ಟೆ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರ ಇದುವರೆಗೆ ವಿಫಲವಾಗಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಜನ ಸೌಜನ್ಯಕ್ಕಾದರೂ ಒಂದಿಷ್ಟು ಹಣವನ್ನು ಕೊಟ್ಟು ರೈತನ ಕೈ ಹಿಡಿಯಬಹುದಲ್ಲವೇ? ಮಾಡಿದ ಖರ್ಚಾದರೂ ಬಂದರೆ ರೈತನ ಕಣ್ಣೀರು ಒರೆಸಿದಂತೆ ಆಗುವುದಿಲ್ಲವೇ?

ದಾಸೇಗೌಡ ಎಂ.ಆರ್., ಚಿತ್ರದುರ್ಗ

ಬ್ಯಾಂಕ್ ಖಾತೆ ಬ್ಲಾಕ್ ಮಾಡುವುದೇಕೆ?

ರಾಷ್ಟ್ರೀಕೃತ ಬ್ಯಾಂಕೊಂದರ ಶಾಖೆಯಲ್ಲಿ ಇತ್ತೀಚೆಗೆ ಹಣ ಪಡೆಯಲು ಚೆಕ್ ಕೊಟ್ಟೆ. ‘ಸರ್, ನಿಮ್ಮ ಖಾತೆ ಫ್ರೀಜ್ ಆಗಿದೆ’ ಎಂದ ಕ್ಯಾಷಿಯರ್ ಒಳಕ್ಕೆ ಕಳುಹಿಸಿದರು. ಅಲ್ಲಿದ್ದ ಮಹಿಳಾ ಅಧಿಕಾರಿ ಇ–ಕೆವೈಸಿ ಆಗಬೇಕು ಎಂದು ಒಂದು ಫಾರ್ಮ್ ಕೈಗಿತ್ತು ‘ಆಧಾರ್, ಪ್ಯಾನ್, ಫೋಟೊ ಎಲ್ಲ ತನ್ನಿ’ ಎಂದರು. ‘ನಾನು ಮಾಜಿ ಸಿಬ್ಬಂದಿ, ನನ್ನ ಮಾಹಿತಿ (ನೊ ಯುವರ್ ಕಸ್ಟಮರ್–ಕೆವೈಸಿ ಅಂದರೆ ಅದೇ ತಾನೆ) ನಿಮ್ಮಲ್ಲಿ ಇದೆಯಲ್ಲ’ ಎಂದು ಹೇಳಿದರೂ ಒಪ್ಪಲಿಲ್ಲ. ಆ ದಾಖಲೆಗಳನ್ನು ಕೊಟ್ಟು, ಫಾಲೊಅಪ್ ಫೋನ್ ಮಾಡಿದ ಕೆಲವು ದಿನಗಳ ನಂತರವೇ ಖಾತೆ ನಾರ್ಮಲ್ ಆಗಿದ್ದು. ಖಾಸಗಿ ಬ್ಯಾಂಕ್ ಒಂದರಲ್ಲಿ ಇನ್ನೂ ಕಷ್ಟವಾಯಿತು. ಎಡಗೈ ಹೆಬ್ಬೆಟ್ಟು, ಹಲವು ಫಾರ್ಮ್‌ಗಳಲ್ಲಿ ಸಹಿ ಹಾಕಿಕೊಡಬೇಕಾಯಿತು. ಪ್ರಕ್ರಿಯೆ ಅದೇ ದಿನವಂತೂ ಮುಗಿಯಲಿಲ್ಲ.

ಪ್ರಸ್ತುತ ಬ್ಯಾಂಕ್‌ಗಳು ಸಾಲ ಹೆಚ್ಚು ಕೊಟ್ಟು, ಠೇವಣಿ ಸಂಗ್ರಹದತ್ತ ಗಮನ ನೀಡಬೇಕೆಂದು ರಿಸರ್ವ್ ಬ್ಯಾಂಕ್ ಸೂಚನೆ ನೀಡಿದೆ. ಇ– ಕೆವೈಸಿಯನ್ನು ಕೂಡ ಅದರ ನಿರ್ದೇಶನದ ಅನುಸಾರವಾಗಿಯೇ ಮಾಡಲಾಗುತ್ತಿದೆ. ಕೆಲವು ಬ್ಯಾಂಕ್‌ಗಳು ಆಧಾರ್ ಅನುಷ್ಠಾನದಂತೆ ಇದನ್ನೂ ಕೆಟ್ಟದಾಗಿ ನಿರ್ವಹಿಸುತ್ತಿವೆ. ಖಾತೆಯನ್ನು ಬ್ಲಾಕ್ ಮಾಡುವುದು ಅನಗತ್ಯ, ಅಸಮರ್ಥನೀಯ. ಇದರಿಂದ ಗ್ರಾಹಕನಿಗೆ ತೊಂದರೆಯಾಗುತ್ತಿದೆ. ಬ್ಯಾಂಕಿಂಗ್ ಓಂಬುಡ್ಸ್‌ಮನ್ ದೂರುಗಳಿಗಾಗಿ ಕಾಯದೆ ಬ್ಯಾಂಕ್‌ಗಳಿಗೆ ಸೂಕ್ತ ಮಾರ್ಗದರ್ಶನ, ನಿರ್ದೇಶನ ನೀಡಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ನಮ್ಮಲ್ಲೂ ನಡೆಯಲಿ ‘ಗೆಂಬಾ ನಡಿಗೆ’

ದಿನವೊಂದಕ್ಕೆ ಬರೀ 10 ಸೆಂ.ಮೀ. ಒಳಗಿನ ಮಳೆಯ ಕಾರಣಕ್ಕೇ ಬೆಂಗಳೂರು ನಗರದಲ್ಲಿ ಪ್ರವಾಹ ಸ್ಥಿತಿ ಉಂಟಾಗುತ್ತಿರುವುದು ಶೋಚನೀಯ. ಎಂದಿನಂತೆ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಬಿಬಿಎಂಪಿ ಅಧಿಕಾರಿಗಳು, ಜನಪ್ರತಿನಿಧಿಗಳು ಭೇಟಿ ನೀಡಿ ಪರಿಶೀಲನೆ ನಡೆಸುವುದು, ಎಲ್ಲವನ್ನೂ ಸರಿಪಡಿಸುವುದಾಗಿ ಭರವಸೆ ನೀಡುವಂತಹ ಪ್ರಹಸನ ನಡೆಯುತ್ತಿದೆ. ಸಮಸ್ಯೆಗಳ ವಸ್ತುಸ್ಥಿತಿ ಅರಿಯಬೇಕಾದರೆ ಮಳೆಗಾಲಕ್ಕೆ ಮುಂಚಿತವಾಗಿಯೇ ಅಧಿಕಾರಿಗಳು, ಜನಪ್ರತಿನಿಧಿಗಳು ಕಾಲ್ನಡಿಗೆಯಲ್ಲಿ ಓಡಾಡಬೇಕು. ಜಪಾನಿ ಭಾಷೆಯಲ್ಲಿ ಗೆಂಬುಟ್ಸು ಎಂದರೆ ‘ನೈಜ ಸಂಗತಿ’ ಎಂದು ಅರ್ಥ. ಈ ಪದದಿಂದ ಬಂದಿರುವ ‘ಗೆಂಬಾ ನಡಿಗೆ’ ಎಂಬುದು ಕಾರ್ಖಾನೆಗಳ ಮುಖ್ಯಸ್ಥರು ಎಲ್ಲಾ ವಿಭಾಗಗಳಲ್ಲಿ ಕಾಲ್ನಡಿಗೆಯಲ್ಲಿ ಓಡಾಡಿ ಸಮಸ್ಯೆಗಳನ್ನು ಖುದ್ದು ತಿಳಿಯುವ ಬಹು ಉಪಯುಕ್ತ ಪದ್ಧತಿ. ಈ ಪದ್ಧತಿಯನ್ನು ನಮ್ಮ ಬಿಬಿಎಂಪಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ವಾರಕ್ಕೊಮ್ಮೆ ಅಥವಾ ತಿಂಗಳಲ್ಲಿ ಎರಡು ದಿನ ಅಳವಡಿಸಿಕೊಳ್ಳಬೇಕು. ಆಗ ಜನ ಹೇಗೆ ಜೀವವನ್ನು ಕೈಯಲ್ಲಿ ಹಿಡಿದು ರಸ್ತೆ ದಾಟಲು ಕಷ್ಟಪಡುತ್ತಾರೆ, ಪಾದಚಾರಿ ಅಂಡರ್‌ಪಾಸ್‌ಗಳು ಎಷ್ಟು ದುರ್ನಾತ ಬೀರುತ್ತಿವೆ, ಯಾವ ರಸ್ತೆಬದಿಯಲ್ಲಿ ಕಸದ ರಾಶಿ ಇದೆ, ಯಾವ್ಯಾವ ಚರಂಡಿಗಳಲ್ಲಿ ನೀರು ಹರಿಯಲು ಸಾಧ್ಯವಾಗದಷ್ಟು ಕಸಕಡ್ಡಿ ತುಂಬಿಹೋಗಿದೆ, ಎಷ್ಟು ಕಂಬಗಳಲ್ಲಿ ಬೀದಿದೀಪಗಳು ಕಾಣೆಯಾಗಿವೆ ಎಂಬಂತಹ ಎಲ್ಲ ಸಮಸ್ಯೆಗಳನ್ನು ಖುದ್ದು ಅರಿಯಬಹುದು. ಈ ಸಮಸ್ಯೆಗಳನ್ನು ತಕ್ಕಮಟ್ಟಿಗಾದರೂ ಪರಿಹರಿಸಿದರೆ, ಮಳೆಯಿಂದ ಉಂಟಾಗುವ ಹಾನಿಯ ತೀವ್ರತೆಯನ್ನು ಖಂಡಿತ ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು.

ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಬಾರ್ಡ್ ಸಮೀಕ್ಷಾ ವರದಿ: ಸಾಲ ಪಡೆದ ಗ್ರಾಮೀಣ ಕೃಷಿ, ಕೃಷಿಯೇತರ ಕುಟುಂಬಗಳ ಸಂಖ್ಯೆ ಹೆಚ್ಚಳ

ಕುಗ್ಗಿದ ಕೃಷಿ ಭೂಮಿ ಹೆಚ್ಚಿದ ಆದಾಯ, ವೆಚ್ಚ

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಅಖಿಲ ಭಾರತ ಗ್ರಾಮೀಣ ಆರ್ಥಿಕ ಒಳಗೊಳ್ಳುವಿಕೆ ಸಮೀಕ್ಷೆ 2021–22 (ಎನ್‌ಎಎಫ್‌ಐಎಸ್) ಬಿಡುಗಡೆಯಾಗಿದೆ. ಇದು ಕೃಷಿ ವಲಯ ಮತ್ತು ಗ್ರಾಮೀಣ ಬದುಕಿನಲ್ಲಿ ಆಗಿರುವ ಬದಲಾವಣೆಗಳ ಕಡೆಗೆ ಗಮನ ಸೆಳೆಯುತ್ತಿದೆ. ಗ್ರಾಮೀಣ ಭಾರತದಲ್ಲಿ ಕೃಷಿ ಜಮೀನಿನ ವಿಸ್ತೀರ್ಣ ಕಡಿಮೆ ಆಗಿದ್ದರೆ, ರೈತರ ಆದಾಯ ಹೆಚ್ಚಾಗಿದೆ. ವೆಚ್ಚವೂ ಜಾಸ್ತಿಯಾಗಿದೆ. ಸಾಲ ಮಾಡುತ್ತಿರುವವರ ಸಂಖ್ಯೆಯೂ ಏರಿಕೆಯಾಗಿದೆ

ದೇಶದ ಗ್ರಾಮೀಣ ಭಾಗದ ಜನರ ಜೀವನೋಪಾಯ ಮತ್ತು ಒಳಗೊಳ್ಳುವಿಕೆಯನ್ನು ಅರಿಯುವ ಸಲುವಾಗಿ 'ನಬಾರ್ಡ್' ಎರಡನೆಯ ಬಾರಿಗೆ ಗ್ರಾಮೀಣ ಆರ್ಥಿಕ ಒಳಗೊಳ್ಳುವಿಕೆ ಸಮೀಕ್ಷೆ 2021–22 (ಎನ್‌ಎಎಫ್‌ಐಎಸ್) ನಡೆಸಿದೆ (ಮೊದಲ ಸಮೀಕ್ಷೆ ನಡೆದದ್ದು 2016–17ರಲ್ಲಿ). ಜನರ ಜೀವನ ಮಟ್ಟದಲ್ಲಿ ಐದು ವರ್ಷಗಳಲ್ಲಿ ಆಗಿರುವ ಬದಲಾವಣೆಯನ್ನು ವರದಿ ತಿಳಿಸುತ್ತದೆ. ಗ್ರಾಮೀಣ ಭಾಗದ ಬಡವರು ಮತ್ತು ದುರ್ಬಲ ವರ್ಗದವರು ಆರ್ಥಿಕ ಉತ್ಪನ್ನ ಮತ್ತು ಸೇವೆಗಳನ್ನು ಬಳಸುವುದನ್ನು ಅವರ ಬೆಳವಣಿಗೆಯ ಮುಖ್ಯ ಅಂಶ ಎಂದು ಪರಿಗಣಿಸಲಾಗಿದೆ. ಸಮೀಕ್ಷೆಯು ಗ್ರಾಮೀಣ ಭಾಗದ ರೈತರ ಮತ್ತು ಕೃಷಿಯೇತರ ಜನರ ಉಳಿತಾಯ, ಸಾಲ, ವಿಮೆ, ಪಿಂಚಣಿ ಮತ್ತು ಹಣಕಾಸು ಸಾಕ್ಷರತೆಯ ಬಗ್ಗೆ ಬೆಳಕು ಚೆಲ್ಲುತ್ತದೆ. ಜನರ ಹಣಕಾಸು ಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ವರ್ತನೆಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಎನ್‌ಎಎಫ್‌ಐಎಸ್ 16–17ಕ್ಕಿಂತ ಎನ್‌ಎಎಫ್‌ಐಎಸ್ 2021–22ರಲ್ಲಿ ದೇಶದ ಹೆಚ್ಚು ಜಿಲ್ಲೆ ಮತ್ತು ಕುಟುಂಬಗಳನ್ನು ಸಮೀಕ್ಷೆ ಮಾಡಲಾಗಿದ್ದು, 28 ರಾಜ್ಯ ಮತ್ತು ಎರಡು ಕೇಂದ್ರಾಡಳಿತ ಪ್ರದೇಶ, 710 ಜಿಲ್ಲೆ, 10,000 ಹಳ್ಳಿಗಳ ಒಂದು ಲಕ್ಷ ಕುಟುಂಬಗಳು, 4,39,492 ಜನರನ್ನು ಸಮೀಕ್ಷೆ ನಡೆಸಲಾಗಿದೆ. ಇದು ಕೋವಿಡ್ ನಂತರದ ಸಮೀಕ್ಷೆಯಾಗಿರುವುದರಿಂದ ಸಹಜವಾಗಿಯೇ ಸಾಂಕ್ರಾಮಿಕದ ಪರಿಣಾಮಗಳು ಈ ಸಮೀಕ್ಷೆಯಲ್ಲಿ ವ್ಯಕ್ತವಾಗಿವೆ. ಸಮೀಕ್ಷೆ ಮಾಡಲಾದ ಕುಟುಂಬಗಳ ಪೈಕಿ ಶೇ 56.7 ಕೃಷಿ ಕುಟುಂಬಗಳಾಗಿದ್ದರೆ, ಶೇ 43.3 ಕೃಷಿಯೇತರ ಕುಟುಂಬಗಳಾಗಿವೆ.

ಇಳಿದ ಕೃಷಿ ಭೂಮಿ ವಿಸ್ತೀರ್ಣ

ರೈತ ಕುಟುಂಬಗಳು ಹೊಂದಿರುವ ಕೃಷಿ ಭೂಮಿಯ ವಿಸ್ತೀರ್ಣ ಕಡಿಮೆಯಾಗುತ್ತಿದೆ ಎಂದು ಸಮೀಕ್ಷೆ ಹೇಳಿದೆ. 2016–17ರಲ್ಲಿ ರೈತರು ಕೃಷಿ ಉದ್ದೇಶಕ್ಕಾಗಿ ಹೊಂದಿದ್ದ ಜಮೀನಿನ ಸರಾಸರಿ ವಿಸ್ತೀರ್ಣ 2.67 ಎಕರೆ. 2021–22ರಲ್ಲಿ 1.83 ಎಕರೆಗೆ ಇಳಿದಿದೆ. ಕೃಷಿ ಭೂಮಿಯ ವ್ಯಾಪ್ತಿ ಮೂರನೇ ಒಂದರಷ್ಟು ಇಳಿಕೆಯಾಗಿದೆ.

ಕರ್ನಾಟಕದಲ್ಲಿ 2016–17ರಲ್ಲಿ ರೈತರು ಹೊಂದಿದ್ದ ಕೃಷಿ ಜಮೀನಿನ ಸರಾಸರಿ ವಿಸ್ತೀರ್ಣ 2.47 ಎಕರೆ ಆಗಿದ್ದರೆ, 2021–22ರಲ್ಲಿ ಅದು 1.83 ಎಕರೆಗೆ ಕುಸಿದಿದೆ.

ಕೃಷಿ ಕುಟುಂಬಗಳು ಹೊಂದಿರುವ ಸರಾಸರಿ ಜಮೀನಿನ ಪ್ರಮಾಣ

(ಸ್ವಂತ ಮತ್ತು ಗುತ್ತಿಗೆ ಪಡೆದ ಜಮೀನು ಸೇರಿ)



ರೈತರಲ್ಲಿ ಶೇ 9.1ರಷ್ಟು ಮಂದಿ ಟ್ರ್ಯಾಕ್ಟರ್‌ಗಳನ್ನು ಹೊಂದಿದ್ದರೆ, ಶೇ 6.9ರಷ್ಟು ಮಂದಿ ಕಿರು ನೀರಾವರಿ ಸಾಧನ ಹೊಂದಿದ್ದಾರೆ. ಹನಿ ನೀರಾವರಿ ವ್ಯವಸ್ಥೆ ಹೊಂದಿರುವವರ ಸಂಖ್ಯೆ ಶೇ 3.9. ಪವರ್ ಟಿಲ್ಲರ್ ಹೊಂದಿರುವವರ ಸಂಖ್ಯೆ ಶೇ 2.3. ಶೇ 61.3ರಷ್ಟು ರೈತರ ಬಳಿ ಹಾಲು ನೀಡುವ ಹಸುಗಳು ಇದ್ದರೆ, ಶೇ 21.9ರಷ್ಟು ಮಂದಿಯ ಬಳಿ ಕುರಿ, ಮೇಕೆ ಇವೆ. ಶೇ 17.9 ಮಂದಿ ರೈತರು ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ. ಎತ್ತುಗಳನ್ನು ಹೊಂದಿರುವವರ ಸಂಖ್ಯೆ ಶೇ 5.4. ಶೇ 10ರಷ್ಟು ಮಂದಿ ಬೆಳೆ ವಿಮೆ ಮಾಡಿಸಿದ್ದರೆ, ಶೇ 2.1ರಷ್ಟು ಮಂದಿ ಜಾನುವಾರು ವಿಮೆ ಮಾಡಿಸಿದ್ದಾರೆ.

ಆದಾಯ, ತಿಂಗಳ ಖರ್ಚು ಏರಿಕೆ

ಐದು ವರ್ಷಗಳಲ್ಲಿ ಕೃಷಿ ಮತ್ತು ಕೃಷಿಯೇತರ ಕುಟುಂಬಗಳ ಆದಾಯ, ಉಳಿತಾಯ ಹೆಚ್ಚಾಗಿದೆ. ಜೊತೆಗೆ ವೆಚ್ಚವೂ ಜಾಸ್ತಿಯಾಗಿದೆ. ಆಹಾರವನ್ನು ಬಿಟ್ಟು ಇತರ ವಸ್ತುಗಳಿಗೆ ಜನರು ಹೆಚ್ಚು ವೆಚ್ಚ ಮಾಡುತ್ತಿರುವುದು ಸಮೀಕ್ಷೆಯಿಂದ ತಿಳಿದು ಬಂದಿದೆ.

2016–17ರಲ್ಲಿ ಪ್ರತಿ ಕುಟುಂಬದ ಸರಾಸರಿ ಆದಾಯ ₹8,059 ಇತ್ತು. 2021–22ರಲ್ಲಿ ಅದು ₹12,698ಕ್ಕೆ ಏರಿದೆ (ಶೇ 57.56). ಕುಟುಂಬಗಳ ಆದಾಯದಲ್ಲಿ ಕೃಷಿ ಮಾತ್ರವಲ್ಲದೇ ಉದ್ಯೋಗ, ವ್ಯಾಪಾರ, ಸ್ವ ಉದ್ಯೋಗ ಇನ್ನಿತರ ಮೂಲಗಳ ಆದಾಯವೂ ಸೇರಿದೆ.

ಕರ್ನಾಟಕದಲ್ಲಿ: ರಾಜ್ಯದಲ್ಲೂ ಕುಟುಂಬಗಳ ತಿಂಗಳ ಆದಾಯದಲ್ಲಿ ಹೆಚ್ಚಳ ಕಂಡು ಬಂದಿದೆ. 2021–22ರಲ್ಲಿ ತಿಂಗಳ ಸರಾಸರಿ ಆದಾಯ ₹8,383 ಇತ್ತು. 2021–22ರಲ್ಲಿ ₹13,487ಕ್ಕೆ ಹೆಚ್ಚಾಗಿದೆ. ಕೃಷಿ ಕುಟುಂಬದ ತಿಂಗಳ ಆದಾಯ 2016–17ರಲ್ಲಿ ₹10,603 ಇದ್ದುದು, 2022–23ರಲ್ಲಿ ₹16,635ಕ್ಕೆ ಏರಿಕೆಯಾಗಿದೆ.



ಪ್ರತಿ ಕುಟುಂಬದ ತಿಂಗಳ ಸರಾಸರಿ ವೆಚ್ಚ ₹6,642ರಿಂದ ₹11,262ಕ್ಕೆ (ಶೇ 69.46) ಏರಿಕೆಯಾಗಿದೆ. ವಾರ್ಷಿಕ ಉಳಿತಾಯದಲ್ಲೂ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಳವಾಗಿದೆ. 2016–17ರಲ್ಲಿ ಪ್ರತಿ ಕುಟುಂಬದ ಸರಾಸರಿ ವಾರ್ಷಿಕ ಉಳಿತಾಯ ₹8,603 ಇದ್ದರೆ, 2021–22ರಲ್ಲಿ ₹20,139ಕ್ಕೆ ಏರಿದೆ

ರಾಜ್ಯವಾರು ಪ್ರತಿ ಕುಟುಂಬದ ಮಾಸಿಕ ಸರಾಸರಿ ಆದಾಯ (2021–22)



ಸಮೀಕ್ಷೆಯಲ್ಲಿ ಕಂಡಿದ್ದು...

- ಶೇ 28.4ರಷ್ಟು ಕುಟುಂಬಗಳು, ಸ್ವ ಸಹಾಯ ಸಂಘಗಳು ಸೇರಿದಂತೆ ಸಮುದಾಯ ಆಧಾರಿತ ಸಂಘ ಸಂಸ್ಥೆಗಳೊಂದಿಗೆ ತೊಡಗಿಕೊಂಡಿವೆ
- ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಶೇ 11.1ರಷ್ಟು ಪುರುಷರು ಶೇ 9.2ರಷ್ಟು ಮಹಿಳೆಯರು ಆರ್ಥಿಕ ಸಾಕ್ಷರತೆ ಹೊಂದಿದ್ದಾರೆ
- ಸಮೀಕ್ಷೆ ನಡೆಸುವುದಕ್ಕೂ ಮೊದಲಿನ ಮೂರು ತಿಂಗಳಲ್ಲಿ ಶೇ 22.4ರಷ್ಟು ಮಂದಿ ಯಾವುದಾದರೊಂದು ಬ್ಯಾಂಕಿಂಗ್ ಸೇವೆ ಬಳಸಿದ್ದಾರೆ. ಶೇ 21.5ರಷ್ಟು ಜನ ಎಟಿಎಂ ಸೌಲಭ್ಯ ಪಡೆದಿದ್ದಾರೆ. ಶೇ 3.1ರಷ್ಟು ಜನ ಮೊಬೈಲ್ ಬ್ಯಾಂಕ್ ಮತ್ತು ಶೇ 2.3ರಷ್ಟು ಮಂದಿ ಇಂಟರ್ನೆಟ್ ಬ್ಯಾಂಕಿಂಗ್ ಸೇವೆ ಬಳಸಿದ್ದಾರೆ
- ಶೇ 44ರಷ್ಟು ರೈತ ಕುಟುಂಬಗಳು ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿವೆ. 2016–17ರಲ್ಲಿ ಶೇ 10.5ರಷ್ಟು ಕುಟುಂಬಗಳು ಮಾತ್ರ ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿದ್ದವು
- ಶೇ 23ರಷ್ಟು ಗ್ರಾಮೀಣ ಕುಟುಂಬಗಳು ಪಿಂಚಣಿ ಸೌಲಭ್ಯ

ಪ್ರತಿ ಕುಟುಂಬದ ಮೇಲಿರುವ ಸಾಲದ ಹೊರೆ



ಸಾಲಗಾರರ ಸಂಖ್ಯೆ ಹೆಚ್ಚಳ

ಒಟ್ಟಾರೆ ಸಾಲದ ಮೊತ್ತ ಕಡಿಮೆಯಾಗಿದ್ದರೂ ಸಾಲಗಾರರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. 2016–17ರಲ್ಲಿ ಪ್ರತಿ ನೂರು ಕುಟುಂಬಗಳ ಪೈಕಿ 47 ಮಂದಿ ಸಾಲಗಾರರಾಗಿದ್ದರೆ, 2021–22ರಲ್ಲಿ ನೂರಕ್ಕೆ 52.2 ಮಂದಿ ಸಾಲಗಾರರಾಗಿದ್ದಾರೆ. 2016–17ಕ್ಕೆ ಹೋಲಿಸಿದರೆ 2021–22ರಲ್ಲಿ ಕೃಷಿ ಕುಟುಂಬಗಳಲ್ಲಿ ಸಾಲದ ಹೊರೆ ಕಡಿಮೆ ಆಗಿದ್ದರೆ, ಕೃಷಿಯೇತರ ಕುಟುಂಬಗಳಲ್ಲಿ ಸಾಲದ ಹೊರೆ ಹೆಚ್ಚಾಗಿದೆ. 2016–17ರಲ್ಲಿ ಕೃಷಿ ಮತ್ತು ಕೃಷಿಯೇತರ ಕುಟುಂಬಗಳು ಸಂಸ್ಥೆಯೇತರ ಮೂಲಗಳಿಂದ ಹೆಚ್ಚು ಸಾಲ ಮಾಡಿದ್ದರೆ, 2021–22ರಲ್ಲಿ ಸಾಂಸ್ಥಿಕ ಮೂಲಗಳಿಂದ ಹೆಚ್ಚು ಸಾಲ ಪಡೆದಿವೆ.

ಆಧಾರ: ನಬಾರ್ಡ್‌ನ ಅಖಿಲ ಭಾರತ ಗ್ರಾಮೀಣ ಆರ್ಥಿಕ ಒಳಗೊಳ್ಳುವಿಕೆ ಸಮೀಕ್ಷೆ–2021–22 ವರದಿ

ಸಿನಿ ಬಿಟ್ಸ್

'ದೇವರು ರುಜು ಮಾಡಿದನು' ಎನ್ನುತ್ತಿರುವ ಸುನಿ

ಕೀರ್ತಿ ಕೃಷ್ಣ

'ದೇವರು ರುಜು ಮಾಡಿದನು' ಎಂಬ ಕುವೆಂಪು ಅವರ ಕವಿತೆಯ ಸಾಲನ್ನೇ ಶೀರ್ಷಿಕೆಯಾಗಿಸಿಕೊಂಡಿರುವ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಲು ನಿರ್ದೇಶಕ ಸಿಂಪಲ್ ಸುನಿ ಸಿದ್ಧರಾಗಿದ್ದಾರೆ. ಇತ್ತೀಚೆಗಷ್ಟೇ ಸಿನಿಮಾ ಸೆಟ್ಟೇರಿದ್ದು, ಚಿತ್ರದ ಪಾತ್ರಗಳನ್ನು ಪರಿಚಯಿಸುವ ಟೀಸರ್ ಬಿಡುಗಡೆಗೊಂಡಿದೆ.

'ಪ್ರಕೃತಿ ಮತ್ತು ಸಂಗೀತವನ್ನು ಕಥಾವಸ್ತುವನ್ನಾಗಿಟ್ಟುಕೊಂಡ ಚಿತ್ರವಿದು. ಹೀಗಾಗಿ ಕುವೆಂಪು ಅವರ ಕವಿತೆಯ ಸಾಲನ್ನೇ ಶೀರ್ಷಿಕೆಯಾಗಿಸಿಕೊಂಡಿದ್ದೇವೆ. ಕಥೆ ಕೂಡ ಅದೇ ರೀತಿ ಇರುತ್ತದೆ. ಇದೇ ತಿಂಗಳಿನಿಂದ ಚಿತ್ರೀಕರಣ ಶುರುವಾಗಲಿದೆ. ಕನ್ನಡ ಮತ್ತು ಕೊಂಕಣಿಗರಿಗೆ ಸಂಬಂಧಿಸಿದ ಕಥೆ ಇದಾಗಿದ್ದು, ಬಹುಭಾಗ ಚಿತ್ರೀಕರಣ ಗೋವಾದಲ್ಲಿ ನಡೆಯಲಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕ ಸಿಂಪಲ್ ಸುನಿ.

ಯುವನಟ ವಿರಾಜ್‌ಗೆ ಕೀರ್ತಿ ಕೃಷ್ಣ ಹಾಗೂ ದಿವಿತಾ ರೈ ಜೋಡಿಯಾಗಲಿದ್ದಾರೆ. ಸುನಿ ಅವರ ಹಿಂದಿನ ಚಿತ್ರ 'ಒಂದು ಸರಳ ಪ್ರೇಮಕಥೆ'ಯಂತೆಯೇ ಇಲ್ಲಿಯೂ ಸಂಗೀತದ ಜೊತೆಗೆ ಆ್ಯಕ್ಷನ್ ಇರುವ ತ್ರಿಕೋನ ಪ್ರೇಮಕಥೆ ಇರಬಹುದೆಂಬ ಸುಳಿವನ್ನು ಟೀಸರ್ ನೀಡುತ್ತಿದೆ. ನಾಯಕನ ಮೈತುಂಬ ಕಾಣುವ ರಕ್ತದ ಕಲೆಗಳು ಆ್ಯಕ್ಷನ್ ಸನ್ನಿವೇಶಗಳ ಸೂಚನೆ ನೀಡುತ್ತಿದೆ. ಗ್ರೀನ್ ಹೌಸ್ ಮೂವೀಸ್ ನಿರ್ಮಾಣದ ಚಿತ್ರಕ್ಕೆ ಜೆಜೆ ಸ್ಯಾಂಡಿ ಮತ್ತು ಜೂಡಾ ಸ್ಯಾಂಡಿ ಸಂಗೀತ, ಸಂತೋಷ್ ರೈ ಪತಾಜೆ ಛಾಯಾಚಿತ್ರಗ್ರಹಣವಿದೆ. ❖

ಯಾಕೆ ಎಂಬ ಹೊಸಬರ ಯತ್ನ

ಅಮಿತಾ ರಂಗನಾಥ್, ಉತ್ತಮ್

ಬಹುತೇಕ ಹೊಸಬರಿಂದಲೇ ಕೂಡಿರುವ 'ಯಾಕೆ' ಚಿತ್ರ ಮುಂದಿನ ತಿಂಗಳಲ್ಲಿ ಸೆಟ್ಟೇರಲಿದೆ. ನಟ ಶ್ರೀನಗರ ಕಿಟ್ಟಿ ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಅನಾವರಣಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಸೀತಾ ಹರ್ಷವರ್ಧನ್ ಬಂಡವಾಳ ಹೂಡಿದ್ದು, ಪ್ರೇಮ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಎರಡು ಭಾಷೆಗಳಲ್ಲಿ ಚಿತ್ರವು ನಿರ್ಮಾಣವಾಗುತ್ತಿದ್ದು, ಕನ್ನಡದಲ್ಲಿ 'ಯಾಕೆ', ತೆಲುಗಿನಲ್ಲಿ 'ಸಂಸ್ಥಾನಂ' ಎಂಬ ಶೀರ್ಷಿಕೆ ಇಡಲಾಗಿದೆ. ನಮ್ಮ ಪ್ರಯತ್ನಕ್ಕೆ ಅಮೆಜಾನ್ ಮತ್ತು ಹೈದರಾಬಾದಿನ ಖುಷಿ ಸಿನಿಮಾ ಸಂಸ್ಥೆ ಜೊತೆಗೂಡಿದೆ. ಕನ್ನಡದಲ್ಲಿ ನನ್ನ ಮೊದಲ ಚಿತ್ರ. ಮುಂದಿನ ತಿಂಗಳಿನಿಂದ ಚಿತ್ರೀಕರಣ ಆರಂಭಿಸುತ್ತಿದ್ದೇವೆ. ಎಲ್ಲರಿಗೂ ಇಷ್ಟವಾಗುವ ಕಥೆಯನ್ನು ಈ ಚಿತ್ರ ಒಳಗೊಂಡಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕ ಪ್ರೇಮ್.

ಉತ್ತಮ್ ಚಿತ್ರದ ನಾಯಕ. ಇವರಿಗೆ ಅಮಿತಾ ರಂಗನಾಥ್ ಜೊತೆಯಾಗಿದ್ದಾರೆ. ನಿರ್ಮಾಪಕಿ ಸೀತಾ ಹರ್ಷವರ್ಧನ್ ಮಾತನಾಡಿ, 'ನಾನು ಕನ್ನಡ, ತೆಲುಗಿನ ಹಲವು ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಮುಂದಿನ ವರ್ಷ ಏಪ್ರಿಲ್ ವೇಳೆಗೆ ಚಿತ್ರವನ್ನು ತೆರೆಗೆ ತರುವ ಉದ್ದೇಶವಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಒಳ್ಳೆಯ ಚಿತ್ರಗಳನ್ನು ನಿರ್ಮಿಸುವ ಗುರಿ ಇದೆ' ಎಂದರು. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 21, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಕೃಷ್ಣ ಪಂಚಮಿ ಗಂ. 26-30 ನಕ್ಷತ್ರ: ರೋಹಿಣಿ ಗಂ. 6-51 ನಂತರ ಮೃಗಶಿರ ಗಂ. 29-51 ಯೋಗ: ವರಿಯಾನ್ ಗಂ. 11-11 ಕರಣ: ಕೌಲವ ಗಂ. 15-18, ತುಲಾ ಮಾಸದ 04 ನೇ ದಿನ, ಮಳೆನಕ್ಷತ್ರ: ಚಿತ್ರ 4.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-26 ಸೂರ್ಯಾಸ್ತ: 06-04
ಮುಸ್ಲಿಂ ದಿನಾಂಕ: 17 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 8, 7

ಮೇಷ: ಅಸೂಯೆ ಪಡುವ ಸಹೋದ್ಯೋಗಿಗಳ ನಡುವೆ ಕೆಲಸ ನಿರ್ವಹಿಸಬೇಕಾಗುತ್ತದೆ. ಕೆಲಸವನ್ನು ಹುಡುಕುತ್ತಿರುವವರಿಗೆ ಉದ್ಯೋಗ ದೊರೆಯುವ ಸಾಧ್ಯತೆ. ಬಿಳಿಯ ಬಣ್ಣವು ಶುಭ ತರಲಿದೆ.

ವೃಷಭ: ಒಳ್ಳೆಯ ಮಿತ್ರರಿಂದ ಕಂಪನಿಯ ಮುಖ್ಯ ವ್ಯಕ್ತಿಯ ಪರಿಚಯ ಹಾಗೂ ಅಭಿವೃದ್ಧಿಯ ಮಾಹಿತಿ ನಿಮಗೆ ಈ ದಿನ ದೊರೆಯುತ್ತದೆ. ಕಠಿಣ ಪರಿಶ್ರಮದ ಮೂಲಕ ಸಹೋದ್ಯೋಗಿಗಳ ಮನವನ್ನು ಗೆಲ್ಲಲು ಪ್ರಯತ್ನಿಸಿ.

ಮಿಥುನ: ವ್ಯವಹಾರದಲ್ಲಿ ನಿಮ್ಮೊಡನೆ ಕೈ ಜೋಡಿಸಿದ್ದ ದಾಯಾದಿ ವರ್ಗದವರಿಂದ ಅಸೂಯೆಯ ಮಾತುಗಳಲ್ಲದೆ ತೊಂದರೆಗಳೂ ಆಗಬಹುದು. ಮಾತಾ-ಪಿತೃಗಳಿಂದ ಪ್ರೋತ್ಸಾಹ ದೊರೆಯುತ್ತದೆ.

ಕರ್ಕಾಟಕ: ಕೃಷಿಕರು, ವ್ಯಾಪಾರಸ್ಥರು, ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು. ಹೃದಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಬಾಧಿಸಬಹುದು ಜಾಗ್ರತರಾಗಿರಿ. ಗೃಹದಲ್ಲಿ ಶಾಂತಿಯನ್ನು ಕಾಪಾಡಿ.

ಸಿಂಹ: ಸಾಮಾಜಿಕ ಕಳಕಳಿಗಾಗಿ ಸಂಘ ಸಂಸ್ಥೆ ಸಮಾಜದ ಆಸ್ತಿ ಎಂದು ಪರಿಗಣಿಸಲಿದೆ. ವಿದೇಶ ಪ್ರವಾಸಕ್ಕೆ ಸಂಬಂಧಿಸಿದಂತೆ ಸಂತಸಕರ ಬೆಳವಣಿಗೆಗಳು ಕಂಡುಬರಲಿವೆ. ಕೀರ್ತಿ ಅರಸಿ ಬರುವುದು.

ಕನ್ಯಾ: ಗೆಳೆಯನೊಬ್ಬನ ಭೇಟಿಯಿಂದ ಬದುಕು ಮಹತ್ವದ ತಿರುವು ಪಡೆದುಕೊಳ್ಳಲಿದೆ. ಪ್ರೇಮಿಗಳ ಮನೋಕಾಮನೆಗಳು ಪೂರ್ಣಗೊಂಡಾವು. ವೈದ್ಯ ವೃತ್ತಿಯವರಿಗೆ ಹೊಸ ಅನುಭವದ ಜತೆಯಲ್ಲಿ ಲಾಭದ ದಿನ ಆಗಲಿದೆ.

ತುಲಾ: ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ಆತಂಕವಿಲ್ಲದೆ ಕೆಲಸ ಕಾರ್ಯಗಳು ಸಾಗುವುದು. ಆಫೀಸಿನ ಕೆಲಸಗಳೂ ಬೇಗನೇ ಮುಗಿಯುವುದು. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭ ಸಿಗಲಿದೆ.

ವೃಶ್ಚಿಕ: ಸ್ನೇಹಿತರೊಂದಿಗೆ ಆಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ. ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಬಗ್ಗೆ ಯೋಚಿಸಿ.

ಧನು: ವಿದೇಶಿ ಸಂಸ್ಥೆಯೊಂದಿಗೆ ವ್ಯವಹಾರಿಕ ಒಪ್ಪಂದ ಮಾಡಿಕೊಳ್ಳಲು ಈ ದಿನ ಸೂಕ್ತ. ಹಲವು ದಿನಗಳ ಬಳಿಕ ಹಣಕಾಸಿನ ಪರಿಸ್ಥಿತಿಗಳು ಸುಧಾರಿಸುವುದು. ಕಳ್ಳತನದ ಅಪವಾದ ಬರುವ ಸಾಧ್ಯತೆ ಇದೆ. ಜಾಗ್ರತರಾಗಿರಿ.

ಮಕರ: ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಮನಸ್ಥಿತಿಯನ್ನು ತಂದುಕೊಳ್ಳಿರಿ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಅದೇ ರೀತಿಯಾಗಿ ಅವಘಡ ಸಂಭವಿಸುವ ಸಾಧ್ಯತೆ ಇದೆ.

ಕುಂಭ: ಕೇವಲ ಕ್ಷಣಿಕ ಸುಖಗಳಿಗೆ ಗಮನ ನೀಡದೆ ಗಂಭೀರವಾಗಿ ಆಲೋಚಿಸಿ ತೀರ್ಮಾನ ತೆಗೆದುಕೊಳ್ಳಿ. ಮಹಿಳೆಯರಿಗೆ ಸ್ವತಂತ್ರ ಉದ್ಯಮದ ಹಾದಿ ಸುಗಮವಾಗುವುದು. ಕೆಲಸಗಾರರಲ್ಲಿ ಗಮನಹರಿಸಿ.

ಮೀನ: ಆರೋಗ್ಯ ಸದೃಢವಾಗಿ ಇರುವುದು. ವ್ಯವಹಾರಿಕವಾಗಿ ಮಾತನಾಡುವಾಗ ಯಾವುದೇ ದಾಕ್ಷಿಣ್ಯಗಳಿಗೆ ಒಳಗಾಗುವುದು ಸರಿಯಲ್ಲ. ವೃತ್ತಿಯಲ್ಲಿ ದಾಖಲೆ ತೋರಿಸಿ ಉತ್ತರಿಸುವ ನಿಮಗೆ ಜಯ ಪ್ರಾಪ್ತಿಯಾಗಲಿದೆ.

ನುಡಿ ಬೆಳಗು

ಬಂಡಿ ಜೊತೆ ಬಂದ ನಾಯಿ!

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

48

ಒಂದು ಗಡಿಗೆ ಇತ್ತು. ಅದನ್ನು ಒಬ್ಬ ಖರೀದಿ ಮಾಡಿದ. ಖರೀದಿ ಮಾಡೋದಕ್ಕಿಂತ ಮೊದಲು ಕುಂಬಾರ ಅದರ ಮಾಲೀಕ ಆಗಿದ್ದ. ಖರೀದಿ ಮಾಡಿದ ನಂತರ ಇವ ಮಾಲೀಕ ಆದ. ಗಡಿಗೆಗೆ ಗೊಂದಲ ಆತು. ಆಗ ಅವ ಮಾಲೀಕ, ಈಗ ಇವ ಮಾಲೀಕ ಅಂತಾನ. ನಿಜವಾದ ಮಾಲೀಕ ಯಾರು ಅಂತ. ಅವಾಗ ಭೂಮಿ ತಾಯಿ ಹೇಳಿತಂತೆ, 'ನಾನು ನಿಜವಾಗಿ ನಿನ್ನ ಮಾಲೀಕ. ನಾನೇ ಇಲ್ಲ ಅಂದರ ನಿನ್ನ ನಿರ್ಮಾಣ ಹ್ಯಾಗ್ ಆಗುತ್ತಿತ್ತು' ಎಂದು. ಸಾರ್ವತ್ರಿಕ ಸತ್ಯ ಯಾವುದು ಅಂದರ, ಯಾವುದೇ ಕಾರ್ಯ ಘಟಿಸಬೇಕಾದರೆ ಆ ಕಾರ್ಯದ ಹಿಂದ ಒಂದು ಕಾರಣ ಇರ್ಬೇಕು. ಕಾರಣ ಇಲ್ಲದೆ ಏನೂ ಆಗುವಲ್ಲು. ಮಣ್ಣಿಲ್ಲದೆ ಗಡಿಗೆ ಇಲ್ಲ. ಇದು ಕಾರ್ಯಕಾರಣ ಮೀಮಾಂಸೆ. ಅದಕ್ಕೆ ನಾವಿದ್ದೀವಿ, ಜಗತ್ತು ಇದೆ ಅಂದರ ಅದೆಲ್ಲಾ ಅವನ ಕೃಪೆ. ಇದು ನಿನ್ನ ಕೃಪೆ ಅಂತ ಬಾಗೋದು. ಎಲ್ಲ ನನ್ನಿಂದ ಅಂದುಕೊಂಡಿದ್ದರಿಂದ ನಮಗ ತಾಪ ಬಹಳ ಆಗೈತಿ.

ಹಳ್ಳಿಯಾಗ ರೈತರು ಬಂಡಿ ಹೊಡಕಂಡು ಬರ್ತಿರ್ತಾರ. ಎತ್ತುಗಳ ಜೊತೆಗೆ ನಾಯಿನೂ ಬರ್ತಾ ಇರ್ತೈತಿ. ಎತ್ತಿನ ಜೋಡಿನೇ ಓಡಿ ಓಡಿ ಮನೆಗೆ ಬರುತೈತಿ. ಆಗ ಮನೆಯಲ್ಲಿದ್ದ ಆಕಳು ನಾಯಿಗೆ, 'ಅಲ್ಲೋ ದೋಸ್ತ, ಯಾಕಷ್ಟು ತೇಕಾಕತ್ತೀಯಲ್ಲ' ಅಂತ ಕೇಳ್ತು. 'ಇದೇನು ಯಾಕಷ್ಟು ತೇಕಾಕತ್ತೀಯಲ್ಲ ಅಂತಾ ಕೇಳ್ತೀಯಲ್ಲ. ಹೊಲದಿಂದ ಬಂಡಿ ಹೊತ್ಕೊಂಡು ಬಂದೀನಿ ನಾನು' ಅಂತು ನಾಯಿ.

ಬಂಡಿ ಹೊತ್ಕಂಡು ಬಂದಿದ್ದು ಎತ್ತುಗಳು. ನಾಯಿ ಬಂಡಿ ಜೊತೆ ಓಡಿ ಬಂದಿತ್ತು ಅಷ್ಟೆ. ಆದರೆ ಓಡಿ ಬಂದಿದ್ದಕ್ಕೇ ಅದು ತಾನೇ ಬಂಡಿ ಹೊತ್ಕಂಡು ಬಂದೀನಿ ಅಂತ ತಿಳಕಂಡಿತ್ತು. ಹಾಂಗೇನೆ, ನಿಮಗೂ ಮನೆ ನಾನೇ ಹೊತ್ತೀನಿ ಅಂತ ಅನಸ್ತಿರತೈತಿ. ಮಠನ ನಾನೇ ಹೊತ್ತುಕೊಂಡೇನಿ ಅಂತ ನಾ ಅಂದುಕೊಂಡೇನಿ. ಆದರೆ ನಾವೆಲ್ಲ ಬಂಡಿ ಬುಡಕಿನ ನಾಯಿಗಳು ಅಷ್ಟೆ. ಹೊತ್ತವನೆ ಬ್ಯಾರೆ ಅದಾನೆ. ಮನುಷ್ಯ ಯಾತ್ರಿಕನಂತೆ ಬದುಕಬೇಕು. ಇಲ್ಲಿಗೆ ಬರುವಾಗ ಏನನ್ನೂ ತರಲಿಲ್ಲ. ಹೋಗುವಾಗ ಏನೂ ಒಯ್ಯುವುದಿಲ್ಲ. ಇರುವಾಗ ಚಂದ ಇರೋದು ಅಷ್ಟೆ.

ರವೀಂದ್ರನಾಥ ಟಾಗೋರರು 'ಭಗವಂತ, ನೀನು ಎಷ್ಟು ಕೃಪೆ ಮಾಡಿಯಪ್ಪ ನನ್ನ ಮ್ಯಾಲ, ಈ ಜಗತ್ತು ಇದೆಯಲ್ಲ ಇದು ನಿನ್ನ ದಿವ್ಯೋತ್ಸವ. ಈ ಜಾತ್ರೆ ನೋಡಲು ನನಗೆ ಆಹ್ವಾನ ಕೊಟ್ಟಿದ್ದೀಯ' ಎಂದು ಬರೀತಾರ. ನಮ್ಮ ಜಾತ್ರೆಯಲ್ಲಿ ಹಚ್ಚಿದ ದೀಪ ಆರತಾವ, ಆದರೆ ದೇವರ ಜಾತ್ರೆಯಲ್ಲಿ ಹಚ್ಚಿದ ದೀಪ ಆರೋದಿಲ್ಲ. ನಮ್ಮ ಜಾತ್ರೆಯಲ್ಲಿ ದಿನಕ್ಕೆ ಒಂದು ಲಕ್ಷ ಮಂದಿ ಊಟ ಮಾಡಿದರೆ ಅಷ್ಟಕ್ಕೆ ನಾವು ನಿತ್ಯ ದಾಸೋಹಿ ಅನ್ನೋತೀವಿ. ಆದರೆ ದೇವರ ಜಾತ್ರೆಯಲ್ಲಿ ಕೋಟಿ ಕೋಟಿ ಜೀವರಾಶಿಗಳಿಗೆ ಹೊಟ್ಟೆ ತುಂಬಾ ಊಟ ಹಾಕ್ತಾನ. ನಾವು ಅವನ ಜಾತ್ರೆ ನೋಡಲು ಬಂದವರು. ಹೀಗೆ ಬಂದವರು ಅತಿಥಿಗಳಾಗಿರಬೇಕು ಅಷ್ಟೆ. ನಾವು ಇಲ್ಲಿ ಕಾಯಂ ಇರೋಕೆ ಬಂದಿಲ್ಲ ಮತ್ತು ಏನನ್ನೂ ಒಯ್ಯಂಗಿಲ್ಲ.

ನೀವು ಹಂಪಿ ನೋಡಾಕ ಹೋಗಿರ್ತೀರಿ. ಹಂಪಿ ಚೊಲೋ ಐತಿ ಅಂತ ಅದನ್ನು ನನ್ನ ಹೆಸರಿಗೆ ಮಾಡು ಅಂದರೆ ಆಗತೈತೇನು. ಸುಮ್ಮನೆ ನೋಡಬೇಕು ಬರಬೇಕು ಅಷ್ಟೆ. ❖

ಪದಬಂಧ 5838

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಾಲು ಮೊಸರು ಮಾರುವವನು (4)
4.ಹಾರ ಹಿಡಿದವನಿಗೆ ಹೊಡೆತ! (3)
5.ಜಾಲಾಡುವಾಗ ಸುಳಿವು ಸಿಕ್ಕೀತೇ? (2)
6.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)
7. ಗರ್ಭದಲ್ಲಿರುವ ಶಿಶುವನ್ನು ಕೊಲ್ಲುವುದು (4)
9.ಪ್ರಗತಿಯಲ್ಲಿರುವ ನಕಲು! (2)
10.ಅರಿವಿಗೊಂದು ಪರ್ಯಾಯ ಪದ (2)
11.ನಮ್ಮ ಸುತ್ತಮುತ್ತಲಿನ ಪ್ರದೇಶ (4)
13.ಚರ್ಮದ ಊದುಚೀಲ (2)
14.ತಿನ್ನಲು ಬಳಸುವ ಮುಖದ ಅಂಗ ಉಲ್ಟಾ ಕಾಣುತ್ತಿದೆ (2)
15.ಮರದ ಹಾಳೆ (3)
16.ಕ್ಷೌರ ಅಥವಾ ಅನಗತ್ಯ ಖರ್ಚು ಎಂದರೂ ಸರಿ (4)

ಮೇಲಿಂದ ಕೆಳಕ್ಕೆ
1.ಸತಿಯೊಳಗಿನ ಅನುಕಂಪ! (5)
2.ಅತಿಯಾದ ಬಾಯಾರಿಕೆ (4)
3.ಆನೆ ನಡಿಗೆಯಿದು (5)
8.ಒಳ್ಳೆಯ ಸ್ವಭಾವವಿಲ್ಲಿ ಉಲ್ಟಾ ಆಗಿದೆ (3)
9.ಹೆರಿಗೆ ಮನೆಯಿದು (5)
10.ದಾಯಾದಿ ಜಗಳವಿದು (5)
12.ಈ ರೀತಿ ಸೋಡಿ ಸಿಕ್ಕಿದೆ! (4)



5837ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಜನೆ 4.ಕಂಕಣಬದ್ಧ
8.ಸೆಲೆ 10.ಲಲನೆ
11.ಗಮಕ 12.ತಿದಾಂವೇ
13.ಯಿನಾ 15.ಜಲಜನಕ
18.ಪಗಡಿ

ಮೇಲಿಂದ ಕೆಳಕ್ಕೆ:
1.ಭರವಸೆ 2.ನೆಪ
3.ಬಿಕಂ 5.ಕಪೋಲಕಲ್ಪಿತ
6.ಬದನೆಕಾಯಿ 7.ವ್ಯಾಸಾಂಗವೇತನ
9.ಲೆಕತಲಿಲ 14.ನಾಟುನುಡಿ
16.ಕರ್ತೃ 17.ದ್ವೀಪ

ಸುಡೊಕು 6223

	6	1		7		2	9	3
	8		5	2		1	6	
1		5					8	
4			2		5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6222 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಪ್ರತಿ ಕೆ.ಜಿಗೆ ₹4ರಿಂದ ₹6 ದರ ಏರಿಕೆ ಸಾಧ್ಯತೆ

ಕೇಂದ್ರದಿಂದ ಪೂರೈಕೆ ಕಡಿತ ಸಿಎನ್‌ಜಿ ದುಬಾರಿ?

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ದೇಶೀಯವಾಗಿ ಉತ್ಪಾದಿಸುವ ಸಾಂದ್ರೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ಪೂರೈಕೆಯನ್ನು ಶೇ 20ರಷ್ಟು ಕಡಿತಗೊಳಿಸಿದೆ. ಮತ್ತೊಂದೆಡೆ ಇಂಧನದ ಮೇಲಿನ ಅಬಕಾರಿ ಸುಂಕವನ್ನೂ ಇಳಿಕೆ ಮಾಡಿಲ್ಲ. ಹಾಗಾಗಿ, ವಾಹನಗಳಿಗೆ ಬಳಸುವ ಸಿಎನ್‌ಜಿ ದರವು ಕೆ.ಜಿಗೆ ₹4ರಿಂದ ₹6 ಹೆಚ್ಚಳವಾಗುವುದು ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ಆಟೊ, ಕಾರು ಸೇರಿ ವಿವಿಧ ವಾಹನಗಳಿಗೆ ಸಿಎನ್‌ಜಿ ಬಳಕೆ ಹೆಚ್ಚುತ್ತಿದೆ. ಹಾಗಾಗಿ, ಬಳಕೆದಾರರಿಗೆ ದರ ಏರಿಕೆಯ ಬಿಸಿ ತಟ್ಟಲಿದೆ.

ಅರಬ್ಬೀ ಸಮುದ್ರದಿಂದ ಬಂಗಾಳ ಕೊಲ್ಲಿಯವರೆಗೆ ಕಡಲ ತಳದಿಂದ ಕಚ್ಚಾ ನೈಸರ್ಗಿಕ ಅನಿಲವನ್ನು ಹೊರ ತೆಗೆಯಲಾಗುತ್ತದೆ. ಬಳಿಕ ಇದನ್ನು ಸಿಎನ್‌ಜಿ ಆಗಿ ಪರಿವರ್ತಿಸಿ ವಾಹನಗಳು ಮತ್ತು ಕೊಳವೆ ಮೂಲಕ ಅಡುಗೆ ಮನೆಗಳಿಗೆ ಅನಿಲ (ಪಿಎನ್‌ಜಿ) ಪೂರೈಸಲಾಗುತ್ತದೆ.

ಸಿಎನ್‌ಜಿ ಉತ್ಪಾದನೆ ಮೇಲೆ ಕೇಂದ್ರ ಸರ್ಕಾರವು ಸಂಪೂರ್ಣ ನಿಯಂತ್ರಣ ಹೊಂದಿದೆ. ನಗರ ಪ್ರದೇಶದ ಚಿಲ್ಲರೆ ಮಾರಾಟಗಾರರಿಗೆ ಸರ್ಕಾರವೇ ನೇರವಾಗಿ ಪೂರೈಸುತ್ತದೆ.

ಆದರೆ, ವಾರ್ಷಿಕವಾಗಿ ಅನಿಲದ ಉತ್ಪಾದನೆಯು ಶೇ 5ರಷ್ಟು ಕಡಿಮೆಯಾಗುತ್ತಿದೆ. ಈ ನೈಸರ್ಗಿಕ ಕುಸಿತದಿಂದಾಗಿ ನಗರ ಪ್ರದೇಶಕ್ಕೆ ಸರಬರಾಜು ಆಗುವ ಅನಿಲ ಪೂರೈಕೆಯನ್ನು ಸರ್ಕಾರವು ಕಡಿತಗೊಳಿಸಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರವು ಸಿಎನ್‌ಜಿ ಉತ್ಪಾದನೆಗಾಗಿ ಕಚ್ಚಾ ವಸ್ತುಗಳ ಪೂರೈಕೆಯನ್ನು ಕಡಿತಗೊಳಿಸಿದೆ. ಆದರೆ, ಕೊಳವೆ ಮೂಲಕ ಅಡುಗೆ ಮನೆಗಳಿಗೆ ಪೂರೈಸುವ ಅನಿಲದ ಸರಬರಾಜಿಗೆ ಯಾವುದೇ ಧಕ್ಕೆಯಾಗದಂತೆ ಕ್ರಮವಹಿಸಿದೆ ಎಂದು ತಿಳಿಸಿವೆ.

ಸರ್ಕಾರದ ಕ್ರಮದಿಂದ ಮಾರುಕಟ್ಟೆಯಲ್ಲಿ ಸಿಎನ್‌ಜಿ ಪೂರೈಕೆ ಕಡಿಮೆಯಾಗಲಿದೆ. ಈ ಕೊರತೆ ನೀಗಿಸಲು ನಗರ ಪ್ರದೇಶದ ಚಿಲ್ಲರೆ ಮಾರಾಟಗಾರರು ಸಿಎನ್‌ಜಿ ಆಮದಿಗೆ ಒತ್ತಾಯಿಸುತ್ತಿದ್ದಾರೆ. ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಖರೀದಿಗೂ ಮುಂದಾಗಿದ್ದಾರೆ. ಇದರಿಂದ ಸಿಎನ್‌ಜಿ ಬೆಲೆಯಲ್ಲಿ ಹೆಚ್ಚಳವಾಗಬಹುದು ಎಂದು ತಿಳಿಸಿವೆ.

'ಸದ್ಯ ಚಿಲ್ಲರೆ ಮಾರಾಟಗಾರರು ಸಿಎನ್‌ಜಿ ಬೆಲೆ ಏರಿಕೆಗೆ ಮುಂದಾಗುತ್ತಿಲ್ಲ. ಈ ಸಮಸ್ಯೆಗೆ ಪರಿಹಾರ ಹುಡುಕುವ ಸಂಬಂಧ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜೊತೆಗೆ ಚರ್ಚೆಯಲ್ಲಿ ತೊಡಗಿದ್ದಾರೆ' ಎಂದು ಹೇಳಿವೆ.

ಅಬಕಾರಿ ಸುಂಕ ಎಷ್ಟು?

ಪ್ರಸ್ತುತ ಕೇಂದ್ರ ಸರ್ಕಾರವು ಸಿಎನ್‌ಜಿ ಮೇಲೆ ಶೇ 14ರಷ್ಟು ಅಬಕಾರಿ ಸುಂಕ ವಿಧಿಸುತ್ತಿದೆ. ಇದರಿಂದ ಪ್ರತಿ ಕೆ.ಜಿಗೆ ₹14ರಿಂದ ₹15 ದರ ಹೆಚ್ಚಳವಾಗಿದೆ. ಒಂದು ವೇಳೆ ಸರ್ಕಾರವು ಸುಂಕ ಕಡಿತಗೊಳಿಸಿದರೆ ಚಿಲ್ಲರೆ ಮಾರಾಟಗಾರರು ಈ ಹಣವನ್ನು ಗ್ರಾಹಕರಿಗೆ ವರ್ಗಾಯಿಸಲಿದ್ದಾರೆ. ಇದರಿಂದ ಬಳಕೆದಾರರಿಗೆ ಅನುಕೂಲವಾಗಲಿದೆ ಎಂದು ಮೂಲಗಳು ಹೇಳಿವೆ.

'ಇಡೀ ದೇಶದಲ್ಲಿ ದೆಹಲಿ ಮತ್ತು ಮುಂಬೈ ಸಿಎನ್‌ಜಿ ಬಳಕೆಯ ಅತಿದೊಡ್ಡ ಮಾರುಕಟ್ಟೆಯಾಗಿವೆ. ಸದ್ಯ ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದೆ. ಶೀಘ್ರವೇ, ದೆಹಲಿ ವಿಧಾನಸಭೆಗೂ ಚುನಾವಣೆ ಘೋಷಣೆಯಾಗಲಿದೆ. ಹಾಗಾಗಿ, ಸದ್ಯ ದರ ಏರಿಕೆಯು ರಾಜಕೀಯ ವಿಷಯವೂ ಆಗಿದೆ ಎಂದು ತಿಳಿಸಿವೆ.

ಉಳಿತಾಯದ ಸರಳ ಸೂತ್ರಗಳು

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಬಹುತೇಕರು ಸಂಬಳ ಬಂದ ತಕ್ಷಣ ತಮ್ಮಿಷ್ಟದ ವಸ್ತುಗಳ ಖರೀದಿಗೆ ಮುಗಿಬೀಳುತ್ತಾರೆ. ದುಬಾರಿ ಮೊಬೈಲ್ ಖರೀದಿಸುವುದು, ಐಷಾರಾಮಿ ರೆಸ್ಟೋರೆಂಟ್‌ನಲ್ಲಿ ಊಟ ಮಾಡೋದು, ಬ್ರ್ಯಾಂಡ್ ಬಟ್ಟೆ ತೆಗೆದುಕೊಳ್ಳೋದು. ಹೀಗೆ ಕೊಳ್ಳುಬಾಕತನದ ಸರಣಿ ಮುಂದುವರಿಯುತ್ತದೆ.

ಕೊನೆಗೆ ತಿಂಗಳ ಅಂತ್ಯದಲ್ಲಿ ಸಣ್ಣಪುಟ್ಟ ಖರ್ಚುಗೂ ಕಾಸಿಲ್ಲದೆ ಸಾಲ ಮಾಡಿಕೊಂಡು ಮತ್ತೊಂದು ತಿಂಗಳ ಸಂಬಳವನ್ನು ಎದುರು ನೋಡುತ್ತಾರೆ. ಇದೇ ರೀತಿ ಸಂಬಳ - ಶಿಸ್ತುರಹಿತ ಖರೀದಿ ಮತ್ತು ತಿಂಗಳಾಂತ್ಯದ ವೇಳೆಗೆ ಸಾಲ ಮಾಡುವ ಚಕ್ರ ಅನೇಕರ ಬದುಕಲ್ಲಿ ಅನಿರ್ದಿಷ್ಟಾವಧಿವರೆಗೆ ಮುಂದುವರಿಯುತ್ತದೆ.

ವೇತನ ಕೈಗೆ ಸಿಕ್ಕ ತಕ್ಷಣ ಖರೀದಿಯ ಭರಾಟೆ ಶುರುವಾಗುವುದರಿಂದ ತಿಳಿದೋ, ತಿಳಿಯದೆಯೋ ಇಂತಹ ಕಡೆ ಉಳಿತಾಯಕ್ಕಿಂತ ಖರ್ಚುಗಳಿಗೆ ಹೆಚ್ಚು ಆದ್ಯತೆ ಕೊಟ್ಟಿರುತ್ತಾರೆ. ಬಂದ ಆದಾಯದಲ್ಲಿ ಮನಸೋ ಇಚ್ಛೆ ಖರ್ಚು ಮಾಡಿ ಏನಾದರು ಉಳಿದರಷ್ಟೇ ಉಳಿತಾಯ ಎನ್ನುವ ಧೋರಣೆ ಇರುತ್ತದೆ. ಆದಾಯ-ಖರ್ಚು = ಉಳಿತಾಯ (ಸಿಕ್ಕ ಸಂಬಳದಲ್ಲಿ ಖರ್ಚು ಮಾಡಿ ಉಳಿದದ್ದು ಉಳಿತಾಯ) ಎನ್ನುವ ಹಣಕಾಸು ನಿರ್ವಹಣೆ ಕ್ರಮ ನಿಮ್ಮದಾಗಿದ್ದರೆ ಈ ಕೂಡಲೇ ಎಚ್ಚೆತ್ತುಕೊಂಡು ಅದನ್ನು ಬದಲಿಸಿಕೊಳ್ಳುವ ಅಗತ್ಯವಿದೆ.

ಬಂದ ಆದಾಯದಲ್ಲಿ ಅಂದುಕೊಂಡಿರುವಷ್ಟು ಮೊತ್ತವನ್ನು ಕಡ್ಡಾಯವಾಗಿ ಉಳಿತಾಯ ಮಾಡಿ ನಂತರ ಖರ್ಚು ಮಾಡುತ್ತೇನೆ ಎನ್ನುವ ಮನಸ್ಥಿತಿ ಬೆಳೆಸಿಕೊಂಡರೆ ಬದುಕು ಬದಲಾಗುತ್ತದೆ.

ಉಳಿತಾಯಕ್ಕೆ ಸರಿಯಾದ ಸೂತ್ರ ಯಾವುದು?:

ಸೂತ್ರ-1: ಆದಾಯ-ಖರ್ಚು= ಉಳಿತಾಯ ಇದು ಸರಿಯಾದ ಉಳಿತಾಯದ ಕ್ರಮವಲ್ಲ.

ಸೂತ್ರ-2: ಆದಾಯ-ಉಳಿತಾಯ= ಖರ್ಚು ಇದು ಸರಿಯಾದ ಉಳಿತಾಯದ ಕ್ರಮ.

ನೂರೆಂಟು ನೆಪಗಳು: ಉಳಿತಾಯ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನುವವರಿಗೆ ಅನೇಕ ನೆಪಗಳಿರುತ್ತವೆ. ನೂರು, ಐನೂರು, ಸಾವಿರ ರೂಪಾಯಿ ಉಳಿಸಿ ಯಾರು ದೊಡ್ಡವರಾಗಿದ್ದಾರೆ? ಜಾಸ್ತಿ ದುಡ್ಡು ಸಿಕ್ಕಾಗ ಉಳಿಸಿದರೆ ಆಯ್ತು. ಹಣ ಸಾಕಾಗಲ್ಲ. ಮುಂದಿನ ತಿಂಗಳಿಂದ ಹೂಡಿಕೆ ಮಾಡುತ್ತೇನೆ. ಈ ಸಲ ಟ್ರಿಪ್‌ಗೆ ಹೋಗಬೇಕು. ಉಳಿಸೋಕೆ ದುಡ್ಡು ಸಾಕಾಗಲ್ಲ. ಹೀಗೆ ಕಾರಣಗಳನ್ನು ಕೊಡುತ್ತಾರೆ.

'ಇಂತಹ ಧೋರಣೆಯಿಂದ ಉಳಿತಾಯದ ಅಭ್ಯಾಸ ದೂರವಾಗುವ ಜೊತೆಗೆ ಸಂಪತ್ತು ಸೃಷ್ಟಿಸಿಕೊಳ್ಳುವ ಅವಕಾಶವೂ ಕೈತಪ್ಪುತ್ತದೆ. ಹೂಡಿಕೆ ಮಾಡುವ ಆರಂಭಿಕ ಹಂತದಲ್ಲಿ ದೊಡ್ಡ ಮೊತ್ತವೋ, ಸಣ್ಣ ಮೊತ್ತವೋ ಅನ್ನೋದಕ್ಕಿಂತ ಉಳಿತಾಯಕ್ಕೆ ಚಾಲನೆ ಸಿಗುವುದು ಮುಖ್ಯವಾಗುತ್ತದೆ. ವೃತ್ತಿಯಲ್ಲಿ ಮುಂದೆ ಸಾಗುತ್ತಿರುವವರತ್ತ ವೇತನವೂ ಹೆಚ್ಚಳವಾಗುತ್ತದೆ. ಅದಕ್ಕೆ ತಕ್ಕಂತೆ ಉಳಿತಾಯ, ಹೂಡಿಕೆಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬಹುದು.

ಎಲ್ಲಿ ಹೂಡಿಕೆ ಮಾಡಬೇಕು?: ಉಳಿತಾಯ ಮಾಡಿದ ದುಡ್ಡನ್ನು ಸಾಸಿವೆ ಡಬ್ಬಿಯಲ್ಲಿ ಇಟ್ಟರೆ ದುಡ್ಡು ಬೆಳೆಯುವುದಿಲ್ಲ. ಉಳಿಸಿದ ದುಡ್ಡನ್ನು ಹೂಡಿಕೆ ಮಾಡಿದಾಗ ಮಾತ್ರ ಅದು ನಿಮಗಾಗಿ ದುಡಿಯುತ್ತದೆ, ಬೆಳೆಯುತ್ತದೆ. ಬೆಲೆ ಏರಿಕೆಯನ್ನು ಮೀರಿ ಲಾಭ ಪಡೆಯಲು ದೀರ್ಘಾವಧಿಯಲ್ಲಿ ಷೇರು ಮಾರುಕಟ್ಟೆ ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಒಳ್ಳೆಯ ಆಯ್ಕೆ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಒಂದಷ್ಟು ಕಲಿಕೆ ಮತ್ತು ಪರಿಣತಿ ಬೇಕಾಗುತ್ತದೆ. ಆದರೆ, ಮ್ಯೂಚುವಲ್ ಫಂಡ್‌ಗಳಲ್ಲಿ ಫಂಡ್ ಮ್ಯಾನೇಜರ್ ನೆರವು ಸಿಗುವುದರಿಂದ ಹೂಡಿಕೆ ಕಷ್ಟ ಎನಿಸುವುದಿಲ್ಲ. ಮ್ಯೂಚುವಲ್ ಫಂಡ್‌ಗಳಲ್ಲಿ ₹100, ₹500 ಹೂಡಿಕೆಗೂ ಅವಕಾಶವಿದೆ. ಹಾಗಾಗಿ, ಉಳಿತಾಯಕ್ಕೆ ದೊಡ್ಡ ಮೊತ್ತಬೇಕೆಂದು ಸಮಯ ವ್ಯರ್ಥ ಮಾಡುತ್ತಾ ಕೂರುವುದು ಸರಿಯಲ್ಲ. ಮ್ಯೂಚುವಲ್ ಫಂಡ್ ಅರ್ಥವಾಗುವುದಿಲ್ಲ ಎನ್ನುವುದಾದರೆ ಎಲ್ಲ ಪ್ರಮುಖ ಬ್ಯಾಂಕ್‌ಗಳಲ್ಲೂ ಡೈರೆಕ್ಟ್ ಮ್ಯೂಚುವಲ್ ಫಂಡ್ ಹೂಡಿಕೆಗೆ ನೆರವಾಗುವ ಸಿಬ್ಬಂದಿ ಇರುತ್ತಾರೆ. ಅವರ ನೆರವು ಪಡೆಯಬಹುದು.

ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್ ಹೂಡಿಕೆ ಬೇಡ. ಸ್ವಲ್ಪವೂ ರಿಸ್ಕ್ ಇರಬಾರದು. ಬೆಲೆ ಏರಿಕೆಗೆ ಸರಿಸಮವಾಗಿ ಗಳಿಕೆ, ಲಾಭ ಸಿಗದಿದ್ದರೂ ಅಡ್ಡಿಯಿಲ್ಲ ಎನ್ನುವವರು ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ), ಕಿಸಾನ್ ವಿಕಾಸ್ ಪತ್ರ (ಕೆವಿಪಿ), ಹೆಣ್ಣು ಮಕ್ಕಳ ಹೆಸರಲ್ಲಿ ಹೂಡಿಕೆಗಾಗಿ ಸುಕನ್ಯಾ ಸಮೃದ್ಧಿ ಯೋಜನೆ, ಹಿರಿಯ ನಾಗರಿಕರಿಗಾಗಿ ಹಿರಿಯ ನಾಗರಿಕರ ಉಳಿತಾಯ ಯೋಜನೆ, ಫಿಕ್ಸೆಡ್ ಡೆಪಾಸಿಟ್, ಸಾವರಿನ್ ಗೋಲ್ಡ್ ಬಾಂಡ್, ಸರ್ಕಾರಿ ಬಾಂಡ್‌ನಂತಹ ಹೂಡಿಕೆಗಳನ್ನು ಪರಿಗಣಿಸಬಹುದು. ಒಟ್ಟಿನಲ್ಲಿ ನಿಮಗೆ ಸರಿ ಎನಿಸುವ ಯಾವುದಾದರೂ ಹಣಕಾಸು ಉತ್ಪನ್ನದ ಮೇಲೆ ಉಳಿತಾಯ ಹೂಡಿಕೆ ಶುರು ಮಾಡುವುದು ಅತ್ಯಗತ್ಯ. ಏಕೆಂದರೆ ಹಣ ಹಣ ಕೂಡಿದರಷ್ಟೇ ಝಣಝಣ ಕಾಂಚಾಣ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಇಳಿಕೆ ಕಂಡ ಸೂಚ್ಯಂಕಗಳು

ಷೇರುಪೇಟೆ

ಅಕ್ಟೋಬರ್ 18ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ. 81,224 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.19ರಷ್ಟು ಇಳಿಕೆ ಕಂಡಿದ್ದರೆ, 24,854 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.44ರಷ್ಟು ತಗ್ಗಿದೆ.

'ಇರಾನ್- ಇಸ್ರೇಲ್ ಬಿಕ್ಕಟ್ಟು, ಚೀನಾ ಆರ್ಥಿಕತೆಯ ನಿಧಾನಗತಿ ಬೆಳವಣಿಗೆ, ವಿದೇಶಿ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಆಟೊ ಶೇ 4.87, ಮಾಧ್ಯಮ ವಲಯ ಶೇ 2.11, ಲೋಹ ಶೇ 1.88, ಎಫ್‌ಎಂಸಿಜಿ ಶೇ 1.7, ಅನಿಲ ಮತ್ತು ತೈಲ ಶೇ 1.69, ಫಾರ್ಮಾ ಶೇ 1.02, ಎನರ್ಜಿ ಶೇ 0.85, ಮಾಹಿತಿ ತಂತ್ರಜ್ಞಾನ ಶೇ 0.41ರಷ್ಟು ಕುಸಿದಿವೆ. ನಿಫ್ಟಿ ಬ್ಯಾಂಕ್ ಶೇ 1.88, ಫೈನಾನ್ಸ್ ಶೇ 1.49, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.87 ಮತ್ತು ರಿಯಲ್ ಎಸ್ಟೇಟ್ ಶೇ 0.48ರಷ್ಟು ಗಳಿಸಿಕೊಂಡಿವೆ.

ಇಳಿಕೆ-ಗಳಿಕೆ: ನಿಫ್ಟಿಯಲ್ಲಿ ಬಜಾಜ್ ಆಟೊ ಶೇ 15.01, ನೆಸ್ಲೆ ಇಂಡಿಯಾ ಶೇ 6.52, ಟ್ರೆಂಟ್ ಶೇ 5.69, ಬಜಾಜ್ ಫೈನಾನ್ಸ್ ಶೇ 5.52, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 5.46, ಮಾರುತಿ ಸುಜುಕಿ ಶೇ 5.26, ಹೀರೊ ಮೋಟೊಕಾರ್ಪ್ ಶೇ 4.78, ಅದಾನಿ ಎಂಟರ್‌ಪ್ರೈಸಸ್ ಶೇ 4.33, ಟಾಟಾ ಸ್ಟೀಲ್ ಶೇ 3.36 ಮತ್ತು ಒಎನ್‌ಜಿಸಿ ಶೇ 3.20ರಷ್ಟು ಕುಸಿದಿವೆ.

ವಿಪ್ರೊ ಶೇ 3.73, ಐಸಿಐಸಿಐ ಬ್ಯಾಂಕ್ ಶೇ 3.3, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 2.75, ಎಲ್ ಆ್ಯಂಡ್ ಟಿ ಶೇ 2.68, ಟೆಕ್ ಮಹೀಂದ್ರ ಶೇ 2.57, ಎಸ್‌ಬಿಐ ಶೇ 2.49, ಡಾ.ರೆಡ್ಡೀಸ್ ಲ್ಯಾಬ್ ಶೇ 2.26, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 1.87, ಆಕ್ಸಿಸ್ ಬ್ಯಾಂಕ್ ಶೇ 1.79 ಮತ್ತು ಗ್ರಾಸಿಮ್ ಇಂಡಸ್ಟ್ರೀಸ್ ಶೇ 1.57ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಬಜಾಜ್ ಹೌಸಿಂಗ್ ಫೈನಾನ್ಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಿಟಿ ಯೂನಿಯನ್ ಬ್ಯಾಂಕ್, ಬಜಾಜ್ ಫೈನಾನ್ಸ್, ಜೊಮಾಟೊ, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್, ಅದಾನಿ ಎನರ್ಜಿ, ಪೇಟಿಎಂ, ಐಸಿಐಸಿಐ ಸೆಕ್ಯುರಿಟೀಸ್, ಹಿಂದುಸ್ತಾನ್ ಯೂನಿಲಿವರ್, ಬಜಾಜ್ ಫಿನ್‌ಸರ್ವ್, ಪಿಡಿಲೈಟ್ ಇಂಡಸ್ಟ್ರೀಸ್, ಟಿವಿಎಸ್ ಮೋಟರ್ ಕಂಪನಿ, ಕರ್ಣಾಟಕ ಬ್ಯಾಂಕ್, ಐಟಿಸಿ, ಕೋಲ್ ಇಂಡಿಯಾ, ಎಚ್‌ಪಿಸಿಎಲ್, ಐಸಿಐಸಿಐ ಬ್ಯಾಂಕ್, ಎಸ್‌ಬಿಐ ಲೈಫ್ ಇನ್ಶೂರೆನ್ಸ್, ಜೆ.ಕೆ. ಸಿಮೆಂಟ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಇಪಿಎಫ್‌ಒ: 18 ಲಕ್ಷ ಸದಸ್ಯರು ಸೇರ್ಪಡೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಆಗಸ್ಟ್‌ನಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) ಹೊಸದಾಗಿ 18.53 ಲಕ್ಷ ಸದಸ್ಯರು ಸೇರ್ಪಡೆಯಾಗಿದ್ದಾರೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸೇರ್ಪಡೆಯಾದವರ ಪ್ರಮಾಣದಲ್ಲಿ ಶೇ 9ರಷ್ಟು ಏರಿಕೆಯಾಗಿದೆ ಎಂದು ಇಪಿಎಫ್‌ಒ, ಭಾನುವಾರ ತಿಳಿಸಿದೆ.

ರಾಜ್ಯವಾರು ಪೈಕಿ ಸದಸ್ಯರ ಸೇರ್ಪಡೆಯಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದ್ದು, ಶೇ 20ರಷ್ಟು ಪಾಲನ್ನು ಹೊಂದಿದೆ. ಕರ್ನಾಟಕ, ತಮಿಳುನಾಡು, ಹರಿಯಾಣ, ದೆಹಲಿ, ಗುಜರಾತ್, ತೆಲಂಗಾಣ ಮತ್ತು ಉತ್ತರ ಪ್ರದೇಶದಲ್ಲಿಯೂ ಹೆಚ್ಚು ಸದಸ್ಯರು ಸೇರ್ಪಡೆಯಾಗಿದ್ದಾರೆ.

ಉದ್ಯೋಗಾವಕಾಶ ಹೆಚ್ಚಳ, ಉದ್ಯೋಗಿಗಳಲ್ಲಿ ಲಾಭದ ಬಗ್ಗೆ ಹೆಚ್ಚಿದ ಜಾಗೃತಿ ಮತ್ತು ಇಪಿಎಫ್‌ಒ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದಿಂದ ಸದಸ್ಯರ ಸಂಖ್ಯೆ ಏರಿಕೆಯಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಹೊಸ ಸದಸ್ಯರಲ್ಲಿ 18ರಿಂದ 25ರ ವಯೋಮಾನದವರ ಪ್ರಮಾಣ ಶೇ 59ರಷ್ಟಿದೆ. ಒಟ್ಟು 8.06 ಲಕ್ಷ ಸೇರ್ಪಡೆಯಾಗಿದ್ದಾರೆ. ಇವರಲ್ಲಿ ಬಹುತೇಕರು ಮೊದಲ ಬಾರಿಗೆ ಉದ್ಯೋಗಕ್ಕೆ ಸೇರಿದ್ದಾರೆ. ಹೊಸ ಸದಸ್ಯರ ಪೈಕಿ 2.53 ಲಕ್ಷ ಮಹಿಳೆಯರಿದ್ದಾರೆ.

ಮಿಡ್, ಸ್ಮಾಲ್ ಕ್ಯಾಪ್: ₹30,350 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ನಲ್ಲಿ ₹30,350 ಕೋಟಿ ಬಂಡವಾಳ ಹೂಡಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಈ ಫಂಡ್‌ಗಳಲ್ಲಿ ₹32,924 ಕೋಟಿ ಹೂಡಿಕೆಯಾಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಭಾನುವಾರ ತಿಳಿಸಿದೆ.

ಮಿಡ್ ಕ್ಯಾಪ್ ಫಂಡ್ ₹14,756 ಕೋಟಿ ಮತ್ತು ಸ್ಮಾಲ್ ಕ್ಯಾಪ್ ಫಂಡ್ ₹15,586 ಕೋಟಿಯನ್ನು ಆಕರ್ಷಿಸಿವೆ.

ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 20 ಮತ್ತು ಶೇ 24ರಷ್ಟು ಗಳಿಕೆ ನೀಡಿವೆ. ಈ ಎರಡು ಯೋಜನೆಯಡಿ ಹೂಡಿಕೆದಾರರ ಸಂಖ್ಯೆ 4 ಕೋಟಿಗೆ ಮುಟ್ಟಿದೆ.

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹180-455
ದ್ವಿತಳಿ (ಬಿ.ವಿ)	₹222-633

ಸಿಎಸ್‌ಆರ್ ಬಳಕೆಗೆ ಮಾರ್ಗಸೂಚಿ ಪರಿಷ್ಕರಣೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷಕ್ಕೆ ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳ (ಸಿಪಿಎಸ್‌ಇ) ಸಾಮಾಜಿಕ ಜವಾಬ್ದಾರಿ ನಿಧಿಯ (ಸಿಎಸ್‌ಆರ್) ಬಳಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ.

ಪಿಎಂ ಇಂಟರ್ನ್‌ಶಿಪ್ ಯೋಜನೆಗೂ ಸಿಎಸ್‌ಆರ್ ನಿಧಿ ಬಳಕೆಗೆ ಅವಕಾಶ ಕಲ್ಪಿಸಿದೆ. ಉದ್ದಿಮೆಗಳು ವಾರ್ಷಿಕವಾಗಿ ಶೇ 60ರಷ್ಟು ನಿಧಿಯನ್ನು ಈ ಯೋಜನೆಗೆ ವಿನಿಯೋಗಿಸಬಹುದಾಗಿದೆ. ಆರೋಗ್ಯ ಮತ್ತು ಪೋಷಣೆಗೂ ಈ ನಿಧಿ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2024–25ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು 1.25 ಲಕ್ಷ ಯುವಜನರಿಗೆ ಪಿಎಂ ಇಂಟರ್ನ್‌ಶಿಪ್ ಯೋಜನೆಯಡಿ ವಿವಿಧ ವೃತ್ತಿ ತರಬೇತಿ ನೀಡಲಿದೆ. ಅಕ್ಟೋಬರ್ 25ರ ವರೆಗೂ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಕ್ಟೋಬರ್ 26ರಂದು ಅರ್ಜಿಗಳನ್ನು ವಿವಿಧ ವಲಯವಾರು ವಿಂಗಡಿಸಲಾಗುತ್ತದೆ.

ಅಕ್ಟೋಬರ್ 27ರಿಂದ ನವೆಂಬರ್ 7ರ ವರೆಗೆ ಕಂಪನಿಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿವೆ. ಆಯ್ಕೆಯಾದವರು ನವೆಂಬರ್ 8ರಿಂದ 15ರ ವರೆಗೆ ತರಬೇತಿಯಲ್ಲಿ ಪಾಲ್ಗೊಳ್ಳಲು ಒಪ್ಪಿಗೆ ಸೂಚಿಸಬೇಕಿದೆ. ಡಿಸೆಂಬರ್‌ನಿಂದ ಪ್ರಾಯೋಗಿಕ ತರಬೇತಿ ಆರಂಭವಾಗಲಿದೆ.

ಅಸಂಘಟಿತ ಕಾರ್ಮಿಕರಿಗೆ ಒಂದೇ ಸೂರಿನಡಿ ಮಾಹಿತಿ ಲಭ್ಯ

ನವದೆಹಲಿ (ಪಿಟಿಐ): ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಅವರು ಸೋಮವಾರ 'ಇ-ಶ್ರಮ್- ಒನ್ ಸ್ಟಾಪ್ ಸಲ್ಯೂಷನ್‌'ಗೆ ಚಾಲನೆ ನೀಡಲಿದ್ದಾರೆ. ಇದರಡಿ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದೇ ಸೂರಿನಡಿ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸಮಗ್ರ ಮಾಹಿತಿ ದೊರೆಯಲಿದೆ.

ಬಜೆಟ್‌ನಲ್ಲಿ ಈ ಬಗ್ಗೆ ಸರ್ಕಾರವು ಪ್ರಕಟಿಸಿತ್ತು. ಯೋಜನೆಗಳ ಬಗ್ಗೆ ಕಾರ್ಮಿಕರಲ್ಲಿ ಅರಿವು ಮೂಡಿಸಲು ಇದನ್ನು ರೂಪಿಸಲಾಗಿದೆ. ಸರ್ಕಾರದ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳ ಬಗ್ಗೆ ಫಲಾನುಭವಿಗಳು ಮಾಹಿತಿ ಪಡೆಯಲು ಇದರಿಂದ ನೆರವಾಗಲಿದೆ.

ಈಗಾಗಲೇ ಇ-ಶ್ರಮ್ ಪೋರ್ಟಲ್‌ನಲ್ಲಿ ಕೇಂದ್ರ ಸಚಿವಾಲಯ, ಇಲಾಖೆಗಳ 12 ಯೋಜನೆಗಳನ್ನು ಸಂಯೋಜಿಸಲಾಗಿದೆ. 2021ರ ಆಗಸ್ಟ್ 26ರಂದು ಇ-ಶ್ರಮ್ ಪೋರ್ಟಲ್‌ಗೆ ಚಾಲನೆ ನೀಡಲಾಗಿದೆ. ಅಸಂಘಟಿತ ವಲಯದ 30 ಕೋಟಿಗೂ ಹೆಚ್ಚು ಕಾರ್ಮಿಕರು ಇದರಡಿ ನೋಂದಣಿ ಮಾಡಿಕೊಂಡಿದ್ದಾರೆ.

'ಚೀನಾ ವಿರೋಧಿ ಚಟುವಟಿಕೆಗೆ ಅವಕಾಶವಿಲ್ಲ'

ಕಠ್ಮಂಡು (ಪಿಟಿಐ): 'ತಮ್ಮ ನೆಲದಲ್ಲಿ ಚೀನಾ ವಿರೋಧಿ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ' ಎಂದು ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಭಾನುವಾರ ಹೇಳಿದ್ದಾರೆ. ಈ ಮೂಲಕ 'ಒಂದು ಚೀನಾ' ನೀತಿಗೆ ತಮ್ಮ ರಾಷ್ಟ್ರದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

ಕೆ.ಪಿ ಶರ್ಮಾ ಒಲಿ

ಚೀನಾ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಸದಸ್ಯ ಚೆನ್ ಜಿನಿಂಗ್ ನೇತೃತ್ವದ ಉನ್ನತ ಮಟ್ಟದ ನಿಯೋಗದ ಜತೆ ನಡೆದ ಸಭೆಯಲ್ಲಿ ಒಲಿ ಈ ಹೇಳಿಕೆ ನೀಡಿದ್ದಾರೆ. ಕಠ್ಮಂಡುವಿನ ಬಾಲುವಾಟರ್‌ನಲ್ಲಿರುವ ಪ್ರಧಾನಿ ಅವರ ಅಧಿಕೃತ ನಿವಾಸದಲ್ಲಿ ಸಭೆ ನಡೆದಿದೆ. ನೇಪಾಳದ ಭೂಪ್ರದೇಶದಲ್ಲಿ ಚೀನಾ ವಿರೋಧಿ ಚಟುವಟಿಕೆಗಳಿಗೆ ಯಾವುದೇ ಅವಕಾಶ ನೀಡುವುದಿಲ್ಲ ಎಂದು ಒಲಿ ಅವರು ಚೀನಾದ ನಿಯೋಗಕ್ಕೆ ಭರವಸೆ ನೀಡಿದ್ದಾರೆ.

ಚೀನಾವು ತೈವಾನ್ ಅನ್ನು ತನ್ನ ಭಾಗ ಎಂದು ಹೇಳಿಕೊಳ್ಳುತ್ತಾ ಬಂದಿದೆ. ಮಾತ್ರವಲ್ಲ, ತನ್ನೊಂದಿಗೆ ರಾಜತಾಂತ್ರಿಕ ಸಂಬಂಧ ಹೊಂದಿರುವ ಎಲ್ಲ ದೇಶಗಳು 'ಒಂದು ಚೀನಾ' ನೀತಿಯನ್ನು ಒಪ್ಪಿಕೊಳ್ಳಬೇಕು ಎಂದು ಆಗ್ರಹಿಸುತ್ತಿದೆ. ತೈವಾನ್ ಚೀನಾದ ಭಾಗ ಎಂದು 'ಒಂದು ಚೀನಾ' ನೀತಿ ಹೇಳುತ್ತದೆ.

ನೇಪಾಳದ ಆರ್ಥಿಕ ಅಭಿವೃದ್ಧಿಗೆ ಚೀನಾದಿಂದ ನಿರಂತರ ಬೆಂಬಲ ಲಭಿಸಲಿದೆ ಎಂಬ ವಿಶ್ವಾಸವನ್ನು ಒಲಿ ಅವರು ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಉಗ್ರರ ಸಂಘಟನೆಗೆ ಸೆಳೆಯಲು ಆನ್‌ಲೈನ್ ವೇದಿಕೆಗಳಿಗೆ ಮೊರೆ

ಶ್ರೀನಗರ (ಪಿಟಿಐ): ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಲು ಜಮ್ಮು-ಕಾಶ್ಮೀರದ ಯುವಜನರನ್ನು ನೇಮಕ ಮಾಡಿಕೊಳ್ಳುವುದು ಬಹಳ ಕಷ್ಟವಾಗಿರುವ ಕಾರಣ, ಪಾಕಿಸ್ತಾನದ ಐಎಸ್‌ಐ ಮತ್ತು ಇತರ ಉಗ್ರ ಸಂಘಟನೆಗಳು ತಮ್ಮ ತಂತ್ರಗಾರಿಕೆಯನ್ನು ಬದಲಿಸಿವೆ.

ಕೇಂದ್ರಾಡಳಿತ ಪ್ರದೇಶದಲ್ಲಿ ಭದ್ರತೆಯನ್ನು ಹೆಚ್ಚಿಸಿರುವ ಕಾರಣ, ಯುವ ಜನತೆಯ ನೇಮಕಕ್ಕೆ ಐಎಸ್‌ಐ ಮತ್ತು ಉಗ್ರ ಸಂಘಟನೆಗಳಿಗೆ ಕಷ್ಟವಾಗುತ್ತಿದೆ. ಈ ಕಾರಣಕ್ಕೆ ಅವು 'ಎಕ್ಸ್', ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಮತ್ತು ಟೆಲಿಗ್ರಾಮ್‌ನಂತಹ ಆನ್‌ಲೈನ್ ವೇದಿಕೆಗಳ ಮೊರೆ ಹೋಗಿವೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ತಮ್ಮ ಗುರುತು ಪತ್ತೆ ಆಗುವುದನ್ನು ತಡೆಯಲು ಈ ಸಂಘಟನೆಗಳು ನಕಲಿ ಪ್ರೊಫೈಲ್‌ಗಳು ಹಾಗೂ ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್‌ಗಳನ್ನು (ವಿಪಿಎನ್) ಬಳಕೆ ಮಾಡುತ್ತಿವೆ.

ಪಾಕಿಸ್ತಾನದ ಐಎಸ್‌ಐ ಜೊತೆ ನಂಟು ಹೊಂದಿರುವ 'ಹ್ಯಾಂಡ್ಲರ್'ಗಳು, ಆನ್‌ಲೈನ್ ವೇದಿಕೆಗಳ ಮೂಲಕ ನೇಮಕವಾದ ಯುವಜನರಲ್ಲಿ ದ್ವೇಷ ಮನೋಭಾವ ಬೆಳೆಯುವಂತೆ ನೋಡಿಕೊಳ್ಳುವ ತಂತ್ರ ಬಳಸುತ್ತಾರೆ. ಇದು, ಮತ್ತಷ್ಟು ಯುವಜನರ ನೇಮಕಕ್ಕೆ ನೆರವಾಗುತ್ತಿದೆ ಎಂದು ಹೇಳಿದ್ದಾರೆ.

'ಈಜಿಪ್ಟ್ ಮೂಲದ ತೀವ್ರವಾದಿ ಸಯ್ಯಿದ್ ಕುತ್ಬ್ ರಚಿಸಿದ ಸಾಹಿತ್ಯವನ್ನು ಹೊಸದಾಗಿ ನೇಮಕಗೊಂಡವರಿಗೆ ಹೇಳಿಕೊಡಲಾಗುತ್ತಿದೆ. ಅಲ್ ಕೈದಾ ಸೇರಿದಂತೆ ಅನೇಕ ಉಗ್ರ ಸಂಘಟನೆಗಳು ಈತನ ಸಾಹಿತ್ಯದಿಂದ ಪ್ರಭಾವಿತವಾಗಿವೆ. ಹೀಗಾಗಿ, ಈ ಬೆಳವಣಿಗೆ ಕಳವಳಕಾರಿ' ಎಂದು ಹೇಳಿದ್ದಾರೆ.

ಪಾಶ್ಚಿಮಾತ್ಯ ಪ್ರಭಾವ ಮತ್ತು ಜಾತ್ಯತೀತ ಸರ್ಕಾರಗಳ ವಿರುದ್ಧ ಜಿಹಾದ್ ಬಳಕೆಗೆ ಪ್ರಚೋದಿಸಿದ್ದಕ್ಕಾಗಿ ಕುತ್ಬ್‌ನನ್ನು 1966ರಲ್ಲಿ ಗಲ್ಲಿಗೇರಿಸಲಾಗಿದೆ.

ಅ.7ರ ದಾಳಿ ವೇಳೆ ಸುರಂಗದಲ್ಲಿ ಅಡಗಿದ್ದ ಹಮಾಸ್ ಮುಖಂಡ

ಸಿನ್ವರ್ ಮತ್ತೊಂದು ವಿಡಿಯೊ ಬಿಡುಗಡೆ

ಜೆರುಸಲೇಂ (ಎಎಫ್‌ಪಿ/ಎಪಿ): ಹಮಾಸ್ ಬಂಡುಕೋರರು ಕಳೆದ ವರ್ಷ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ಆರಂಭಿಸುವ ಮುನ್ನ ಯಹ್ಯಾ ಸಿನ್ವರ್ ಅವರು ಗಾಜಾದ ಸುರಂಗದಲ್ಲಿ ದೀರ್ಘ ಕಾಲ ತಂಗಲು ತಯಾರಿ ನಡೆಸಿದ್ದ ವಿಡಿಯೊವನ್ನು ಇಸ್ರೇಲ್ ಸೇನೆ ಶನಿವಾರ ಬಿಡುಗಡೆ ಮಾಡಿದೆ.

ಇಸ್ರೇಲ್ ಮೇಲಿನ ದಾಳಿಯ ಪ್ರಮುಖ ಸಂಚುಕೋರರಲ್ಲಿ ಒಬ್ಬರಾಗಿದ್ದ ಸಿನ್ವರ್ ಅವರನ್ನು ಇಸ್ರೇಲ್ ಸೇನೆ ಕಳೆದ ವಾರ ಹತ್ಯೆ ಮಾಡಿತ್ತು. ಅವರ ಕೊನೆಯ ಕ್ಷಣಗಳ ವಿಡಿಯೊವನ್ನು ಈ ಹಿಂದೆ ಬಿಡುಗಡೆ ಮಾಡಿತ್ತು.

ಸಿನ್ವರ್ ತಮ್ಮ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಸುರಂಗದೊಳಗೆ ತೆರಳುತ್ತಿರುವ ದೃಶ್ಯ ಹೊಸ ವಿಡಿಯೊದಲ್ಲಿದೆ. 'ಗಾಜಾ ಪಟ್ಟಿಯ ಖಾನ್ ಯೂನಿಸ್‌ನಲ್ಲಿರುವ ಅವರ ಮನೆಯ ಕೆಳಗಡೆ ಇರುವ ಸುರಂಗ ಅದಾಗಿದೆ' ಎಂದು ವಿಡಿಯೊ ಬಿಡುಗಡೆ ಗೊಳಿಸಿದ ಇಸ್ರೇಲ್ ಸೇನೆಯ ವಕ್ತಾರ ಅಡ್ಮಿರಲ್ ಡೇನಿಯಲ್ ಹಗರಿ ಹೇಳಿದ್ದಾರೆ.

'ಹಮಾಸ್ ನಡೆಸಿದ ಹತ್ಯಾಕಾಂಡಕ್ಕೆ ಕೆಲವೇ ಗಂಟೆಗಳ ಮೊದಲು, 2023ರ ಅಕ್ಟೋಬರ್ 6ರ ರಾತ್ರಿ ಸಿನ್ವರ್ ಮತ್ತು ಅವರ ಕುಟುಂಬದ ಸದಸ್ಯರು ಮನೆಯ ಕೆಳಗಿರುವ ಸುರಂಗದಲ್ಲಿ ಅಡಗಿಕೊಳ್ಳುವುದನ್ನು ನೀವು ನೋಡಬಹುದು' ಎಂದು ಅವರು ವಿಡಿಯೊ ದೃಶ್ಯ ತೋರಿಸುತ್ತಾ ತಿಳಿಸಿದರು.

'ಯುದ್ಧ ಆರಂಭವಾದ ಬಳಿಕ ಕಳೆದ ಒಂದು ವರ್ಷದಲ್ಲಿ ಇಸ್ರೇಲ್ ಸೇನೆಯ ಕೈಗೆ ಸಿಕ್ಕಿ ಬೀಳುವುದರಿಂದ ಹಲವು ಸಲ ಅವರು ಅಲ್ಪದರಲ್ಲೇ ಪಾರಾಗಿದ್ದರು. ಸಿನ್ವರ್ ಅವರು ಬಹುಪಾಲು ಸಮಯವನ್ನು ಖಾನ್ ಯೂನಿಸ್ ಮತ್ತು ರಫಾ ಪಟ್ಟಣದ ನಡುವೆ ಇರುವ ಸುರಂಗದಲ್ಲಿ ಕಳೆದಿದ್ದಾರೆ' ಎಂದು ಹೇಳಿದರು.

'ಸಿನ್ವರ್ ಮತ್ತು ಅವರ ಮಗ ಹಲವು ಸಲ ಅತ್ತಿತ್ತ ಹೋಗುವ ದೃಶ್ಯ ವಿಡಿಯೊದಲ್ಲಿದೆ. ಆಹಾರ, ನೀರು, ಹಾಸಿಗೆ, ದಿಂಬುಗಳು, ಟಿ.ವಿ ಮತ್ತು ಇತರ ಅಗತ್ಯ ವಸ್ತುಗಳನ್ನು ಸುರಂಗಕ್ಕೆ ಕೊಂಡೊಯ್ದು ಅಲ್ಲಿ ದೀರ್ಘ ಕಾಲ ಉಳಿದುಕೊಳ್ಳಲು ತಯಾರಿ ನಡೆಸಿದ್ದರು' ಎಂದರು.

ಗಾಜಾಪಟ್ಟಿಯ ಬೈತ್ ಲಾಹಿಯಾ ಪಟ್ಟಣದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಗಾಯಗೊಂಡವರಿಗೆ ಕಮಲ್ ಅದ್ವನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು –ಎಎಫ್‌ಪಿ ಚಿತ್ರ

ಉತ್ತರ ಗಾಜಾ: 87 ಮಂದಿ ಬಲಿ

ದಾರ್ ಅಲ್ ಬಲಾ (ಗಾಜಾಪಟ್ಟಿ): ಗಾಜಾಪಟ್ಟಿಯ ಉತ್ತರ ಭಾಗದ ಹಲವು ಮನೆಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಭಾನುವಾರ ನಡೆಸಿದ ದಾಳಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ 87 ಮಂದಿ ಬಲಿಯಾಗಿದ್ದಾರೆ ಎಂದು ಇಲ್ಲಿನ ಆರೋಗ್ಯ ಸಚಿವಾಲಯ ತಿಳಿಸಿದೆ.

ಬೈತ್ ಲಾಹಿಯಾ ಪಟ್ಟಣದಲ್ಲಿ ನಡೆದಿರುವ ದಾಳಿಯಲ್ಲಿ ಇತರ 40 ಮಂದಿ ಗಾಯಗೊಂಡಿದ್ದಾರೆ. ಈ ದಾಳಿ ಬಗ್ಗೆ ಇಸ್ರೇಲ್ ಸೇನೆ ಯಾವುದೇ ಹೇಳಿಕೆ ಬಿಡುಗಡೆಗೊಳಿಸಿಲ್ಲ. 'ತಂದೆ, ತಾಯಿ ಮತ್ತು ನಾಲ್ವರು ಮಕ್ಕಳು, ಒಬ್ಬ ಮಹಿಳೆ, ಆಕೆಯ ಮಗ- ಸೊಸೆ ಮತ್ತು ಅವರ ನಾಲ್ವರು ಮಕ್ಕಳು ಮೃತರಲ್ಲಿ ಸೇರಿದ್ದಾರೆ' ಎಂದು ಕಮಲ್ ಅದ್ವನ್ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದ್ದಾರೆ.

ರಹಸ್ಯ ದಾಖಲೆ ಸೋರಿಕೆ: ಅಮೆರಿಕ ತನಿಖೆ

ವಾಷಿಂಗ್ಟನ್: ಇರಾನ್ ಮೇಲೆ ದಾಳಿ ಮಾಡುವ ಇಸ್ರೇಲ್‌ನ ಯೋಜನೆಗೆ ಸಂಬಂಧಿಸಿದ ರಹಸ್ಯ ದಾಖಲೆಗಳು ಸೋರಿಕೆಯಾಗಿರುವ ಘಟನೆ ಬಗ್ಗೆ ಅಮೆರಿಕವು ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಹಸ್ಯ ದಾಖಲೆಗಳು ಯುಎಸ್ ಜಿಯೋಸ್ಪೇಶಿಯಲ್ ಇಂಟೆಲಿಜೆನ್ಸ್ ಏಜೆನ್ಸಿ ಮತ್ತು ನ್ಯಾಷನಲ್ ಸೆಕ್ಯುರಿಟಿ ಏಜೆನ್ಸಿಗೆ ಸೇರಿದ್ದಾಗಿತ್ತು. ಇರಾನ್ ನಡೆಸಿದ ಕ್ಷಿಪಣಿ ದಾಳಿಗೆ ಪ್ರತಿಯಾಗಿ ದಾಳಿ ನಡೆಸಲು ಇಸ್ರೇಲ್ ತನ್ನ ಅಸ್ತ್ರಗಳನ್ನು ಸಜ್ಜುಗೊಳಿಸುತ್ತಿರುವುದರ ಕುರಿತ ಮಾಹಿತಿಯು ರಹಸ್ಯ ದಾಖಲೆಯಲ್ಲಿದೆ.

ಅಮೆರಿಕದ ಗುಪ್ತಚರ ಸಂಸ್ಥೆಯ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ರಹಸ್ಯ ದಾಖಲೆಗಳನ್ನು ಬಹಿರಂಗಪಡಿಸಿದ್ದಾರೆಯೇ ಅಥವಾ ಹ್ಯಾಕರ್‌ಗಳು ದಾಖಲೆ ಸೋರಿಕೆ ಮಾಡಿದ್ದಾರೆಯೇ ಎಂಬುದನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿರುವುದಾಗಿ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

'ಜೈ ಶ್ರೀರಾಮ್' ಕೂಗುವಂತೆ ಒತ್ತಾಯಿಸಿ ಹಲ್ಲೆ

ಕಾನ್ಪುರ (ಪಿಟಿಐ): ವಿದ್ಯಾರ್ಥಿಗಳ ಗುಂಪೊಂದು 'ಜೈ ಶ್ರೀರಾಮ್' ಎಂದು ಕೂಗುವಂತೆ ಒತ್ತಾಯಿಸಿ ದಲಿತ ಸಮುದಾಯದ 16 ವರ್ಷದ ಬಾಲಕನ ಮೇಲೆ ಹಲ್ಲೆ ನಡೆಸಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಈ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಭಾರತೀಯ ನ್ಯಾಯ ಸಂಹಿತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ಅಡಿಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ದಲಿತ ಸಮುದಾಯದ ಬಾಲಕ ತನ್ನ ಇನ್‌ಸ್ಟಾಗ್ರಾಂ ಸ್ಟೇಟಸ್‌ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿತ್ರವನ್ನು ಹಾಕಿದ್ದಕ್ಕೆ ವಿದ್ಯಾರ್ಥಿಗಳ ಗುಂಪೊಂದು ಆತನ ಮೇಲೆ ಹಲ್ಲೆ ನಡೆಸಿದೆ. ನಂತರ ಬಲವಂತವಾಗಿ 'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಮಾಡಲಾಗಿದೆ' ಎಂದು ಘಾಟಂಪುರ ಎಸಿಪಿ ರಂಜೀತ್ ಕುಮಾರ್ ತಿಳಿಸಿದ್ದಾರೆ. 'ಹಲ್ಲೆ ನಡೆಸಿದವರು ಆತನ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ಘಟನೆ ಬಗ್ಗೆ ತನಿಖೆ ಆರಂಭಿಸಲಾಗಿದ್ದು, ಇದುವರೆಗೆ ಯಾರನ್ನೂ ಬಂಧಿಸಿಲ್ಲ' ಎಂದಿದ್ದಾರೆ.

110 ಡ್ರೋನ್ ಹೊಡೆದುರುಳಿಸಿದ ರಷ್ಯಾ

ಕೀವ್ (ಎಪಿ): ಉಕ್ರೇನ್ ಹಾರಿಸಿದ 110 ಡ್ರೋನ್‌ಗಳನ್ನು ಭಾನುವಾರ ಹೊಡೆದುರುಳಿಸಿರುವುದಾಗಿ ರಷ್ಯಾ ತಿಳಿಸಿದೆ. ಉಕ್ರೇನ್‌ನ ಕ್ರೀವಿ ರಿಯಾ ನಗರದ ಮೇಲೆ ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಲ್ಲಿ 17 ಮಂದಿ ಗಾಯಗೊಂಡಿದ್ದಾರೆ.

ರಷ್ಯಾದ ಏಳು ಪ್ರಾಂತ್ಯಗಳನ್ನು ಗುರಿಯಾಗಿಸಿ ರಾತ್ರಿಯಿಡೀ ಡ್ರೋನ್ ದಾಳಿ ನಡೆದಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

ಝೆರ್‌ಜಿನ್‌ಸ್ಕ್ ಕೈಗಾರಿಕಾ ಪ್ರದೇಶದ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ ನಾಲ್ವರು ಯೋಧರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಗವರ್ನರ್ ಗ್ಲೆಬ್ ನಿಕಿತಿನ್ ತಿಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ಏಕಕಾಲದಲ್ಲಿ ರಷ್ಯಾ ಮೇಲೆ 125 ಡ್ರೋನ್ ಹಾರಿಸಿದ್ದ ಬಳಿಕ, ಉಕ್ರೇನ್ ನಡೆಸಿದ ಅತಿದೊಡ್ಡ ದಾಳಿ ಇದಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್' ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

ನವೆಂಬರ್ ತಿಂಗಳಲ್ಲಿ 14 ದಿನಗಳ ಶಿರಡಿ ಮತ್ತು ಅಷ್ಟಜ್ಯೋತಿರ್ಲಿಂಗ ಪ್ರವಾಸ. 5 ದಿನಗಳ ಕಾಶಿ,ಅಯೋಧ್ಯ ಪ್ರವಾಸ. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಅಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಾಹನ

Four Wheelers Selling

TATA

TATA MOTORS Connecting Aspirations
ದೀಪಾವಳಿ ಹಬ್ಬದ ಧಮಾಕ ಕೊಡುಗೆಗಳು
ಕಡಿಮೆ ಬಡ್ಡಿದರ 2.99%**
ACE CHOTA HAATHI
INTRA PICKUP
ಕಡಿಮೆ ಬಡ್ಡಿದರ 4.99%**
INTRA V50
ವಾರ್ಷಿಕ ನಿರ್ವಹಣಾ ಪ್ಯಾಕೇಜ್ 2* ವರ್ಷದವರೆಗೆ ₹50 000/-* INTRA V50 ಗೆ ಮಾತ್ರ ಅನ್ವಯ.
North Karnataka M : 91645 52700
South Karnataka M : 99039 34442
*Terms & Conditions apply.
** For Low IRR Discounts will not be applicable.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಚಾರ ಕಾರ್ಯ ಆರಂಭಿಸಿದ ಆರ್‌ಎಸ್‌ಎಸ್

ಬಿಜೆಪಿ ಪರ ಜನಾಭಿಪ್ರಾಯ ರೂಪಿಸುವ ಯತ್ನ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಕೇವಲ ಒಂದು ತಿಂಗಳು ಬಾಕಿ ಇರುವಾಗಲೇ, ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟದ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ವ್ಯಾಪಕ ಪ್ರಚಾರ ಕಾರ್ಯಕ್ರಮ ಆರಂಭಿಸಿದೆ.

ಬಿಜೆಪಿಯ ಸೈದ್ಧಾಂತಿಕ ಮಾರ್ಗದರ್ಶಕ ಎನಿಸಿರುವ ಆರ್‌ಎಸ್‌ಎಸ್ ತನ್ನ ಎಲ್ಲ ಅಂಗ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಪ್ರಚಾರ ಕಾರ್ಯ ಪ್ರಾರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

'ರಾಜ್ಯದಾದ್ಯಂತ ತಂಡಗಳನ್ನು ರಚಿಸಲಾಗಿದ್ದು, ಆ ತಂಡಗಳು ತಮ್ಮ ಸಂದೇಶವನ್ನು ಆಯಾ ಪ್ರದೇಶಗಳ ಜನರಿಗೆ ತಲುಪಿಸುವ ಕೆಲಸವನ್ನು ಆರಂಭಿಸಿವೆ' ಎಂದೂ ಹೇಳಿವೆ.

ಪ್ರತಿ ತಂಡವು 5ರಿಂದ 10 ಜನರ ಸಣ್ಣ ಗುಂಪುಗಳನ್ನು ಸೇರಿಸಿಕೊಂಡು ಸಭೆಗಳನ್ನು ನಡೆಸುತ್ತಿವೆ ಮತ್ತು ಆಯಾ ಪ್ರದೇಶಗಳಲ್ಲಿನ 'ಮೊಹಲ್ಲಾ'ಗಳಲ್ಲಿ ತಮ್ಮ ಸ್ಥಳೀಯ ಕಾರ್ಯಕರ್ತರ ಮೂಲಕ ಪ್ರಭಾವಿಯಾಗಿ ತಲುಪುವ ಕೆಲಸ ಮಾಡುತ್ತಿವೆ ಎಂದು ಮೂಲಗಳು ವಿವರಿಸಿವೆ.

'ಅಂತಹ ಸಭೆಗಳಲ್ಲಿ, ಅವರು ಬಿಜೆಪಿ ಪರ ನೇರವಾಗಿ ಪ್ರಚಾರ ಮಾಡುತ್ತಿಲ್ಲ. ಆದರೆ, ರಾಷ್ಟ್ರೀಯ ಹಿತಾಸಕ್ತಿ, ಹಿಂದುತ್ವ, ಒಳ್ಳೆಯ ಆಡಳಿತ, ಅಭಿವೃದ್ಧಿ, ಸಾರ್ವಜನಿಕ ಕಲ್ಯಾಣ ಮತ್ತು ಇತರ ಸ್ಥಳೀಯ ವಿಷಯಗಳ ಬಗ್ಗೆ ಚರ್ಚೆಗಳ ಮೂಲಕ ಜನರ ಅಭಿಪ್ರಾಯವನ್ನು ರೂಪಿಸುತ್ತಿದ್ದಾರೆ' ಎಂದಿವೆ.

ಆರ್‌ಎಸ್‌ಎಸ್, ಹರಿಯಾಣದಾದ್ಯಂತ ತನ್ನ ಅಂಗಸಂಸ್ಥೆಗಳೊಂದಿಗೆ ನಡೆಸಿದ್ದ ಸಭೆಗಳು ಅಲ್ಲಿ ಬಿಜೆಪಿಯ ಚುನಾವಣಾ ಯಶಸ್ಸಿನ ಹಿಂದಿನ ಪ್ರಮುಖ ಅಂಶಗಳಲ್ಲಿ ಒಂದಾಗಿದೆ ಎಂದು ಮೂಲಗಳು ಹೇಳಿವೆ.

ತಾನು ನೇರವಾಗಿ ಚುನಾವಣಾ ರಾಜಕೀಯದಲ್ಲಿ ಭಾಗಿಯಾಗುವುದಿಲ್ಲ ಎಂದು ಆರ್‌ಎಸ್‌ಎಸ್ ಹೇಳುತ್ತಾ ಬಂದಿದೆಯಾದರೂ, ಚುನಾವಣೆಯಲ್ಲಿ ಅದು ಬಿಜೆಪಿಯ ಗುಪ್ತ ಶಕ್ತಿಯಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ.

ವಿಧಾನಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಪಕ್ಷಕ್ಕೆ ಅನುಕೂಲಕರವಾದ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಆರ್‌ಎಸ್‌ಎಸ್ ಕಾರ್ಯಕರ್ತರು ಅಖಾಡಕ್ಕೆ ಇಳಿದಿರುವುದು, ಮಹಾರಾಷ್ಟ್ರದ ಬಿಜೆಪಿ ನಾಯಕರಲ್ಲಿ ಆಶಾವಾದವನ್ನು ತುಂಬಿದೆ. ಹರಿಯಾಣದಲ್ಲಿ ಅನುಸರಿಸಿದ ತಂತ್ರವು ಮಹಾರಾಷ್ಟ್ರದಲ್ಲೂ ಯಶಸ್ವಿಯಾಗಬಹುದು ಎಂದು ಆಶಿಸುತ್ತಿದ್ದಾರೆ.

'ಹರಿಯಾಣದಲ್ಲಿ 1.25 ಲಕ್ಷಕ್ಕೂ ಅಧಿಕ ಸಭೆ'

ಹರಿಯಾಣದಲ್ಲಿ ಬಿಜೆಪಿ ಪರ ಜನಾಭಿಪ್ರಾಯ ಮೂಡಿಸಲು ಆರ್‌ಎಸ್‌ಎಸ್ ಕಾರ್ಯಕರ್ತರು ಜನರ ಸಣ್ಣ ಗುಂಪುಗಳೊಂದಿಗೆ 1.25 ಲಕ್ಷಕ್ಕೂ ಅಧಿಕ ಸಭೆಗಳನ್ನು ನಡೆಸಿದ್ದಾರೆ ಎಂದು ಮೂಲವೊಂದು ತಿಳಿಸಿದೆ.

ಈ ಸಭೆಗಳು ಹರಿಯಾಣದಲ್ಲಿ ಭೂಪಿಂದರ್ ಸಿಂಗ್ ಹೂಡಾ ನೇತೃತ್ವದ ಹಿಂದಿನ ಕಾಂಗ್ರೆಸ್ ಸರ್ಕಾರದ 'ಜಾಟ್ ಸಮುದಾಯ ಕೇಂದ್ರಿತ ನೀತಿಗಳು' ಸೇರಿದಂತೆ ವಿವಿಧ ವಿಷಯಗಳನ್ನು ಎತ್ತಿ ತೋರಿಸುವ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ಬಿಜೆಪಿ ಪರ ರೂಪಿಸಲು ನೆರವಾದವು ಎಂದು ಹೇಳಿವೆ.

'ಅಗ್ನಿಪಥ್' ಯೋಜನೆ ಬಗ್ಗೆ ಜನರಲ್ಲಿದ್ದ ಕಳವಳವನ್ನು ದೂರಮಾಡಿದರಲ್ಲದೆ, ರೈತರೊಂದಿಗೆ ಮಾತುಕತೆ ನಡೆಸಿ ಅವರ ಭಾವನೆಗಳನ್ನು ಬಿಜೆಪಿ ಪರ ತಿರುಗಿಸುವಲ್ಲಿ ಯಶಸ್ವಿಯಾದರು' ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ಚುನಾವಣೆ: 71 ಹಾಲಿ ಶಾಸಕರಿಗೆ ಮಣೆ

ಪ್ರಜಾ ಮತ ಜನತಂತ್ರದ ಹಬ್ಬ

ಬಿಜೆಪಿ ಮೊದಲ ಪಟ್ಟಿ ಬಿಡುಗಡೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಬಿಜೆಪಿಯು ತನ್ನ 99 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ. 71 ಹಾಲಿ ಶಾಸಕರಿಗೆ ಈ ಬಾರಿಯೂ ಬಿಜೆಪಿ ಮಣೆ ಹಾಕಿದೆ. ಉಳಿದಂತೆ ಪಕ್ಷದ ಪ್ರಮುಖ ನಾಯಕರ ಮಕ್ಕಳು, ಹೆಂಡತಿ, ಸಹೋದರರಿಗೂ ಪಕ್ಷ ಈ ಬಾರಿ ಟಿಕೆಟ್ ನೀಡಿದೆ.

ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಬಿಜೆಪಿ ಅಧ್ಯಕ್ಷ ಚಂದ್ರಶೇಖರ್ ಬವನ್‌ಕುಲೆ, ಸ್ಪೀಕರ್ ರಾಹುಲ್ ನಾರ್ವೇಕರ್, ಸಚಿವರಾದ ಗಿರೀಶ್ ಮಹಾಜನ್, ಸುಧೀರ್ ಮುನಘಂಟೀವರ್ ಹಾಗೂ ಚಂದ್ರಕಾಂತ್ ಪಾಟೀಲ್– ಇವರು ಮೊದಲ ಪಟ್ಟಿಯಲ್ಲಿ ಸ್ಥಾನಪಡೆದ ಪ್ರಮುಖರು. 13 ಮಹಿಳಾ ಅಭ್ಯರ್ಥಿಗಳೂ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಮುಂಬೈ ನಗರದಲ್ಲಿನ ಬಿಜೆಪಿಯ 16 ಶಾಸಕರ ಪೈಕಿ 14 ಮಂದಿಗೆ ಪಟ್ಟಿಯಲ್ಲಿ ಸ್ಥಾನ ದೊರೆತಿದೆ.

ಸುರಕ್ಷಿತ ನಡೆ: ಗೆಲುವು ಪರಿಗಣನೆ

ಮಹಾರಾಷ್ಟ್ರದಲ್ಲಿನ ರಾಜಕೀಯ ಧ್ರುವೀಕರಣದ ಪರಿಸ್ಥಿತಿಯ ಮಧ್ಯೆ ವಿಧಾನಸಭೆ ಚುನಾವಣೆಗೆ ಬಿಜೆಪಿ ಬಿಡುಗಡೆ ಮಾಡಿರುವ ಮೊದಲ ಪಟ್ಟಿ, ಗೆಲ್ಲುವ ಸಾಮರ್ಥ್ಯವನ್ನು ಮಾನದಂಡವಾಗಿರಿಸಿಕೊಂಡಿರುವುದನ್ನು ಸ್ಪಷ್ಟವಾಗಿಸಿದೆ. ಹಾಗೆಯೇ ರಾಜಕೀಯ ಕುಟುಂಬಗಳ ಎರಡನೇ ಹಾಗೂ ಮೂರನೇ ತಲೆಮಾರಿನ ನಾಯಕರಿಗೆ ಅವಕಾಶ ಕಲ್ಪಿಸಿರುವುದು ಪಕ್ಷವು ಸುರಕ್ಷಿತ ಹೆಜ್ಜೆ ಇರಿಸುತ್ತಿರುವುದನ್ನು ಸೂಚಿಸುತ್ತದೆ.

99 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಮಹಿಳೆಯರಿಗೆ ಶೇ 10ಕ್ಕಿಂತ ಹೆಚ್ಚು ಪ್ರಾತಿನಿಧ್ಯ ಸಿಕ್ಕಿದೆ. ಅಲ್ಲದೆ 71 ಹಾಲಿ ಶಾಸಕರನ್ನು ಉಳಿಸಿಕೊಳ್ಳಲಾಗಿದೆ. ಈ 71 ಕ್ಷೇತ್ರಗಳನ್ನು ಬಿಜೆಪಿ ಗೆಲ್ಲುವ ಸುರಕ್ಷಿತ ಕ್ಷೇತ್ರಗಳೆಂದು ಪರಿಗಣಿಸಿದೆ.

2014 ಮತ್ತು 2019ರ ಫಲಿತಾಂಶಗಳನ್ನು ಗಮನಿಸಿದರೆ, ಬಿಜೆಪಿ ಕ್ರಮವಾಗಿ 122 ಮತ್ತು 105 ಸ್ಥಾನಗಳನ್ನು ಗೆದ್ದಿತ್ತು. 288 ಸ್ಥಾನಗಳ ಪೈಕಿ, ಬಿಜೆಪಿ 150 ರಿಂದ 155 ಸ್ಥಾನಗಳಿಗೆ ಸ್ಪರ್ಧಿಸಿ, ಉಳಿದ ಸ್ಥಾನಗಳನ್ನು ಮಿತ್ರಪಕ್ಷಗಳಾದ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಹಾಗೂ ಇನ್ನಿತರ ಸಣ್ಣಪುಟ್ಟ ಪಕ್ಷಗಳಿಗೆ ಬಿಟ್ಟುಕೊಡಲು ಯೋಜಿಸುತ್ತಿದೆ. ಲೋಕಸಭೆ ಚುನಾವಣೆಯಲ್ಲಿನ ಸೋಲು ಮತ್ತು ಮರಾಠ ವರ್ಸಸ್ ಒಬಿಸಿ ಮೀಸಲಾತಿ ಸಮಸ್ಯೆಯ ನಡುವೆ ಬಿಜೆಪಿಯು ಯಾವುದೇ ಸಾಹಸಕ್ಕೆ ಕೈಹಾಕಲು ಬಯಸುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ.

'ಮರಾಠರು ಹೆಚ್ಚಿರುವ ಕಡೆ ಅಭ್ಯರ್ಥಿಗಳು ಕಣಕ್ಕೆ'

ಜಲ್ನಾ (ಪಿಟಿಐ): 'ಯಾವ ಕ್ಷೇತ್ರಗಳಲ್ಲಿ ಮರಾಠ ಸಮುದಾಯದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೋ, ಅಂತಹ ಕಡೆ ಮರಾಠ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು' ಎಂದು ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜಾರಂಗೆ ಅವರು ಭಾನುವಾರ ಘೋಷಿಸಿದರು.

ಜಾಲ್ನಾ ಜಿಲ್ಲೆಯ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿದ ಅವರು, 'ಮರಾಠ ಸಮುದಾಯದ ಮತದಾರರ ಸಂಖ್ಯೆ ಹೆಚ್ಚಿರುವ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಇದೆಯೊ ಅಲ್ಲಿ ಮಾತ್ರವೇ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು' ಎಂದರು.

'ಇತರೆ ಕ್ಷೇತ್ರಗಳಲ್ಲಿ, ಮರಾಠ ಮೀಸಲಾತಿಯನ್ನು ಬೆಂಬಲಿಸುವ ಯಾವುದೇ ಪಕ್ಷದ, ಯಾವುದೇ ಜಾತಿ, ಧರ್ಮದ ಅಭ್ಯರ್ಥಿಯನ್ನು ನಾವು ಬೆಂಬಲಿಸಲಿದ್ದೇವೆ. ಆದರೆ, ಆ ಅಭ್ಯರ್ಥಿಯು ಮೀಸಲಾತಿ ಬೇಕು ಎಂಬ ನಮ್ಮ ಬೇಡಿಕೆಯನ್ನು ಈಡೇರಿಸುವುದಾಗಿ ಲಿಖಿತವಾಗಿ ಭರವಸೆ ನೀಡಬೇಕಷ್ಟೇ' ಎಂದರು.

ಕುಟುಂಬ ರಾಜಕಾರಣಕ್ಕೆ ಮಣೆ

ಇತ್ತೀಚೆಗಷ್ಟೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಕೊಂಡಿದ್ದ ಅಶೋಕ್ ಚವ್ಹಾಣ್ ಅವರ ಮಗಳು ಶ್ರೀಜಯ ಚವ್ಹಾಣ್ ಅವರಿಗೆ ಬಿಜೆಪಿ ಟಿಕೆಟ್ ನೀಡಿದ್ದು, ಅವರು ಇದೇ ಮೊದಲ ಬಾರಿಗೆ ಚುನಾವಣೆ ಎದುರಿಸಲು ಸಜ್ಜಾಗಿದ್ದಾರೆ. ಪಕ್ಷದ ನಾಯಕ, ಸಂಸದ ನಾರಾಯಣ ರಾಣೆ ಅವರ ಮಗ ನಿತೇಶ್ ರಾಣೆ ಅವರಿಗೆ ಈ ಬಾರಿ ಟಿಕೆಟ್ ನೀಡಲಾಗಿದೆ.

ರಾಜಕಾರಣಿಯೊಬ್ಬರ ಮೇಲೆ ಗುಂಡು ಹಾರಿಸಿದ ಪ್ರಕರಣದಲ್ಲಿ ಜೈಲಿನಲ್ಲಿರುವ ಶಾಸಕ ಗಣಪತ್ ಗಾಯಕ್ವಾಡ್ ಅವರ ಪತ್ನಿ ಸುಲ್ಭಾ ಗಾಯಕ್ವಾಡ್ ಅವರಿಗೆ ಟಿಕೆಟ್ ನೀಡಲಾಗಿದೆ.

ಮುಂಬೈನ ಬಿಜೆಪಿ ಮುಖ್ಯಸ್ಥ ಆಶಿಶ್ ಶೆಲಾರ್, ಅವರ ಸಹೋದರ ವಿನೋದ್ ಶೆಲಾರ್ ಅವರಿಗೂ ಬಿಜೆಪಿ ಟಿಕೆಟ್ ಘೋಷಿಸಿದೆ.

ಶಾಸಕ ಅಶ್ವಿನಿ ಜಗಪತ್ ಅವರ ಬದಲಿಗೆ ಅವರ ಪತಿಯ ಸಹೋದರ ಶಂಕರ್ ಜಗಪತ್‌ಗೆ ಟಿಕೆಟ್ ನೀಡಲಾಗಿದೆ.

ಶಾಸಕರಾಗಿದ್ದ ಲಕ್ಷ್ಮಣ ಜಗಪತ್ ಅವರ ಮರಣ ನಂತರ ಅಶ್ವಿನಿ ಅವರಿಗೆ ಉಪಚುನಾವಣೆಯಲ್ಲಿ ಟಿಕೆಟ್ ನೀಡಲಾಗಿತ್ತು. ಬಬನ್‌ರಾವ್ ಪಚ್‌ಪುತೆ ಅವರ ಬದಲಿಗೆ ಅವರ ಪತ್ನಿ ಪ್ರತಿಭಾ ಪಚ್‌ಪುತೆ ಅವರಿಗೆ ಟಿಕೆಟ್ ನೀಡಿದೆ.

ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿಯಾಗಿದ್ದ ದಿವಂಗತ ಶಿವಾಜಿರಾವ್ ಪಾಟೀಲ್ ನಿಲಂಗೇಕರ್ ಅವರ ಮೊಮ್ಮಗ ಸಂಭಾಜಿ ಪಾಟೀಲ್ ನಿಲಂಗೇಕರ್ ಅವರಿಗೆ ಟಿಕೆಟ್ ನೀಡಲಾಗಿದೆ. ಛತ್ರಪತಿ ಶಿವಾಜಿ ಮಹಾರಾಜರ ವಂಶಸ್ಥರಾದ ಛತ್ರಪತಿ ಶಿವೇಂದ್ರ ರಾಜೇ ಭೋಸಲೆ ಅವರನ್ನು ಪುನಃ ಕಣಕ್ಕಿಳಿಸಲಾಗುತ್ತಿದೆ.

ಶಿವೇಂದ್ರ ಅವರು ಸಂಸದ ಶ್ರೀಮಂತ್ ಛತ್ರಪತಿ ಉದಯನ್ ರಾಜೇ ಭೋಸಲೆ ಅವರ ಸೋದರ ಸಂಬಂಧಿ ಮತ್ತು ಶಾಸಕರಾಗಿದ್ದ ದಿವಂಗತ ಛತ್ರಪತಿ ಅಭಯಸಿಂಹ ರಾಜೇ ಭೋಸಲೆ ಅವರ ಪುತ್ರ. ರಾಜಮನೆತನದ ಮತ್ತೊಬ್ಬ ಸದಸ್ಯ ಜಯಕುಮಾರ್ ರಾವಲ್ ಅವರಿಗೂ ಟಿಕೆಟ್ ನೀಡಲಾಗದೆ.

ಎನ್‌ಸಿಪಿ ಸೇರಿದ ಭರತ್ ಗವಿತ್

ಬುಡಕಟ್ಟು ಸಮುದಾಯದ ಹಿರಿಯ ನಾಯಕ ಭರತ್ ಗವಿತ್ ಕಾಂಗ್ರೆಸ್ ತೊರೆದು, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯನ್ನು ಭಾನುವಾರ ಸೇರಿದ್ದಾರೆ.

ಕಾಂಗ್ರೆಸ್‌ನಿಂದ ದಾಖಲೆಯ ಒಂಬತ್ತು ಬಾರಿ (1981-2009) ಸಂಸದರಾಗಿದ್ದ ದಿವಂಗತ ಮಾಣಿಕ್‌ರಾವ್ ಗವಿತ್ ಅವರ ಪುತ್ರನಾದ ಭರತ್, ಉತ್ತರ ಮಹಾರಾಷ್ಟ್ರದ ನಂದೂರ್‌ಬಾರ್ ಮತ್ತು ಧುಲೆ ಜಿಲ್ಲೆಗಳಲ್ಲಿ ಪ್ರಭಾವಿಯಾಗಿದ್ದಾರೆ.

ಉಪಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ನಾಯಕ ಸುನಿಲ್ ತಟ್ಕರೆ ಅವರ ಸಮ್ಮುಖದಲ್ಲಿ ಭರತ್ ಎನ್‌ಸಿಪಿ ಸೇರಿದರು.

ಜೆಎಂಎಂ ನಾಯಕಿ ಹಾಗೂ ಅಭ್ಯರ್ಥಿ ಕಲ್ಪನಾ ಸೊರೇನ್ ಅವರು ಗಿರಿಡೀಹ್ ಜಿಲ್ಲೆಯಲ್ಲಿ ಭಾನುವಾರ ಪ್ರಚಾರ ಸಭೆಯಲ್ಲಿ ಬೆಂಬಲಿಗರೊಂದಿಗೆ ಸೆಲ್ಫಿ ತೆಗೆದುಕೊಂಡರು —ಪಿಟಿಐ ಚಿತ್ರ

'ತ್ಯಾಗಕ್ಕೆ ಸಿದ್ಧರಿಲ್ಲ, ದ್ರೋಹ ಬಗೆಯಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರ್ಖಂಡ್ ವಿಧಾನಸಭೆ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟದ ಮಧ್ಯೆ ಸೀಟು ಹಂಚಿಕೆ ವಿಚಾರವಾಗಿ ನಡೆದ ಮಾತುಕತೆಯು ಫಲಗೂಡಲಿಲ್ಲ. ಆರ್‌ಜೆಡಿ ಹಾಗೂ ಸಿಪಿಐ (ಎಂಎಲ್)ಎಲ್ ಪಕ್ಷಗಳಿಗೆ ಕ್ರಮವಾಗಿ 3-4 ಸೀಟು ನೀಡುವುದನ್ನು ಆ ಪಕ್ಷಗಳು ವಿರೋಧಿಸಿವೆ.

'12ಕ್ಕಿಂತ ಕಡಿಮೆ ಸೀಟುಗಳನ್ನು ನೀಡಿದರೆ, ಅದು ನಮಗೆ ಒಪ್ಪಿಗೆ ಇಲ್ಲ' ಎಂದು ಆರ್‌ಜೆಡಿ ಪಟ್ಟುಹಿಡಿದಿದ್ದರೆ, 'ಐದಕ್ಕೂ ಕಡಿಮೆ ಸೀಟುಗಳಿಗೆ ನಮಗೂ ಒಪ್ಪಿಗೆ ಇಲ್ಲ' ಎಂದು ಸಿಪಿಐ (ಎಂಎಲ್) ಎಲ್ ಸ್ಪಷ್ಟಪಡಿಸಿದೆ. ಸೀಟು ಹಂಚಿಕೆ ವಿಚಾರದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವುದಕ್ಕೆ ಕಾಂಗ್ರೆಸ್–ಜೆಎಂಎಂ ನಾಯಕರಿಗೆ ಈ ಎರಡೂ ಪಕ್ಷಗಳು ಸೋಮವಾರದವರೆಗೆ ಕಾಲಾವಕಾಶ ನೀಡಿವೆ.

ಬಿಜೆಪಿಯನ್ನು ಸೋಲಿಸುವುದು ನಮ್ಮ ಆದ್ಯತೆ, 'ಇಂಡಿಯಾ'ಕ್ಕೆ ದ್ರೋಹ ಬಗೆಯುವುದಿಲ್ಲ. ಹಾಗೆಂದು 3-4 ಸೀಟುಗಳನ್ನೂ ಒಪ್ಪಿಕೊಳ್ಳುವುದಿಲ್ಲ. ನಾವು ತ್ಯಾಗಕ್ಕೆ ಸಿದ್ಧರಿಲ್ಲ

ಮನೋಜ್ ಝಾ, ಆರ್‌ಜೆಡಿ ಸಂಸದ

ತಮ್ಮ ಬೇಡಿಕೆ ಈಡೇರದಿದ್ದರೆ, 18–20 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆರ್‌ಜೆಡಿ ತಯಾರಿ ನಡೆಸಿದೆ. 'ಸೀಟು ಹಂಚಿಕೆ ವಿಚಾರವು ಏನೇ ಆಗಲಿ. ಆದರೆ, 'ಇಂಡಿಯಾ' ಮೈತ್ರಿ ಧರ್ಮಕ್ಕೆ ಯಾವುದೇ ಕಾರಣಕ್ಕೂ ದ್ರೋಹ ಬಗೆಯುವುದಿಲ್ಲ. ಉಳಿದ ಕ್ಷೇತ್ರಗಳಲ್ಲಿ 'ಇಂಡಿಯಾ' ಮೈತ್ರಿಕೂಟದ ಪರ ಕೆಲಸ ಮಾಡುತ್ತೇವೆ' ಎಂದು ಆರ್‌ಜೆಡಿ ಸ್ಪಷ್ಟಪಡಿಸಿದೆ.

ಗೌರಿ ಹತ್ಯೆ ಆರೋಪಿಗೆ ಹುದ್ದೆ ಇಲ್ಲ: ಶಿವಸೇನಾ

ಮುಂಬೈ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯ ಆರೋಪಿ ಶ್ರೀಕಾಂತ್ ಪಾಂಗಾರ್ಕರ್ ಅವರನ್ನು ಜಾಲ್ನಾ ಕ್ಷೇತ್ರದಲ್ಲಿ ಪಕ್ಷದ ಪ್ರಚಾರ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವುದನ್ನು ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಭಾನುವಾರ ತಡೆಹಿಡಿದಿದ್ದಾರೆ.

ಶ್ರೀಕಾಂತ್

ಗೌರಿ ಅವರ ಹತ್ಯೆ ಹಾಗೂ ನಾಲಸೊಪಾರಾ ಶಸ್ತ್ರಾಸ್ತ್ರ ಪ್ರಕರಣದ ಆರೋಪಿ ಶ್ರೀಕಾಂತ್ ಪಾಂಗಾರ್ಕರ್ ಅವರು ಶಿವಸೇನಾ ಸೇರಿರುವುದು ಚರ್ಚೆಗೆ ಗ್ರಾಸವಾಗಿದೆ.

ಜಾಲ್ನಾದ ಶಿನಸೇನಾ ನಾಯಕ ಅರ್ಜುನ್ ಕೋಟ್ಕರ್ ಅವರ ಸಮ್ಮುಖದಲ್ಲಿ ಶ್ರೀಕಾಂತ್ ಪಕ್ಷ ಸೇರಿದ್ದರು. 'ಇವರನ್ನು ಇಲ್ಲಿನ ಪ್ರಚಾರ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ' ಎಂದು ಅರ್ಜುನ್ ಹೇಳಿದ್ದರು. ಇದರಿಂದಾಗಿ ಪಕ್ಷವು ಟೀಕೆಗೆ ಗುರಿಯಾಗಿತ್ತು. 'ಒಂದು ವೇಳೆ ಶ್ರೀಕಾಂತ್ ಅವರಿಗೆ ಪಕ್ಷದಲ್ಲಿ ಯಾವುದಾದರೂ ಸ್ಥಾನ ನೀಡಿದ್ದರೆ ಅದನ್ನು ತಕ್ಷಣದಿಂದಲೇ ತಡೆಹಿಡಿಯಬೇಕು' ಎಂದು ಮುಖ್ಯಮಂತ್ರಿ ಶಿಂದೆ ಸೂಚಿಸಿದ್ದಾರೆ. ಆದರೆ, ಶ್ರೀಕಾಂತ್, ಪಕ್ಷದ ಸದಸ್ಯರಾಗಿ ಮುಂದುವರಿಯಲಿದ್ದಾರೆಯೇ ಎನ್ನುವುದನ್ನು ಶಿವಸೇನಾ ಸ್ಪಷ್ಟಪಡಿಸಿಲ್ಲ.

ರಾಷ್ಟ್ರಪತಿ ಆಳ್ವಿಕೆ ಹೇರುವ ಹುನ್ನಾರ: ರಾವುತ್

ರಾವುತ್

ಮುಂಬೈ: 'ಮಹಾ ವಿಕಾಸ ಆಘಾಡಿ'ಯು (ಎಂವಿಎ) ಸರ್ಕಾರ ರಚಿಸುವುದನ್ನು ತಡೆಯಲು ಮಹಾರಾಷ್ಟ್ರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಇದಕ್ಕೆ ಅನುಗುಣವಾಗಿಯೇ ಚುನಾವಣಾ ಆಯೋಗವು ಚುನಾವಣಾ ದಿನಾಂಕಗಳನ್ನು ಘೋಷಿಸಿದೆ' ಎಂದು ಶಿವಸೇನಾ (ಉದ್ಧವ್ ಬಣ) ಸಂಸದ ಸಂಜಯ್ ರಾವುತ್ ಭಾನುವಾರ ಗಂಭೀರ ಆರೋಪ ಮಾಡಿದರು.

'ರಾಜ್ಯದ 14ನೇ ವಿಧಾನಸಭೆ ಅವಧಿಯು ನ.26ಕ್ಕೆ ಮುಕ್ತಾಯಗೊಳ್ಳಲಿದೆ. ಮತದಾನವು ನ.20ರಂದು ನಡೆಯಲಿದೆ. ಫಲಿತಾಂಶವು 23ಕ್ಕೆ ಹೊರಬೀಳಲಿದೆ. ಹೊಸ ಸರ್ಕಾರ ರಚಿಸಲು ಎಂವಿಎ ಬಳಿ ಕೇವಲ 48 ಗಂಟೆಗಳು ಇರಲಿವೆ. ಒಂದು ವೇಳೆ ಈ ಅವಧಿಯೊಳಗೆ ಹೊಸ ಸರ್ಕಾರ ರಚಿಸದಿದ್ದರೆ, ರಾಜ್ಯಪಾಲರು ರಾಷ್ಟ್ರಪತಿ ಆಳ್ವಿಕೆ ಹೇರಲು ಶಿಫಾರಸು ಮಾಡುತ್ತಾರೆ' ಎಂದು ರಾವುತ್ ಹೇಳಿದರು.

'ಮಹಾಯುತಿ' ಸರ್ಕಾರವು ಮತ್ತೊಮ್ಮೆ ಅಧಿಕಾರಕ್ಕೆ ಬರುವುದಿಲ್ಲ ಎನ್ನುವ ಸತ್ಯ ಆ ಮೂರೂ ಪಕ್ಷಗಳಿಗೆ ತಿಳಿದಿದೆ. ಚುನಾವಣಾ ಆಯೋಗವು ಬಿಜೆಪಿಯ ವಕ್ತಾರರಂತೆ ವರ್ತಿಸುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಲನ್ನು ಒಪ್ಪಿಕೊಂಡಂತೆ ತೋರುತ್ತಿದೆ. ಅದಕ್ಕಾಗಿಯೇ ರಾಷ್ಟ್ರಪತಿ ಆಳ್ವಿಕೆ ಹೇರುವ ತಂತ್ರ ಹೆಣೆದಿದ್ದಾರೆ' ಎಂದರು.

ದೆಹಲಿ: ಸಿಆರ್‌ಪಿಎಫ್ ಶಾಲೆ ಬಳಿ ಸ್ಫೋಟ

ಭಯಭೀತರಾದ ಜನ • 'ರಾಸಾಯನಿಕ ವಸ್ತು'ವೊಂದರ ವಾಸನೆ– ಆತಂಕ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ರೋಹಿಣಿ ಪ್ರದೇಶದಲ್ಲಿರುವ ಸಿಆರ್‌ಪಿಎಫ್ ಶಾಲೆ ಬಳಿ ಭಾನುವಾರ ಬೆಳಿಗ್ಗೆ ಸಂಭವಿಸಿದ ಸಂಶಯಾಸ್ಪದ ಭಾರಿ ಸ್ಫೋಟ ಜನರಲ್ಲಿ ಆತಂಕಕ್ಕೆ ಕಾರಣವಾಯಿತು.

ರೋಹಿಣಿ ಪ್ರದೇಶದ ಪ್ರಶಾಂತ್ ವಿಹಾರದಲ್ಲಿ ಬೆಳಗಿನ 7.45ರ ಸುಮಾರಿಗೆ ಸ್ಫೋಟ ಸಂಭವಿಸಿದ್ದು, ಶಾಲೆಯ ಆವರಣ ಗೋಡೆ ಹಾಗೂ ಸಮೀಪದ ಕೆಲ ಅಂಗಡಿಗಳಿಗೆ ಹಾನಿಯುಂಟಾಗಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ.

ಭಾರಿ ಸ್ಫೋಟದ ಸದ್ದು ಹಾಗೂ ಸ್ಥಳದಲ್ಲಿ ದಟ್ಟವಾದ ಬಿಳಿ ಹೊಗೆಯಿಂದ ಗಾಬರಿಗೊಂಡ ಜನರು, ಮನೆಗಳಿಂದ ಹೊರಗೆ ಓಡಿ ಬಂದರು.

'ಸ್ಫೋಟದ ತೀವ್ರತೆಯಿಂದಾಗಿ ಉಂಟಾದ ಕಂಪನ, ಘಟನಾ ಸ್ಥಳದಿಂದ ದೂರವಿರುವ ಮನೆಗಳಲ್ಲಿಯೂ ಅನುಭವಕ್ಕೆ ಬಂತು. ರಾಸಾಯನಿಕ ವಸ್ತುವೊಂದರ ವಾಸನೆಯಿಂದ ಕೂಡಿದ ಬಿಳಿ ಬಣ್ಣದ ದಟ್ಟ ಹೊಗೆ ಘಟನಾ ಸ್ಥಳದಲ್ಲಿ ತುಂಬಿಕೊಂಡಿತ್ತು' ಎಂಬ ಪ್ರತ್ಯಕ್ಷದರ್ಶಿಗಳ ಹೇಳಿಕೆಯನ್ನು ಉಲ್ಲೇಖಿಸಿ ಪಿಟಿಐ ವರದಿ ಮಾಡಿದೆ.

ದೆಹಲಿಯ ಪ್ರಶಾಂತ್ ವಿಹಾರ ಪ್ರದೇಶದಲ್ಲಿರುವ ಸಿಆರ್‌ಪಿಎಫ್ ಶಾಲೆ ಬಳಿ ಸ್ಫೋಟ ಸಂಭವಿಸಿದ ಸ್ಥಳಕ್ಕೆ ವಿಧಿವಿಜ್ಞಾನ ತಜ್ಞರು ಭಾನುವಾರ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದರು ಪಿಟಿಐ ಚಿತ್ರ

'ನಂಬಲಸಾಧ್ಯವಾದ ಭಾರಿ ಸದ್ದು ಕೇಳಿಬಂತು. ನಂತರ 15–20 ನಿಮಿಷ ಎಲ್ಲೆಡೆ ದಟ್ಟವಾದ ಹೊಗೆ ತುಂಬಿತ್ತು' ಎಂದು ಅಲ್ಲಿನ ನಿವಾಸಿ ಕಿರಣ್ ಸಚದೇವ್ ಹೇಳಿದ್ದಾರೆ.

'ಸ್ಫೋಟ, ದಟ್ಟ ಹೊಗೆ ಕಂಡು ಬಂದ ಕೂಡಲೇ ನಾನು ಘಟನಾ ಸ್ಥಳಕ್ಕೆ ಓಡಿ ಹೋದೆ. ಅದೇ ವೇಳೆ, ಕಿಟಕಿ ಗಾಜುಗಳು, ಬೋರ್ಡ್‌ಗಳು ಮುರಿದು ಬಿದ್ದವು. ಗಾಬರಿಗೊಂಡ ನಾನು ನನ್ನ ಅಂಗಡಿಯತ್ತ ಓಡಿಬಂದೆ' ಎಂದು ಅಂಗಡಿ ಮಾಲೀಕ ಹಿಮಾಂಶು ಕೊಹ್ಲಿ ಹೇಳಿದ್ದಾರೆ.

ವಿಧಿವಿಜ್ಞಾನ ಪ್ರಯೋಗಾಲಯದ ತಂಡ, ದೆಹಲಿ ಪೊಲೀಸ್‌ನ ಕ್ರೈಂ ವಿಭಾಗ ಮತ್ತು ಬಾಂಬ್ ನಿಷ್ಕ್ರಿಯ ದಳದ ತಂಡಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿವೆ. ಎನ್‌ಐಎ, ಎನ್‌ಎಸ್‌ಜಿಯ ಹಿರಿಯ ಅಧಿಕಾರಿಗಳು, ದೆಹಲಿ ಅಗ್ನಿ ಸೇವೆಗಳ ಅಧಿಕಾರಿಗಳು ಕೂಡ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

'ಸ್ಫೋಟಗೊಂಡಿರುವುದು ಕಚ್ಚಾ ಬಾಂಬ್ ಅಥವಾ ಪಟಾಕಿಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಸ್ಫೋಟದ ಸ್ವರೂಪ ಖಚಿತಪಡಿಸಿಕೊಳ್ಳುವುದಕ್ಕಾಗಿ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಎಪಿ ಆರೋಪ

ರೋಹಿಣಿ ಪ್ರದೇಶದಲ್ಲಿ ಸಂಭವಿಸಿದ ಸ್ಫೋಟ ಕುರಿತಂತೆ ಆಡಳಿತಾರೂಢ ಆಮ್ ಆದ್ಮಿ ಪಕ್ಷ (ಎಎಪಿ), ಕೇಂದ್ರ ಸರ್ಕಾರದ ವಿರುದ್ಧ ಟೀಕೆ ಮಾಡಿದೆ.

'ಈ ಘಟನೆ ದೆಹಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಕುಸಿದಿರುವುದನ್ನು ತೋರಿಸುತ್ತದೆ' ಎಂದು ಮುಖ್ಯಮಂತ್ರಿ ಆತಿಶಿ ಆರೋಪಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉಗ್ರರ ದಾಳಿ: ವೈದ್ಯ, ಆರು ಕಾರ್ಮಿಕರ ಸಾವು

ಶ್ರೀನಗರ: ಕೇಂದ್ರ ಕಾಶ್ಮೀರದ ಗಾಂದರಬಲ್ ಜಿಲ್ಲೆಯಲ್ಲಿ ಉಗ್ರರು ಭಾನುವಾರ ನಡೆಸಿದ ದಾಳಿಯಲ್ಲಿ ಒಬ್ಬ ವೈದ್ಯ ಹಾಗೂ ಆರು ಕಾರ್ಮಿಕರು ಮೃತಪಟ್ಟು, ಇತರ ಇಬ್ಬರು ಗಾಯಗೊಂಡಿದ್ದಾರೆ.

ಜಿಲ್ಲೆಯ ಗುಂಡ್ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿರುವ ಸುರಂಗದ ಸಮೀಪ ಈ ದಾಳಿ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಬ್ಬರು ಉಗ್ರರು ಈ ಕೃತ್ಯ ನಡೆಸಿರುವ ಸಾಧ್ಯತೆ ಇದೆ. ಸ್ಥಳೀಯ ಹಾಗೂ ಹೊರರಾಜ್ಯದ ಕಾರ್ಮಿಕರಿದ್ದ ಗುಂಪಿನ ಮೇಲೆ ಉಗ್ರರು ಮನಬಂದಂತೆ ಗುಂಡಿನ ದಾಳಿ ನಡೆಸಿದ್ದಾರೆ.

ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟರು. ನಾಲ್ವರು ಕಾರ್ಮಿಕರು ಹಾಗೂ ವೈದ್ಯರೊಬ್ಬರು ಗಾಯಗಳಿಂದಾಗಿ ಕೊನೆಯುಸಿರೆಳೆದರು. ಐವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ದಾಳಿ ಸುದ್ದಿ ತಿಳಿಯುತ್ತಿದ್ದಂತೆಯೇ, ಭದ್ರತಾ ಪಡೆಗಳು ಸ್ಥಳಕ್ಕೆ ಧಾವಿಸಿ, ಉಗ್ರರ ಪತ್ತೆಗೆ ಕಾರ್ಯಾಚರಣೆ ಆರಂಭಿಸಿವೆ.

ಜೈಪುರದಲ್ಲಿ ಅಪಘಾತ: ಒಂದೇ ಕುಟುಂಬದ 12 ಮಂದಿ ಸಾವು

ಜೈಪುರ (ಪಿಟಿಐ): ರಾಜಸ್ಥಾನದ ಧೋಲ್ಪುರ ಜಿಲ್ಲೆಯಲ್ಲಿ ಬಸ್ ಹಾಗೂ ಟೆಂಪೊ ನಡುವೆ ಸಂಭವಿಸಿದ ಅಪಘಾತದಲ್ಲಿ ಎಂಟು ಮಕ್ಕಳು ಸೇರಿದಂತೆ ಒಂದೇ ಕುಟುಂಬದ 12 ಮಂದಿ ಮೃತಪಟ್ಟಿದ್ದಾರೆ.

ಜೈಪುರದಿಂದ ಗ್ವಾಲಿಯರ್ ಕಡೆಗೆ ಶನಿವಾರ ರಾತ್ರಿ ವೇಗವಾಗಿ ಹೋಗುತ್ತಿದ್ದ ಸ್ಲೀಪರ್ ಕೋಚ್ ಬಸ್ ಸುಮಿಪುರ ಸಮೀಪ ಟೆಂಪೊಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸ್ ಅಧಿಕಾರಿ ಶಿವಲಹರಿ ಮೀನಾ ತಿಳಿಸಿದ್ದಾರೆ.

ಸಂತ್ರಸ್ತರೆಲ್ಲರೂ ಕರೀಂ ಗುಮ್ಮತ್ ಕಾಲೋನಿಯ ನಿವಾಸಿಗಳಾಗಿದ್ದು, ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಇವರೆಲ್ಲರೂ ಬರೌಲಿ ಗ್ರಾಮದಲ್ಲಿ ನಡೆದ ವಿವಾಹ ಸಮಾರಂಭ ಮುಗಿಸಿ ವಾಪಸಾಗುತ್ತಿದ್ದರು.

ಮಣಿಪುರದಲ್ಲಿ ಎರಡು ಫಾರ್ಮ್‌ಹೌಸ್‌ಗಳಿಗೆ ಬೆಂಕಿ

ಇಂಫಾಲ್ (ಪಿಟಿಐ): ಮಣಿಪುರದ ಜಿರಿಬಾಮ್ ಜಿಲ್ಲೆಯ ನುಂಗ್ಬಾಲ್‌ನಲ್ಲಿ, ಹಿಲ್‌ಘಾಟ್ ಗ್ರಾಮ ಪಂಚಾಯಿತಿಯ ಪ್ರಧಾನರಾದ ಎಲ್. ಸೊಮೊರೆಂಡ್ರೊ ಅವರಿಗೆ ಸೇರಿದ ಎರಡು ಫಾರ್ಮ್ ಹೌಸ್‌ಗಳಿಗೆ ದುಷ್ಕರ್ಮಿಗಳು ಶನಿವಾರ ತಡರಾತ್ರಿ ಬೆಂಕಿ ಹಚ್ಚಿದ್ದಾರೆ.

ಭದ್ರತಾ ಪಡೆಗಳು ಸ್ಥಳಕ್ಕೆ ಬಂದಿದ್ದು, ತನಿಖೆ ನಡೆಸಿವೆ ಎಂದು ಪೊಲೀಸ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಬೊರೊಬೆಕ್ರಾ ಪೊಲೀಸ್ ಠಾಣೆ ಸಮೀಪದ ಗ್ರಾಮವೊಂದರ ಮೇಲೆ ಶನಿವಾರ ಬೆಳಿಗ್ಗೆ ಬಾಂಬ್ ದಾಳಿ ನಡೆಸಿದ್ದು, ಭದ್ರತಾ ಪಡೆಗಳೊಂದಿಗೆ ಗುಂಡಿನ ಚಕಮಕಿ ನಡೆದಿದೆ.

ಥೌಬಲ್‌ನಲ್ಲಿ ಶಸ್ತ್ರಾಸ್ತ್ರ ವಶ: ಥೌಬಲ್ ಜಿಲ್ಲೆಯಲ್ಲಿ ಕೈಗೊಂಡ ಶೋಧ ಕಾರ್ಯಾಚರಣೆ ಸಮಯದಲ್ಲಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭದ್ರತಾ ಪಡೆಗಳು ಶೋಧ ನಡೆಸಿದಾಗ 9 ಎಂಎಂ ಪಿಸ್ತೂಲ್, ನಾಲ್ಕು ಗ್ರೆನೇಡ್ (ಕೈ ಬಾಂಬು), ಸ್ಮೋಕ್ ಗ್ರೆನೇಡ್ ಇತ್ಯಾದಿಗಳು ಸಿಕ್ಕಿವೆ.

ಬಾಬಾ ಸಿದ್ದೀಕಿ ಹತ್ಯೆ ಮತ್ತೊಬ್ಬನ ಬಂಧನ

ಮುಂಬೈ (ಪಿಟಿಐ): ಬಾಬಾ ಸಿದ್ದೀಕಿ ಹತ್ಯೆ ಪ್ರಕರಣ ಸಂಬಂಧ ಮುಂಬೈ ಅಪರಾಧ ವಿಭಾಗದ ಪೊಲೀಸರು ಭಾನುವಾರ ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದು, ಬಂಧಿತರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಶೂಟರ್‌ಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡಿದ ಆರೋಪದ ಮೇಲೆ ಗುಜರಿ ವ್ಯಾಪಾರಿ ಭಾಗ್ವತ್ ಸಿಂಗ್ ಓಂ ಸಿಂಗ್ (32) ಎಂಬಾತನನ್ನು ಬಂಧಿಸಲಾಗಿದೆ. ಈತ ನವಿಮುಂಬೈ ನಿವಾಸಿಯಾಗಿದ್ದು, ರಾಜಸ್ಥಾನದ ಉದಯಪುರದ ಮೂಲದವರು.

ಅ.26ರವರೆಗೆ ಪೊಲೀಸ್ ವಶಕ್ಕೆ ಕೋರ್ಟ್ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿದ್ದೀಕಿ ಹತ್ಯೆಗೆ ಶಸ್ತ್ರಾಸ್ತ್ರ ಪೂರೈಕೆ ಹಾಗೂ ಇನ್ನಿತರ ಬೆಂಬಲ ನೀಡಿದ ಆರೋಪದ ಮೇಲೆ ಮುಂಬೈ ನಗರ ಪ್ರದೇಶದ ಐವರು ಸೇರಿದಂತೆ ವಿವಿಧ ಸ್ಥಳಗಳಿಂದ ಹಲವರನ್ನು ಬಂಧಿಸಲಾಗಿದೆ.

ಶಂಕಿತ ಶೂಟರ್‌ಗಳಾದ ಗುರ್ಮೈಲ್ ಬಲ್ಜಿತ್ ಸಿಂಗ್ (23) ಮತ್ತು ಧರ್ಮರಾಜ್ ರಾಜೇಶ್ ಕಶ್ಯಪ್ (19) ಈಗಾಗಲೇ ಪೊಲೀಸ್ ವಶದಲ್ಲಿದ್ದಾರೆ. ಮುಖ್ಯ ಶೂಟರ್ ಶಿವಕುಮಾರ್ ಗೌತಮ್ ಮತ್ತು ಇತರೆ ಇಬ್ಬರು ತಲೆ ಮರೆಸಿಕೊಂಡಿದ್ದಾರೆ.

ಬಹರಾಯಿಚ್: ಹತ್ಯೆ ಆರೋಪಿ ಸೇರಿದಂತೆ ಅನೇಕರಿಗೆ ಮನೆ ತೆರವು ಮಾಡಲು ನೋಟಿಸ್

ಅಂಗಡಿ ಖಾಲಿ ಮಾಡುತ್ತಿರುವ ಮಾಲೀಕರು

ಲಖನೌ/ಬಹರಾಯಿಚ್ (ಪಿಟಿಐ): ಉತ್ತರ ಪ್ರದೇಶದ ಬಹರಾಯಿಚ್ ಜಿಲ್ಲೆಯಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕೆಲವು ಮಳಿಗೆಗಳನ್ನು ತೆರವುಗೊಳಿಸಲು ಆದೇಶಿಸಿರುವುದರಿಂದ ಮಾಲೀಕರು ತಮ್ಮ ಅಂಗಡಿಗಳಲ್ಲಿದ್ದ ಸರಕನ್ನು ತೆಗೆದುಕೊಂಡು ಹೋದರು.

ಈಚೆಗೆ ಬಹರಾಯಿಚ್‌ನ ಮಹಾರಾಜಗಂಜ್‌ನಲ್ಲಿ ದುರ್ಗಾ ಮೂರ್ತಿಯ ಮೆರವಣಿಗೆ ವೇಳೆ ನಡೆದ ಕೋಮು ಹಿಂಸಾಚಾರದಲ್ಲಿ 22 ವರ್ಷದ ರಾಮ್ ಗೋಪಾಲ್ ಮಿಶ್ರಾ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಘಟನೆಗೆ ಸಂಬಂಧಿಸಿದಂತೆ ಶುಕ್ರವಾರದವರೆಗೆ ಪೊಲೀಸರು ಒಟ್ಟು 87 ಜನ ಆರೋಪಿಗಳನ್ನು ಬಂಧಿಸಿದ್ದಾರೆ.

ಈ ಘಟನೆ ಬಳಿಕ ಸ್ಥಳೀಯ ಆಡಳಿತವು, ಈ ಪ್ರದೇಶದಲ್ಲಿ ಸರ್ಕಾರಿ ಭೂಮಿಯನ್ನು ಅತಿಕ್ರಮಿಸಿಕೊಂಡು ನಿರ್ಮಿಸಿರುವ ಎಲ್ಲ ಮನೆಗಳು ಹಾಗೂ ಅಂಗಡಿಗಳ ತೆರವಿಗೆ ಮುಂದಾಗಿದೆ. ಇದರಲ್ಲಿ ಹಿಂಸಾಚಾರದಲ್ಲಿ ಭಾಗಿಯಾಗಿರುವ ಆರೋಪಿಗಳ ಮನೆ, ಅಂಗಡಿಗಳೂ ಸೇರಿವೆ.

ಮಹ್ಸಿ ಬಿಜೆಪಿ ಶಾಸಕ ಸುರೇಶ್ವರ್ ಸಿಂಗ್ ಮಾತನಾಡಿ, 'ಜನರು ತಮ್ಮ ಅಂಗಡಿಗಳನ್ನು ಖಾಲಿ ಮಾಡುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯು ತೆರವುಗೊಳಿಸಲು ಆದೇಶಿಸಿರುವ ಒಟ್ಟು 23 ಅಂಗಡಿಗಳ ಪೈಕಿ 20 ಅಂಗಡಿಗಳು ಮುಸ್ಲಿಂ ಮತ್ತು ಮೂರು ಅಂಗಡಿಗಳು ಹಿಂದೂಗಳಿಗೆ ಸೇರಿವೆ' ಎಂದರು.

ಬಹರಾಯಿಚ್‌ನ ಮಹಾರಾಜ್‌ಗಂಜ್‌ನಲ್ಲಿ ಅಂಗಡಿ ಖಾಲಿ ಮಾಡುವಂತೆ ಲೋಕೋಪಯೋಗಿ ಇಲಾಖೆ ನೋಟಿಸ್ ನೀಡಿರುವ ಕಾರಣ ಅಂಗಡಿಯಲ್ಲಿದ್ದ ಸರಕನ್ನು ಮಾಲೀಕರು ಕೊಂಡೊಯ್ದರು ಪಿಟಿಐ ಚಿತ್ರ

ಲೋಕೋಪಯೋಗಿ ಇಲಾಖೆಯು ಶುಕ್ರವಾರ ಮಹಾರಾಜ್‌ಗಂಜ್ ಪ್ರದೇಶದಲ್ಲಿ ತಪಾಸಣೆ ನಡೆಸಿದೆ. ರಾಮ್‌ಗೋಪಾಲ್ ಮಿಶ್ರಾ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರೋಪಿ ಅಬ್ದುಲ್ ಹಮೀದ್ ಅವರು ಅತಿಕ್ರಮಣ ಮಾಡಿರುವ ಜಾಗದಲ್ಲಿ ಮನೆ ನಿರ್ಮಿಸಿರುವುದು ಕಂಡು ಬಂದಿದ್ದು, ಮೂರು ದಿನಗಳ ಒಳಗಾಗಿ ಖಾಲಿ ಮಾಡುವಂತೆ ಅವರ ಕುಟುಂಬಕ್ಕೆ ನೋಟಿಸ್ ನೀಡಲಾಗಿದೆ.

ಆದರೆ, ಇದು ರಸ್ತೆ ಜಾಗವನ್ನು ಅತಿಕ್ರಮಣ ಮಾಡಿ ನಿರ್ಮಿಸಿರುವ ಕಟ್ಟಡಗಳ ತೆರವಿಗೆ ಪ್ರತಿ ವರ್ಷ ನಡೆಸುವ ಸಾಮಾನ್ಯ ತಪಾಸಣೆಯಾಗಿದೆ. ಅಕ್ರಮವಾಗಿ ನಿರ್ಮಿಸಿರುವ ಮನೆಗಳಿಗೆ ರಸ್ತೆ ನಿಯಂತ್ರಣ ಕಾಯ್ದೆ–1964ರ ಅಡಿಯಲ್ಲಿ ನೋಟಿಸ್ ನೀಡಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜೈಪುರದಲ್ಲೂ ಕಟ್ಟಡ ನೆಲಸಮ

ಜೈಪುರ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬಂಧಿತರಾಗಿರುವ ಆರೋಪಿಗಳಿಗೆ ಸೇರಿದ ಕಟ್ಟಡದ ಒಂದು ಭಾಗವನ್ನು ನೆಲಸಮಗೊಳಿಸಲಾಗಿದೆ. ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಕಟ್ಟಡದ ಒಂದು ಭಾಗವನ್ನು ನಿರ್ಮಿಸಲಾಗಿದೆ ಎಂದು ಹೇಳಲಾಗಿದೆ.

ಜೈಪುರದ ಕರ್ಣಿ ವಿಹಾರ ದೇವಸ್ಥಾನದಲ್ಲಿ ಗುರುವಾರ ರಾತ್ರಿ ಆಯೋಜಿಸಲಾಗಿದ್ದ ಶರದ್ ಪೂರ್ಣಿಮಾ ಕಾರ್ಯಕ್ರಮಕ್ಕೆ ನುಗ್ಗಿದ ಹಲವರು ಅಲ್ಲಿದ್ದ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಚಾಕು ಹಾಗೂ ಇತರ ಆಯುಧಗಳಿಂದ ದಾಳಿ ನಡೆಸಿದ್ದರು. 10 ಜನ ಆರ್‌ಎಸ್‌ಎಸ್ ಕಾರ್ಯಕರ್ತರು ಗಾಯಗೊಂಡಿದ್ದರು. ಬಳಿಕ ಆರೋಪಿಗಳಾದ ನಸೀಬ್ ಚೌಧರಿ, ಅವರ ಪತ್ನಿ ನಿರ್ಮಲಾ ಹಾಗೂ ಮಗ ಭೀಶಮ್ ಚೌಧರಿಯನ್ನು ಪೊಲೀಸರು ಬಂಧಿಸಿದ್ದಾರೆ.

ನಸೀಬ್ ಚೌಧರಿಯು ದೇವಸ್ಥಾನದ ಜಮೀನಿನ ಒಂದು ಭಾಗವನ್ನು ಮತ್ತು ಉದ್ಯಾನವನ್ನು ಒತ್ತುವರಿ ಮಾಡಿಕೊಂಡು ಕಟ್ಟಡವೊಂದನ್ನು ನಿರ್ಮಿಸಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದರು.

ದೇವಸ್ಥಾನದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಬಳಿಕ ಜೈಪುರ ಅಭಿವೃದ್ಧಿ ಪ್ರಾಧಿಕಾರವು ಸ್ಥಳದಲ್ಲಿ ಪರಿಶೀಲನೆ ನಡೆಸಿತು. ಒತ್ತುವರಿ ಮಾಡಿರುವುದು ತಿಳಿದ ಬಳಿಕ 24 ಗಂಟೆಯೊಳಗೆ ಉತ್ತರಿಸುವಂತೆ ಚೌಧರಿಗೆ ನೋಟಿಸ್ ನೀಡಿತ್ತು. ಆದರೆ, ನೋಟಿಸ್‌ಗೆ ಯಾವುದೇ ಪ್ರತಿಕ್ರಿಯೆ ಬಾರದ ಕಾರಣಕ್ಕೆ ಕಟ್ಟಡದ ಭಾಗವನ್ನು ನೆಲಸಮಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರ ವಿಗ್ರಹಗಳ ಧ್ವಂಸ

ಭಾಗಲ್ಪುರ (ಪಿಟಿಐ): ಬಿಹಾರದ ಭಾಗಲ್ಪುರ ಜಿಲ್ಲೆಯ ದೇವಸ್ಥಾನವೊಂದರಲ್ಲಿ ಅಪರಿಚಿತ ವ್ಯಕ್ತಿಗಳು ದೇವರ ವಿಗ್ರಹಗಳನ್ನು ಧ್ವಂಸಗೊಳಿಸಿರುವ ಘಟನೆ ನಡೆದಿದ್ದು, ಇದನ್ನು ಖಂಡಿಸಿ ಸ್ಥಳೀಯರು ಭಾನುವಾರ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ಸನ್‌ಹೌಲ ಪೊಲೀಸ್ ಠಾಣಾ ವ್ಯಾಪ್ತಿಯ ದೇವಸ್ಥಾನದಲ್ಲಿ ಶನಿವಾರ ರಾತ್ರಿ ಈ ಘಟನೆ ನಡೆದಿದೆ. ಅಪರಿಚಿತರು ದೇವಸ್ಥಾನಕ್ಕೆ ನುಗ್ಗಿ ಅಲ್ಲಿದ್ದ ವಿಗ್ರಹಗಳನ್ನು ಧ್ವಂಸಗೊಳಿಸಿ ಪರಾರಿಯಾಗಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದು ಒಬ್ಬ ಶಂಕಿತ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ವಿಷಯ ತಿಳಿಯುತ್ತಿದ್ದಂತೆ ಜನರು ಭಾನುವಾರ ಅಪಾರ ಸಂಖ್ಯೆಯಲ್ಲಿ ಸನ್‌ಹೌಲ ಪೊಲೀಸ್ ಠಾಣೆ ಮುಂದೆ ಜಮಾಯಿಸಿ ಪ್ರತಿಭಟಿಸಿದರು. ಈ ವೇಳೆ ಪ್ರತಿಭಟನಕಾರರು ರಸ್ತೆಗಳನ್ನು ಬಂದ್ ಮಾಡಿ ಟೈರ್‌ಗಳನ್ನು ಸುಟ್ಟು ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಈಗ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಪೊಲೀಸರು ಹೇಳಿದರು.

'ಚುನಾವಣೆಗೆ ನಿಲ್ಲುವುದಕ್ಕಾಗಿ ರಾಜೀನಾಮೆ ನೀಡುವುದು ಸಲ್ಲ'

ಅಹಮದಾಬಾದ್ (ಪಿಟಿಐ): ನ್ಯಾಯಮೂರ್ತಿಗಳು ಚುನಾವಣೆಗಳಿಗೆ ಸ್ಪರ್ಧಿಸಲು ತಮ್ಮ ಹುದ್ದೆಗೆ ರಾಜೀನಾಮೆ ನೀಡುವುದು ಅವರ ನಿಷ್ಪಕ್ಷಪಾತ ನಡೆಯ ಬಗ್ಗೆ ಇರುವ ಸಾರ್ವಜನಿಕ ನಂಬಿಕೆ ಮೇಲೂ ಪರಿಣಾಮ ಬೀರಬಹುದು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅಭಿಪ್ರಾಯಪಟ್ಟಿದ್ದಾರೆ.

ನ್ಯಾಯಮೂರ್ತಿ ಬಿ.ಆರ್.ಗವಾಯಿ

ಗುಜರಾತ್‌ನ ನ್ಯಾಯಮೂರ್ತಿಗಳ ವಾರ್ಷಿಕ ಸಮ್ಮೇಳನದಲ್ಲಿ ಶನಿವಾರ ಮಾತನಾಡಿದ ಅವರು, ನ್ಯಾಯಾಂಗದ ಮೌಲ್ಯಗಳು ಮತ್ತು ನ್ಯಾಯಪರತೆಯು ಕಾನೂನು ವ್ಯವಸ್ಥೆಯ ವಿಶ್ವಾಸಾರ್ಹತೆ ಎತ್ತಿಹಿಡಿಯುವ ಮೂಲಭೂತ ಸ್ತಂಭಗಳಾಗಿವೆ ಎಂದೂ ಹೇಳಿದ್ದಾರೆ.

'ನ್ಯಾಯಮೂರ್ತಿಗಳು ಪೀಠದಲ್ಲಿರುವಾಗ ಮತ್ತು ಪೀಠದ ಹೊರಗಿರುವಾಗಲೂ ನ್ಯಾಯಾಂಗದ ನೀತಿ ನಿಯಮಗಳ ಅತ್ಯುನ್ನತ ಮಾನದಂಡಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕು. ನ್ಯಾಯಮೂರ್ತಿಗಳು ತಮ್ಮ ಕಚೇರಿ ಅಥವಾ ಹೊರಗಡೆ ರಾಜಕಾರಣಿ ಅಥವಾ ಅಧಿಕಾರಿಯನ್ನು ಹೊಗಳಿದರೆ ಅದು ನ್ಯಾಯಾಂಗದಲ್ಲಿ ಸಾರ್ವಜನಿಕರಿಗೆ ಇರುವ ನಂಬಿಕೆಯ ಮೇಲೆ ಪರಿಣಾಮ ಬೀರಬಹುದು' ಎಂದು ಒತ್ತಿ ಹೇಳಿದ್ದಾರೆ.

ನಿರ್ದಿಷ್ಟ ಪ್ರಕರಣಗಳ ವ್ಯಾಪ್ತಿಯ ಆಚೆಗೆ, ಲಿಂಗ, ಧರ್ಮ, ಜಾತಿ ಮತ್ತು ರಾಜಕೀಯದಂತಹ ಸೂಕ್ಷ್ಮ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿಗಳು ವ್ಯಾಪಕ ಹೇಳಿಕೆಗಳನ್ನು ನೀಡುವುದು ಕಳವಳಕಾರಿ ಸಂಗತಿ ಎಂದರು.

'ನ್ಯಾಯಾಂಗ ಸ್ವತಂತ್ರವಾಗಿರಬೇಕು'

'ನ್ಯಾಯಾಂಗ ಸಂಸ್ಥೆಗಳ ಮೇಲಿನ ವಿಶ್ವಾಸಾರ್ಹತೆ ಕ್ಷೀಣಿಸುವಿಕೆ ಮತ್ತು ಸತ್ಯದ ಅವನತಿ ತಡೆಯುವ ಮಾರ್ಗಗಳು ಮತ್ತು ವಿಧಾನಗಳು' ವಿಷಯದ ಕುರಿತು ಮಾತನಾಡಿದ ನ್ಯಾ.ಗವಾಯಿ, ನ್ಯಾಯಾಂಗವು ಕಾರ್ಯಾಂಗ ಮತ್ತು ಶಾಸಕಾಂಗದಿಂದ ಸ್ವತಂತ್ರವಾಗಿ ಇರಬೇಕು. ರಾಜಕೀಯ ಹಸ್ತಕ್ಷೇಪ, ಶಾಸಕಾಂಗದ ಅತಿಕ್ರಮಣ ಅಥವಾ ಕಾರ್ಯಾಂಗದ ಹಸ್ತಕ್ಷೇಪದ ಮೂಲಕ ನ್ಯಾಯಾಂಗದ ಮೇಲಿನ ಅತಿಕ್ರಮಣವು ನಿಷ್ಪಕ್ಷಪಾತ ನ್ಯಾಯದ ಪರಿಕಲ್ಪನೆಯನ್ನು ದುರ್ಬಲಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕ್ರಿಕೆಟ್ ಇತಿಹಾಸದ ಪುಟ ಸೇರಿದ ಭಾರತದ ಹೋರಾಟ • ಯಂಗ್, ರಚಿನ್ ಮಿಂಚು

ಚಿನ್ನಸ್ವಾಮಿಯಲ್ಲಿ ಕಿವೀಸ್ ಪಡೆಗೆ ಜಯ



ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ ಮತ್ತು ವಿಲ್ ಯಂಗ್ ಅವರು ಜಯದ ಸಂಭ್ರಮದೊಂದಿಗೆ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದರು

ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

• ಗಿರೀಶ ದೊಡ್ಡಮನಿ

ಬೂಮ್ರಾ

ಬೆಂಗಳೂರು: ಭಾನುವಾರ ಬೆಳಿಗ್ಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತದ ಬೌಲರ್‌ಗಳು ತಮ್ಮ ಬತ್ತಳಿಕೆಯಲ್ಲಿದ್ದ ಎಲ್ಲ ಅಸ್ತ್ರಗಳನ್ನೂ ಪ್ರಯೋಗಿಸಿದರು. ಆದರೂ ಅವರಿಗೆ, ನ್ಯೂಜಿಲೆಂಡ್ ತಂಡವು ಭಾರತದ ನೆಲದಲ್ಲಿ ಮೂವತ್ತಾರು ವರ್ಷಗಳ ನಂತರ ಟೆಸ್ಟ್ ಪಂದ್ಯ ಜಯಿಸುವುದನ್ನು ತಡೆಯಲಾಗಲಿಲ್ಲ.

ರೋಹಿತ್ ಶರ್ಮಾ ಪಡೆ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ 107 ರನ್‌ಗಳ ಗುರಿ ಬೆನ್ನಟ್ಟಿದ ಕಿವೀಸ್ ಬಳಗವು 8 ವಿಕೆಟ್‌ಗಳ ಜಯಸಾಧಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ಗುರಿ ಚಿಕ್ಕದೆಂಬ ಅತಿ ಆತ್ಮವಿಶ್ವಾಸ ಅಥವಾ ಗಡಿಬಿಡಿಯನ್ನು ತೋರಿಸದ ಪ್ರವಾಸಿ ಬಳಗವು ಎಚ್ಚರಿಕೆಯ ಆಟದ ಮೂಲಕ ಗೆಲುವಿನ ಗಮ್ಯ ತಲುಪಿತು. ಕಳೆದ ಮೂರು ದಿನಗಳಲ್ಲಿ ಭಾರತ ತಂಡದವರ ಗಟ್ಟಿ ಮನೋಬಲ ಮತ್ತು ಛಲದ ಆಟವನ್ನು ಎದುರಿಸಿದ್ದ ಕಿವೀಸ್ ಪಡೆ ಸ್ವಲ್ಪ ಅಜಾಗರೂಕತೆ ತೋರಿದ್ದರೆ ಗೆಲುವನ್ನು ಕಿತ್ತುಕೊಳ್ಳಲು ರೋಹಿತ್ ಬಳಗ ಕಾದು ಕುಳಿತಿತ್ತು.

ಮೊದಲ ಇನಿಂಗ್ಸ್‌ನಲ್ಲಿ 46 ರನ್‌ಗಳಿಗೆ ಕುಸಿದ ಆತಿಥೇಯರು ಎರಡನೇಯ ಇನಿಂಗ್ಸ್‌ನಲ್ಲಿ 462 ರನ್‌ಗಳನ್ನು ಪೇರಿಸಿದ್ದ ಛಲದ ಆಟವು ಕ್ರಿಕೆಟ್‌ಪ್ರಿಯರ ಮನಗೆದ್ದಿತ್ತು. ಅದರಿಂದಾಗಿಯೇ ಕೊನೆ ದಿನದಾಟದಲ್ಲಿ ಪುಟ್ಟ ಗುರಿಯನ್ನೂ ರಕ್ಷಿಸಿಕೊಳ್ಳುವ ದಿಟ್ಟತನವನ್ನು ತಂಡವು ತೋರಬಹುದೆಂಬ ವಿಶ್ವಾಸದೊಂದಿಗೆ 18 ಸಾವಿರಕ್ಕೂ ಹೆಚ್ಚು ಮಂದಿ ಕ್ರೀಡಾಂಗಣದಲ್ಲಿ ಸೇರಿದ್ದರು.

ಆತಿಥೇಯ ಬೌಲರ್‌ಗಳು ಪ್ರತಿಯೊಂದು ಎಸೆತ ಹಾಕುವಾಗಲೂ ಪ್ರೇಕ್ಷಕರ ಗ್ಯಾಲರಿಯಿಂದ ಏಕಕಾಲಕ್ಕೆ ಚಪ್ಪಾಳೆಯ ಜೊತೆಗೆ ಹುರಿದುಂಬಿಸುವ ಪದಗಳು ಪ್ರತಿಧ್ವನಿಸುತ್ತಿದ್ದವು. ಅದಕ್ಕೆ ತಕ್ಕಂತೆ ಜಸ್‌ಪ್ರೀತ್ ಬೂಮ್ರಾ, ಕಿವೀಸ್ ನಾಯಕ ಟಾಮ್ ಲೇಥಮ್ ಅವರನ್ನು ಮೊದಲ ಓವರ್‌ನಲ್ಲಿಯೇ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. 13ನೇ ಓವರ್‌ನಲ್ಲಿ ಡೆವೊನ್ ಕಾನ್ವೆ ಅವರನ್ನು ಬೂಮ್ರಾ ಎಲ್‌ಬಿಡಬ್ಲ್ಯು ಮಾಡಿದರು.

ಆದರೆ ಇದಾದ ನಂತರ ಕಿವೀಸ್ ಬ್ಯಾಟರ್ ವಿಲ್ ಯಂಗ್ (ಔಟಾಗದೆ 48) ಮತ್ತು ಬೆಂಗಳೂರು ಮೂಲದ ರಚಿನ್ ರವೀಂದ್ರ (ಔಟಾಗದೆ 39) ಹೊಣೆಯರಿತು ಆಡಿದರು. ತಂಡವನ್ನು ಗೆಲುವಿನ ದಡ ಸೇರಿಸಿದರು. ನ್ಯೂಜಿಲೆಂಡ್ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲ ಬಾರಿಗೆ ಟೆಸ್ಟ್ ಜಯ ದಾಖಲಿಸಿತು. ಅಲ್ಲದೇ ಭಾರತದ ನೆಲದಲ್ಲಿ ಗೆದ್ದ 3ನೇ ಪಂದ್ಯವಿದು.

ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರೋಹಿತ್, 'ಈ ಸೋಲನ್ನು ಮರೆಯುತ್ತೇವೆ. ಸರಣಿಯಲ್ಲಿ ಉಳಿದಿರುವ ಮುಂದಿನ ಎರಡೂ ಪಂದ್ಯಗಳನ್ನು ಜಯಿಸುವತ್ತ ಹೆಚ್ಚು ಗಮನ ಹರಿಸುತ್ತೇವೆ. ಇಲ್ಲಿ ಒಂದೆರಡು ತಪ್ಪುಗಳನ್ನು ಮಾಡಿ ಅದರ ಶಿಕ್ಷೆ ಅನುಭವಿಸಿದ್ದೇವೆ. ಆದರೆ ಕುಸಿದು ಬಿದ್ದ ನಂತರ ಮರಳಿ ಪುಟಿದೆದ್ದು ಹೋರಾಡುವ ಮನೋಭಾವವನ್ನು ಮಾತ್ರ ಬದಲಿಸಿಕೊಳ್ಳುವುದಿಲ್ಲ' ಎಂದರು.

ಈ ಪಂದ್ಯದ ಮೊದಲ ದಿನವು ಮಳೆಗೆ ಸಂಪೂರ್ಣವಾಗಿ ಕೊಚ್ಚಿಹೋಗಿತ್ತು. ಎರಡನೇ ದಿನ ಟಾಸ್ ಗೆದ್ದ ರೋಹಿತ್ ಬ್ಯಾಟಿಂಗ್ ತೆಗೆದುಕೊಂಡಿದ್ದರು. 'ಪಿಚ್ ಸತ್ವ ಗ್ರಹಿಸುವಲ್ಲಿ ತಪ್ಪು ಮಾಡಿದೆ. ಬ್ಯಾಟಿಂಗ್ ನಿರ್ಧಾರ ನನ್ನದೇ ಆಗಿತ್ತು' ಎಂದು ಹೇಳಿದ್ದರು.

ತಮ್ಮ ನಾಯಕನ ತಪ್ಪು ಸರಿಪಡಿಸಲು ಬೌಲರ್‌ಗಳು ಮಾಡಿದ ಪ್ರಯತ್ನ ಕೈಗೂಡಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಕಿವೀಸ್ ಬಳಗವು ದೊಡ್ಡ ಮುನ್ನಡೆ ಪಡೆಯದಂತೆ ಕಟ್ಟಿಹಾಕಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ರಚಿನ್, ಡೆವೊನ್ ಕಾನ್ವೆ ಮತ್ತು ಟಿಮ್ ಸೌಥಿಯ ಉತ್ತಮ ಬ್ಯಾಟಿಂಗ್‌ನಿಂದಾಗಿ ಕಿವೀಸ್ 356 ರನ್‌ಗಳ ಮುನ್ನಡೆ ಸಾಧಿಸಿ 'ಇನಿಂಗ್ಸ್ ಜಯ'ದ ಕನಸು ಕಂಡಿತ್ತು. ಆದರೆ ಈ ವಿಷಯದಲ್ಲಿ ಕಿವೀಸ್‌ಗೆ ಹಿನ್ನಡೆಯಾಯಿತು. ಎರಡನೇ ಇನಿಂಗ್ಸ್‌ನಲ್ಲಿ ಸರ್ಫರಾಜ್ ಖಾನ್ (150 ರನ್) ಶತಕ, ಮೊಣಕಾಲಿನ ಗಾಯದ ನೋವಿನಲ್ಲಿಯೂ ಚೆಂದದ ಬ್ಯಾಟಿಂಗ್ ಮಾಡಿದ ರಿಷಭ್ ಪಂತ್ (99 ರನ್) ಮಿಂಚಿದ್ದರು. ಅವರಿಬ್ಬರ ಜೊತೆಯಾಟದಿಂದಾಗಿ ಮುನ್ನಡೆಯ ಮೊತ್ತ ಕರಗಿತ್ತು. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಅರ್ಧ-ಶತಕಗಳ ಕಾಣಿಕೆಯೂ ಅದರಲ್ಲಿತ್ತು. ಕೆಳಕ್ರಮಾಂಕದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸದ ಕಾರಣ ದೊಡ್ಡ ಗುರಿ ನೀಡಲು ಸಾಧ್ಯವಾಗಿರಲಿಲ್ಲ.

ಈ ಸೋಲಿನ ನಂತರವೂ ಭಾರತ, ವಿಶ್ವ ಟೆಸ್ಟ್ ಚಾಂಪಿಯನ್ ಷಿಪ್ ಪಟ್ಟಿಯಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದೆ.

ಮಳೆಯಿಂದ ಪಂದ್ಯ ವಿಳಂಬ: ಭಾನುವಾರ ಬೆಳಿಗ್ಗೆ ಮಳೆ ಸುರಿದ ಕಾರಣ ದಿನದಾಟವು ವಿಳಂಬವಾಗಿ ಶುರುವಾಯಿತು. 9.15ಕ್ಕೆ ಆರಂಭವಾಗಬೇಕಿದ್ದ ಆಟವನ್ನು 10.15ಕ್ಕೆ ಆರಂಭಿಸಲಾಯಿತು. ಬೆಂಗಳೂರಿನಲ್ಲಿ ಬೆಳಗಿನ ಜಾವದಿಂದಲೇ ಮಳೆ ಆರಂಭವಾಗಿತ್ತು.

ಸುಂದರ್‌ಗೆ ಸ್ಥಾನ: ನ್ಯೂಜಿಲೆಂಡ್ ಎದುರಿನ ಸರಣಿಯ ಉಳಿದೆರಡು ಟೆಸ್ಟ್ ಪಂದ್ಯಗಳಿಗೆ ತಂಡವನ್ನು ಪ್ರಕಟಿಸಲಾಗಿದೆ. ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಸ್ಥಾನ ನೀಡಲಾಗಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 46 (31.2 ಓವರ್‌ಗಳಲ್ಲಿ)
ನ್ಯೂಜಿಲೆಂಡ್: 402 (91.3 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ: 462 (99.3 ಓವರ್‌ಗಳಲ್ಲಿ)
ನ್ಯೂಜಿಲೆಂಡ್: 2ಕ್ಕೆ 110 (27.4 ಓವರ್‌ಗಳಲ್ಲಿ)
ಲೇಥಮ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (6ಎ)
ಕಾನ್ವೆ ಎಲ್‌ಬಿಡಬ್ಲ್ಯು ಬಿ ಬೂಮ್ರಾ 17 (39ಎ, 4x3)
ವಿಲ್ ಯಂಗ್ ಔಟಾಗದೇ 48 (76ಎ, 4x7, 6x1)
ರಚಿನ್ ರವೀಂದ್ರ ಔಟಾಗದೇ 39 (46ಎ, 4x6)
ಇತರೆ: 6 (ಬೈ 4, ಲೆಗ್‌ಬೈ 1, ನೋಬಾಲ್ 1)
ವಿಕೆಟ್ ಪತನ: 1-0 (ಟಾಮ್ ಲೇಥಮ್, 0.6), 2-35 (ಡೇವೊನ್ ಕಾನ್ವೆ 12.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 8–1–29–2, ಮೊಹಮ್ಮದ್ ಸಿರಾಜ್ 7–3–16–0, ರವೀಂದ್ರ ಜಡೇಜ 7.4–1–28–0, ಕುಲದೀಪ್ ಯಾದವ್ 3–0–26–0, ರವಿಚಂದ್ರನ್ ಅಶ್ವಿನ್ 2–0–6–0
ಪಂದ್ಯದ ಆಟಗಾರ: ರಚಿನ್ ರವೀಂದ್ರ

ಫಲಿತಾಂಶ: ನ್ಯೂಜಿಲೆಂಡ್‌ಗೆ ಎಂಟು ವಿಕೆಟ್‌ಗಳ ಜಯ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ–ಕಿವೀಸ್ ಟೆಸ್ಟ್		
ವರ್ಷ	ವಿಜೇತ ತಂಡ	ಜಯದ ಅಂತರ
1988	ಭಾರತ	172 ರನ್
1995	ಭಾರತ	8 ವಿಕೆಟ್
2012	ಭಾರತ	5 ವಿಕೆಟ್
2024	ನ್ಯೂಜಿಲೆಂಡ್	8 ವಿಕೆಟ್

ಭಾರತದ ನೆಲದಲ್ಲಿ ಕಿವೀಸ್ ಗೆದ್ದ ಟೆಸ್ಟ್‌ಗಳು		
ಫಲಿತಾಂಶ	ತಾಣ	ವರ್ಷ
167 ರನ್ ಜಯ	ನಾಗಪುರ	1969
136 ರನ್ ಜಯ	ವಾಂಖೆಡೆ	1988
8 ವಿಕೆಟ್ ಜಯ	ಬೆಂಗಳೂರು	2024

ಬೆಂಗಳೂರು ಅಭಿಮಾನಿಗಳಿಗೆ ಆಭಾರಿ: ರೋಹಿತ್

ಬೆಂಗಳೂರು: 'ಪಂದ್ಯದ ಮೊದಲ ದಿನವಿಡೀ ಮಳೆ ಸುರಿಯಿತು. ಆದರೆ ಕ್ರಿಕೆಟ್ ಅಭಿಮಾನಿಗಳು ಆಟದ ಆರಂಭಕ್ಕಾಗಿ ಕಾಯುತ್ತಲೇ ಇದ್ದರು. ಪಂದ್ಯ ನಡೆದ ಎಲ್ಲ ದಿನವೂ ಅಪಾರ ಸಂಖ್ಯೆಯಲ್ಲಿ ಸೇರಿ ನಮ್ಮನ್ನು ಬೆಂಬಲಿಸಿದರು. ಅವರಿಗೆ ನಾನು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ. ಅವರ ಅಭಿಮಾನಕ್ಕೆ ಆಭಾರಿಯಾಗಿರುವೆ'

ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಕ್ತಾಯವಾದ ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯದ ನಂತರ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ ಮಾತುಗಳಿವು.

ಕಳೆದ ಬುಧವಾರ ಬೆಳಿಗ್ಗೆ ಮಳೆ ಸುರಿಯುತ್ತಿದ್ದರೂ ಅಭಿಮಾನಿಗಳು ಕ್ರೀಡಾಂಗಣಕ್ಕೆ ಲಗ್ಗೆ ಇಟ್ಟಿದ್ದರು. ಇಡೀ ದಿನ ಪಂದ್ಯ ಆರಂಭವಾಗದಿದ್ದರೂ ಸುಮಾರು 600ಕ್ಕೂ ಹೆಚ್ಚು ಜನರು ಗ್ಯಾಲರಿಯಲ್ಲಿ ಕಾದಿದ್ದರು. ಮೈದಾನದ ಹೊರಗೂ ತಮ್ಮ ನೆಚ್ಚಿನ ಆಟಗಾರರ ಆಗಮನ, ನಿರ್ಗಮನ ನೋಡಲು ಕಾದು ನಿಂತಿದ್ದರು. ಎರಡನೇ ದಿನ ಸುಮಾರು 7 ರಿಂದ 8 ಸಾವಿರ ಜನ ಸೇರಿದ್ದರು. ಕೊನೆಯ ಮೂರು ದಿನಗಳಲ್ಲಿ ಮಾತ್ರ 15 ರಿಂದ 17 ಸಾವಿರ ಜನರು ಪಂದ್ಯ ವೀಕ್ಷಿಸಿದರು.

'ಕ್ರಿಕೆಟ್ ಅಭಿಮಾನಿಗಳ ಬೆಂಬಲದಿಂದಲೇ ಆಟ ಬೆಳೆಯುತ್ತದೆ. ಆಟಗಾರರ ಬೆಳವಣಿಗೆಗೂ ಅವರ ಪ್ರೋತ್ಸಾಹವೇ ಕಾರಣ. ಈ ನಗರದ ಆಟಗಾರರು ತಮ್ಮ ನೆಚ್ಚಿನ ತಂಡಗಳನ್ನು ಬೆಂಬಲಿಸುವ ರೀತಿ ಅನನ್ಯವಾಗಿದೆ. ಅದರಲ್ಲೂ ಟೆಸ್ಟ್ ಕ್ರಿಕೆಟ್‌ಗೆ ಇಂತಹ ಬೆಂಬಲ ಸಂತಸ ತಂದಿದೆ' ಎಂದರು.

ಐಸಿಸಿ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ನ್ಯೂಜಿಲೆಂಡ್ ತಂಡದ ಆಟಗಾರ್ತಿಯರ ಸಂಭ್ರಮ –ಎಎಫ್‌ಪಿ ಚಿತ್ರ

ದಕ್ಷಿಣ ಆಫ್ರಿಕಾ ತಂಡಕ್ಕೆ ಸತತ ಎರಡನೇ ಬಾರಿ ನಿರಾಸೆ

ನ್ಯೂಜಿಲೆಂಡ್‌ಗೆ ಚೊಚ್ಚಲ ವಿಶ್ವಕಪ್

ದುಬೈ (ಪಿಟಿಐ): ಅಮೇಲಿಯಾ ಕೆರ್ (43;38ಎ, 24ಕ್ಕೆ 3) ಅವರ ಆಲ್‌ರೌಂಡ್ ಆಟದ ಬಲದಿಂದ ನ್ಯೂಜಿಲೆಂಡ್ ಮಹಿಳಾ ತಂಡವು ಭಾನುವಾರ ಫೈನಲ್ ಹಣಾಹಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 32 ರನ್‌ಗಳಿಂದ ಮಣಿಸಿ ಚೊಚ್ಚಲ ಟಿ20 ಕ್ರಿಕೆಟ್ ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿತು.

ಸತತ ಎರಡನೇ ಬಾರಿ ಫೈನಲ್ ತಲುಪಿದ್ದ ದಕ್ಷಿಣ ಆಫ್ರಿಕಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಮೇಲಿಯಾ, ಸೂಜಿ ಬೇಟ್ಸ್ (32; 31ಎ, 4X3) ಮತ್ತು ಬ್ರೂಕ್ ಹ್ಯಾಲಿಡೇ (38,28ಎ, 4x3) ಬ್ಯಾಟಿಂಗ್ ಬಲದಿಂದ ನ್ಯೂಜಿಲೆಂಡ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 158 ರನ್ ಗಳಿಸಿತು.

ಸವಾಲಿನ ಗುರಿಯನ್ನು ಬೆನ್ನತ್ತಿದ ದಕ್ಷಿಣ ಆಫ್ರಿಕಾ ಉತ್ತಮ ಆರಂಭ ಪಡೆದಿತ್ತು. ನಾಯಕಿ ಲಾರಾ ವೊಲ್ವಾರ್ಟ್ (33;27ಎ) ಮತ್ತು ತಜ್ಮಿನ್ ಬ್ರಿಟ್ಸ್ (17;18ಎ) ಮೊದಲ ವಿಕೆಟ್‌ಗೆ 51 ರನ್ ಸೇರಿಸಿದ್ದರು. 10ನೇ ಓವರ್‌ನಲ್ಲಿ ಲಾರಾ ಔಟಾದ ಬಳಿಕ ತಂಡವು ನಾಟಕೀಯ ಕುಸಿತಕ್ಕೆ ಒಳಗಾಯಿತು.

ಕೇರ್ ಮತ್ತು ರೋಸ್ಮರಿ ಮೈರ್ (25ಕ್ಕೆ 3) ಅವರ ಮಾರಕ ದಾಳಿಗೆ ಎದುರಾಳಿ ತಂಡದ ಬ್ಯಾಟರ್‌ಗಳು ತಡಬಡಾಯಿಸಿದರು. ಹೀಗಾಗಿ ದಕ್ಷಿಣ ಆಫ್ರಿಕಾ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 126 ರನ್ ಗಳಿಸಿ ಹೋರಾಟವನ್ನು ಮುಗಿಸಿದ್ದರಿಂದ ಮೊದಲ ಬಾರಿ ವಿಶ್ವಕಪ್ ಗೆಲ್ಲುವ ಕನಸು ಕೂಡ ಭಗ್ನವಾಯಿತು.

2009 ಮತ್ತು 2010ರಲ್ಲಿ ಸತತ ಎರಡು ಬಾರಿ ಫೈನಲ್ ಪ್ರವೇಶಿಸಿದ್ದ ನ್ಯೂಜಿಲೆಂಡ್ ಇದೇ ಮೊದಲ ಬಾರಿಗೆ ಪ್ರಶಸ್ತಿ ಗೆದ್ದಿದೆ. ಈ ಸಾಧನೆ ಮಾಡಿದ ನಾಲ್ಕನೇ ತಂಡ ಎಂಬ ಹಿರಿಮೆಗೆ ಪಾತ್ರವಾಯಿತು. ಆಸ್ಟ್ರೇಲಿಯಾ ಆರು ಬಾರಿ, ಇಂಗ್ಲೆಂಡ್, ವೆಸ್ಟ್ ಇಂಡೀಸ್ ತಲಾ ಒಂದು ಸಲ ಪ್ರಶಸ್ತಿ ಗೆದ್ದಿವೆ.

ದಕ್ಷಿಣ ಆಫ್ರಿಕಾ ತಂಡವು 'ಚೋಕರ್ಸ್' ಹಣೆಪಟ್ಟಿಯನ್ನು ಕಳಚುವಲ್ಲಿ ಮತ್ತೆ ವಿಫಲವಾಯಿತು. ಕಳೆದ ಬಾರಿ ಆಸ್ಟ್ರೇಲಿಯಾ ವಿರುದ್ಧ ಸೋತಿದ್ದ ಹರಿಣ ಪಡೆ, ಈ ಬಾರಿಯೂ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಪಂದ್ಯ ಸೋಲುತ್ತಿದ್ದಂತೆ ದಕ್ಷಿಣ ಆಫ್ರಿಕಾ ಆಟಗಾರ್ತಿಯರು ಕಣ್ಣೀರು ಹಾಕಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 5ಕ್ಕೆ158 (ಸೂಜಿ ಬೇಟ್ಸ್ 32, ಅಮೇಲಿಯಾ ಕೆರ್ 43, ಬ್ರೂಕ್ ಹ್ಯಾಲಿಡೇ 38, ನೊನ್‌ಕುಲುಲೆಕೊ ಮ್ಲಾಬಾ 31ಕ್ಕೆ2). ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 9ಕ್ಕೆ 126 (ಲಾರಾ ವೊಲ್ವಾರ್ಟ್ 33, ತಜ್ಮಿನ್ ಬ್ರಿಟ್ಸ್ 17, ಅಮೇಲಿಯಾ ಕೇರ್ 24ಕ್ಕೆ 3, ರೋಸ್ಮರಿ ಮೈರ್ 25ಕ್ಕೆ 3). **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 32 ರನ್‌ಗಳ ಜಯ, ಪ್ರಶಸ್ತಿ. **ಪಂದ್ಯದ ಆಟಗಾರ್ತಿ:** ಅಮೇಲಿಯಾ ಕೆರ್

ನ್ಯೂಜಿಲೆಂಡ್‌ಗೆ ಡಬಲ್ ಧಮಾಕ...

ಈ ಭಾನುವಾರವನ್ನು ನ್ಯೂಜಿಲೆಂಡ್ ಕ್ರಿಕೆಟ್ ಪ್ರೇಮಿಗಳು ಎಂದಿಗೂ ಮರೆಯಲ್ಲ. ಆ ದೇಶದ ಪುರುಷರ ತಂಡವು ಭಾರತದಲ್ಲಿ 36 ವರ್ಷಗಳ ನಂತರ ಟೆಸ್ಟ್ ಪಂದ್ಯ ಜಯಿಸಿತು. ಅದೇ ದಿನ ಕಿವೀಸ್ ಮಹಿಳಾ ತಂಡ ಟಿ20 ವಿಶ್ವಕಪ್ ಜಯಿಸಿತು.

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ನೆಟ್ಸ್‌ನಲ್ಲಿ ಶಮಿ ಬೌಲಿಂಗ್ ಅಭ್ಯಾಸ

ಮೊಹಮ್ಮದ್ ಶಮಿ

ಬೆಂಗಳೂರು: ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದ ಮುಖ್ಯ ಪಿಚ್‌ನ ನೆಟ್ಸ್‌ನಲ್ಲಿ ಬೌಲಿಂಗ್ ಅಭ್ಯಾಸ ನಡೆಸಿದರು.

ಭಾರತ ಮತ್ತು ನ್ಯೂಜಿಲೆಂಡ್ ಟೆಸ್ಟ್ ಪಂದ್ಯದ ಪ್ರಶಸ್ತಿ ಪ್ರದಾನ ಸಮಾರಂಭ ಮುಗಿದ ನಂತರ ಅವರು ಅಭ್ಯಾಸ ಮಾಡಿದರು.

ಟೆಸ್ಟ್ ಪಂದ್ಯದಲ್ಲಿ ಬೆಂಚ್‌ನಲ್ಲಿ ಕುಳಿತಿದ್ದ ಶುಭಮನ್ ಗಿಲ್, ಆಕಾಶ್ ದೀಪ್, ಪ್ರಸಿದ್ಧ ಕೃಷ್ಣ ಮತ್ತಿತರರು ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು. ಗಾಯ ದಿಂದಾಗಿ ಗಿಲ್ ಅವರು ಈ ಪಂದ್ಯದಲ್ಲಿ ಆಡಿರಲಿಲ್ಲ. ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಮಾರ್ಗದರ್ಶನ ನೀಡಿದರು. ಗಿಲ್ ಅವರು ಅಭ್ಯಾಸ ಮಾಡಿ ನಿರ್ಗಮಿಸುವಾಗ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಿಂದ ಮುಖ್ಯ ಮೈದಾನಕ್ಕೆ ಶಮಿ ಬಂದರು.

ಗಿಲ್ ಅವರಿಗೆ ಬೌಲಿಂಗ್ ಮಾಡಲು ಆರಂಭಿಸಿದರು. ಕಪ್ಪು ಬಣ್ಣದ ಟೀಶರ್ಟ್ ಮತ್ತು ಶಾರ್ಟ್ಸ್ ಧರಿಸಿದ್ದ ಅವರ ಎಡಗಾಲಿಗೆ ಪಟ್ಟಿ ಸುತ್ತಲಾಗಿತ್ತು. ಆರಂಭದಲ್ಲಿ ಶಾರ್ಟ್ ರನ್ ಅಪ್ ಬೌಲಿಂಗ್ ಮಾಡಿದರು. ಗಿಲ್ ಅವರು ಸ್ವಲ್ಪ ಹೊತ್ತಿನ ನಂತರ ಅಭ್ಯಾಸ ಮುಗಿಸಿ ನಿರ್ಗಮಿಸಿದರು. 34 ವರ್ಷ ವಯಸ್ಸಿನ ಶಮಿ ಅರ್ಧ ಗಂಟೆಗೂ ಹೆಚ್ಚು ಹೊತ್ತು ಅಭ್ಯಾಸ ನಡೆಸಿದರು.

ಸಂಕ್ಷಿಪ್ತ ಸುದ್ದಿ

ರಣಜಿ ಟ್ರೋಫಿ: ಒಂದೂ ಎಸೆತವಿಲ್ಲದೆ ದಿನದಾಟ ರದ್ದು

ಬೆಂಗಳೂರು: ನಗರದಲ್ಲಿ ಸುರಿದ ಮಳೆಯಿಂದಾಗಿ ಆಲೂರಿನಲ್ಲಿ ನಡೆಯುತ್ತಿರುವ ಕರ್ನಾಟಕ ಮತ್ತು ಕೇರಳ ನಡುವಿನ ರಣಜಿ ಟ್ರೋಫಿಯ ಎಲೀಟ್ 'ಸಿ' ಗುಂಪಿನ ಪಂದ್ಯದ ಮೂರನೇ ದಿನದಾಟ ಒಂದೂ ಎಸೆತ ಕಾಣದೆ ರದ್ದಾಯಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣವು ಮೊದಲೆರಡು ದಿನದಂತೆ ಭಾನುವಾರವೂ ಭಿನ್ನವಾಗಿರಲಿಲ್ಲ. ರಾತ್ರಿ ಸುರಿದ ಮಳೆಯಿಂದಾಗಿ ಬೆಳಿಗ್ಗೆ ಮೈದಾನದ ವಿವಿಧ ಭಾಗಗಳು ತೇವಗೊಂಡಿತ್ತು. ನಂತರವೂ ಆಗಾಗ ಮಳೆ ಸುರಿದಿದ್ದರಿಂದ ಆಟ ಸಾಧ್ಯವಾಗಲಿಲ್ಲ. ಮೊದಲ ದಿನ ಕೇರಳ ತಂಡ 23 ಓವರುಗಳಲ್ಲಿ ಕೇರಳ ಮೊದಲ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 88 ರನ್ ಹೊಡೆದಿತ್ತು. ಎರಡನೇ ದಿನವಾದ ಶನಿವಾರ 27 ಓವರುಗಳ ಆಟ ಸಾಧ್ಯವಾಗಿತ್ತು. ಹೀಗಾಗಿ ಒಟ್ಟು 50 ಓವರ್‌ಗಳಲ್ಲಿ 3 ವಿಕೆಟ್‌ಗೆ 161 ರನ್ ಗಳಿಸಿದೆ.

ಪಂದ್ಯ ಮುಕ್ತಾಯಕ್ಕೆ ಇನ್ನು ಒಂದು ದಿನ ಮಾತ್ರ ಉಳಿದಿದೆ. ಹೀಗಾಗಿ, ಪಂದ್ಯ ಡ್ರಾನಲ್ಲಿ ಮುಕ್ತಾಯವಾಗುವುದು ಬಹುತೇಕ ಖಚಿತವಾಗಿದೆ. ಮೊದಲ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧ ಡ್ರಾ ಸಾಧಿಸಿರುವ ಕರ್ನಾಟಕ ತಂಡದ ಕ್ವಾರ್ಟರ್ ಫೈನಲ್ ಹಾದಿ ಇನ್ನಷ್ಟು ಕಠಿಣವಾಗಿದೆ.

ಹಾಕಿ: ಭಾರತಕ್ಕೆ ಮಣಿದ ಬ್ರಿಟನ್

ಜೊಹೊರ್, ಮಲೇಷ್ಯಾ (ಪಿಟಿಐ): ದಿಲ್‌ರಾಜ್ ಸಿಂಗ್ ಮತ್ತು ಶಾರದಾನಂದ ತಿವಾರಿ ಅವರ ಆಟದ ಬಲದಿಂದ ಭಾರತ ಜೂನಿಯರ್ ಪುರುಷರ ಹಾಕಿ ತಂಡ ಭಾನುವಾರ ಸುಲ್ತಾನ್ ಆಫ್ ಜೊಹೊರ್ ಕಪ್ (21 ವರ್ಷದೊಳಗಿನವರ) ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದೆ.

ಶನಿವಾರ ಆರಂಭಿಕ ಪಂದ್ಯದಲ್ಲಿ ಜಪಾನ್ ತಂಡವನ್ನು ಮಣಿಸಿ ಆತ್ಮವಿಶ್ವಾಸ ವೃದ್ಧಿಸಿಕೊಂಡ ಭಾರತದ ಆಟಗಾರರು 6–4 ಗೋಲುಗಳಿಂದ ಬ್ರಿಟನ್ ತಂಡವನ್ನು ಮಣಿಸಿದರು.

ದಿಲ್‌ರಾಜ್ (17ನೇ ಮತ್ತು 50ನೇ ನಿಮಿಷ) ಮತ್ತು ತಿವಾರಿ (20ನೇ ಮತ್ತು 50ನೇ) ತಲಾ ಎರಡು ಗೋಲು ಗಳಿಸಿದರು. ಮೊಹಮ್ಮದ್ ಕೊನೈನ್ ಡ್ಯಾಡ್ (7ನೇ) ಮತ್ತು ಮನ್‌ಪ್ರೀತ್ ಸಿಂಗ್ (26ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಬ್ರಿಟನ್ ಪರ ರೋರಿ ಪೆನ್ರೋಸ್ (2ನೇ ಮತ್ತು 15ನೇ) ಮತ್ತು ಮೈಕೆಲ್ ರಾಯ್ಡನ್ (46ನೇ ಮತ್ತು 59ನೇ) ತಲಾ ಎರಡು ಗೋಲು ದಾಖಲಿಸಿದರು.

ತನಿಶಾ ಕಶ್ಯಪ್ ಮುಡಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಟ್ರೋಫಿಯೊಂದಿಗೆ ತನಿಶಾ ಕಶ್ಯಪ್ (ಎಡ) ಮತ್ತು ಆಕಾಂಕ್ಷಾ ನಿಟ್ಟುರೆ ಪ್ರಜಾವಾಣಿ ಚಿತ್ರ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ತನಿಶಾ ಕಶ್ಯಪ್ ಅವರು ಭಾನುವಾರ ಮುಕ್ತಾಯಗೊಂಡ ಎಸ್‌ಕೆಎಂಇ ಐಟಿಎಫ್ ಓಪನ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಇಲ್ಲಿನ ಕೆಎಸ್‌ಎಲ್‌ಟಿಎ ಟೆನಿಸ್ ಅಂಗಣದಲ್ಲಿ ಭಾರತದ ಆಟಗಾರ್ತಿಯರ ವ್ಯವಹಾರವಾಗಿದ್ದ ಫೈನಲ್‌ನಲ್ಲಿ 22 ವರ್ಷ ವಯಸ್ಸಿನ ಎಂಟನೇ ಶ್ರೇಯಾಂಕದ ತನಿಶಾ 6-7 (5-7), 6-1, 6-1ರಿಂದ ಏಳನೇ ಶ್ರೇಯಾಂಕದ ಆಕಾಂಕ್ಷಾ ನಿಟ್ಟುರೆ ಅವರನ್ನು ಸೋಲಿಸಿ, ಸೀನಿಯರ್ ವಿಭಾಗದ ಪ್ರಶಸ್ತಿಯ ಬರವನ್ನು ನೀಗಿಸಿಕೊಂಡರು.

ಆರಂಭಿಕ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ ತನಿಶಾ, ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿ ಸಮಬಲ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲೂ ಚುರುಕಿನ ಆಟ ಪ್ರದರ್ಶಿಸಿದ ಅವರು ಚಾಂಪಿಯನ್ ಕಿರೀಟದೊಂದಿಗೆ ಟ್ರೋಫಿ ಮತ್ತು ₹1.98 ಲಕ್ಷ ಬಹುಮಾನ ತಮ್ಮದಾಗಿಸಿಕೊಂಡರು.

ಒಂದೇ ದಿನ ಮೂರು ಪಂದ್ಯ ಆಡಿ ದಣಿದ ಆಕಾಂಕ್ಷಾ ಅವರಿಗೆ ಡಬಲ್ಸ್‌ನಲ್ಲೂ ನಿರಾಸೆಯಾಯಿತು. ಭಾರತದ ಹುಮೇರಾ ಬಹರ್ಮಸ್ ಮತ್ತು ಪೂಜಾ ಇಂಗಳೆ ಜೋಡಿಯು ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು.

ಅಗ್ರಶ್ರೇಯಾಂಕದ ಹುಮೇರಾ– ಪೂಜಾ ಜೋಡಿಯು 3-6, 6-0, 10-6ರ ಮೂರು ಸೆಟ್‌ಗಳ ಹೋರಾಟದಲ್ಲಿ ಆಕಾಂಕ್ಷಾ ಮತ್ತು ಹಾಲಿ ರಾಷ್ಟ್ರೀಯ ಚಾಂಪಿಯನ್ ಸೋಹಾ ಸಾದಿಕ್ ಅವರನ್ನು ಸೋಲಿಸಿದರು. ಮೊದಲ ಸೆಟ್‌ನಲ್ಲಿ ಮೇಲುಗೈ ಸಾಧಿಸಿದ್ದ ಎರಡನೇ ಶ್ರೇಯಾಂಕದ ಆಕಾಂಕ್ಷಾ– ಸ್ಥಳೀಯ ಪ್ರತಿಭೆ ಸೋಹಾ ಜೋಡಿಯು ನಂತರ ಹಿನ್ನಡೆ ಅನುಭವಿಸಿತು.

ಇದಕ್ಕೂ ಮೊದಲು ಈ ಜೋಡಿ ಸೆಮಿಫೈನಲ್‌ನಲ್ಲಿ 6-7 (6-8), 6-3, 10-6ರಿಂದ ರಷ್ಯಾದ ಅರಿನಾ ಅರಿಫುಲ್ಲಿನಾ ಮತ್ತು ಮಲೇಷ್ಯಾದ ಜೋ ಲೀನ್ ಸಾ ಅವರನ್ನು ಹಿಮ್ಮೆಟ್ಟಿಸಿತ್ತು.

ಪ್ರೊ ಕಬಡ್ಡಿ: ಜೈಪುರ ಶುಭಾರಂಭ

ಹೈದರಾಬಾದ್: ಅರ್ಜುನ್ ದೇಶ್ವಾಲ್ ಅವರ ಅಮೋಘ ರೈಡಿಂಗ್ ಬಲದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಭಾನುವಾರ ಶುಭಾರಂಭ ಮಾಡಿತು.

ಲೀಗ್‌ನ ಐದನೇ ಪಂದ್ಯದಲ್ಲಿ ಜೈಪುರ ತಂಡವು 39–34ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಮೊದಲಾರ್ಧದಲ್ಲಿ 21–18ರಿಂದ ಮುನ್ನಡೆ ಗಳಿಸಿದ್ದ ಜೈಪುರ ತಂಡವು ಉತ್ತರಾರ್ಧದಲ್ಲೂ ಪ್ರಾಬಲ್ಯ ಮೆರೆಯಿತು. ಸೂಪರ್ ಟೆನ್ ಸಾಧನೆ ಮಾಡಿದ ಅರ್ಜುನ್ 15 ಪಾಯಿಂಟ್ಸ್ ಸಂಪಾದಿಸಿ ಗೆಲುವಿನ ರೂವಾರಿಯಾದರು. ವಾರಿಯರ್ಸ್ ಪರ ರೈಡರ್‌ಗಳಾದ ನಿತಿನ್ ಕುಮಾರ್ ಮತ್ತು ಮಣಿಂದರ್ ಸಿಂಗ್ ಕ್ರಮವಾಗಿ 13 ಮತ್ತು 8 ಅಂಕ ಗಳಿಸಿ ಗಮನ ಸೆಳೆದರು.

ಬುಲ್ಸ್‌ಗೆ ಸೋಲು: ದಿನದ ಮತ್ತೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವು 36–32ರಿಂದ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು. ಪ್ರದೀಪ್ ನರ್ವಾಲ್ ನಾಯಕತ್ವದ ಬುಲ್ಸ್‌ಗೆ ಇದು ಸತತ ಎರಡನೇ ಸೋಲಾಗಿದೆ.

ಎಸ್. ದೇವನಾಥ್‌ಗೆ ಎಸ್‌ಜೆಎಫ್‌ಐ ಗೌರವ

'ಕ್ರಿಕೆಟ್ ಬೆಳವಣಿಗೆಯಲ್ಲಿ ಮಾಧ್ಯಮ ಪಾತ್ರ ಮಹತ್ವದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಮತ್ತು ಕ್ರಿಕೆಟಿಗರ ಉನ್ನತಿಯಲ್ಲಿ ಮಾಧ್ಯಮಗಳ ಪಾತ್ರ ದೊಡ್ಡದು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಹೇಳಿದರು.

ಭಾನುವಾರ ಕೆಎಸ್‌ಸಿಎ ಪ್ರೆಸ್‌ಬಾಕ್ಸ್‌ನಲ್ಲಿ ನಡೆದ ಸರಳ ಸಮಾರಂಭದಲ್ಲಿ ಕ್ರೀಡಾ ಪತ್ರಕರ್ತ ಎಸ್. ದೇವನಾಥ್ ಅವರಿಗೆ ಭಾರತ ಕ್ರೀಡಾ ಪತ್ರಕರ್ತರ ಫೆಡರೇಷನ್ (ಎಸ್.ಜೆ.ಎಫ್.ಐ) ಪದಕ ಮತ್ತು ಪ್ರಶಸ್ತಿ ಪತ್ರವನ್ನು ಪ್ರದಾನ ಮಾಡಿದ ಭಟ್ ಮಾತನಾಡಿದರು. 'ನಾನು ಕರ್ನಾಟಕ ತಂಡದಲ್ಲಿ ಆಡುವಾಗ ಪತ್ರಕರ್ತರೊಂದಿಗೆ ಹೆಚ್ಚು ಒಡನಾಟ ಇತ್ತು. ಅವರೂ ನಮ್ಮೊಂದಿಗೆ ಪಂದ್ಯ ನಡೆಯುವ ಸ್ಥಳಗಳಿಗೆ ಪ್ರಯಾಣಿಸುತ್ತಿದ್ದರು. ನಮ್ಮ ಆಟದ ಬಗ್ಗೆ ವರದಿ ಮಾಡುತ್ತಿದ್ದರು. ತಪ್ಪುಗಳನ್ನು ತಿದ್ದುವ ಕಾರ್ಯವನ್ನೂ ಮಾಡುತ್ತಿದ್ದರು. ಅವರೆಲ್ಲರ ಸಲಹೆಗಳು ನಮಗೆ ಉಪಯುಕ್ತವಾಗುತ್ತಿದ್ದವು' ಎಂದು ಭಟ್ ನೆನಪಿಸಿಕೊಂಡರು.

'80 ವರ್ಷ ತುಂಬಿದ ಕ್ರೀಡಾ ಪತ್ರಕರ್ತರಿಗೆ ಜೀವಮಾನ ಸಾಧನೆಗಾಗಿ ಪದಕ ಮತ್ತು ಪ್ರಮಾಣಪತ್ರ ನೀಡಲು ಎಸ್‌ಜೆಎಫ್‌ಐ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದರಂಗವಾಗಿ ಬೇರೆ ಬೇರೆ ರಾಜ್ಯಗಳ ಪತ್ರಕರ್ತರನ್ನು ಗೌರವಿಸಲಾಗುತ್ತಿದೆ. ಈ ಗೌರವಕ್ಕಾಗಿ ಕರ್ನಾಟಕದಿಂದ ದೇವನಾಥ್ ಅವರನ್ನು ಆಯ್ಕೆ ಮಾಡಲಾಗಿದೆ. ದೇವನಾಥ್ ಅವರು ಪ್ರಜಾವಾಣಿ ಪತ್ರಿಕೆಯ ಕ್ರೀಡಾ ಸಂಪಾದಕರಾಗಿ ಹಲವು ವರ್ಷ ಕಾರ್ಯನಿರ್ವಹಿಸಿದ್ದರು' ಎಂದು ಕ್ರೀಡಾ ಪತ್ರಕರ್ತ ಆರ್. ಕೌಶಿಕ್ ಈ ಸಂದರ್ಭದಲ್ಲಿ ಹೇಳಿದರು.

ಎಸ್‌ಜೆಎಫ್‌ಐ ಪದಾಧಿಕಾರಿಗಳಾದ ಜಿ.ವಿಶ್ವನಾಥ್, ಬೆಂಗಳೂರು ಕ್ರೀಡಾ ಬರಹಗಾರರ ಸಂಘದ (ಸ್ವಾಬ್) ಅಧ್ಯಕ್ಷೆ ಮನುಜಾ ವೀರಪ್ಪ ಹಾಜರಿದ್ದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಹಿರಿಯ ಕ್ರೀಡಾ ಪತ್ರಕರ್ತ ಎಸ್. ದೇವನಾಥ್ ಅವರಿಗೆ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅವರು ಎಸ್‌ಜೆಎಫ್‌ಐ ಪದಕವನ್ನು ಪ್ರದಾನ ಮಾಡಿದರು

CONTACT YOUR NEAREST NEXA DEALER: SOUTH BANGALORE: NEXA KANAKAPURA ROAD (SURAKSHAA CAR CARE PVT LTD PH: 9449865622), NEXA ELECTRONIC CITY (SURAKSHAA CAR CARE PVT. LTD. PH: 080-25732229, 8884442229), NEXA JP NAGAR (KALYANI MOTORS PH: 9590990011), NEXA SARJAPUR ROAD (PRATHAM MOTORS PH: 9008455550), NEXA KORAMANGALA (KATARIA AUTOMOBILES PVT. LTD. PH: 9513363262), WEST BANGALORE: NEXA NAGARBHAVI (BIMAL AUTO AGENCY PH: 08030693069), NEXA RAJAJINAGAR (VARUN MOTORS PVT. LTD. PH: 8884000042), NEXA RR NAGAR (KALYANI MOTORS PH: 9590990011), EAST BANGALORE: NEXA ORR MARATHALLI (BIMAL AUTO AGENCY PH: 08030693069), NEXA BANASWADI (KALYANI MOTORS PH: 9590990011), NEXA WHITEFIELD (VARUN MOTORS PVT. LTD. PH: 9620827474), NORTH BANGALORE: NEXA NAGASANDRA (KALYANI MOTORS PH: 9590990011), NEXA YELAHANKA (MANDOVI MOTORS PVT. LTD. PH: 9886003030), NEXA HEBBAL ORR (VARUN MOTORS PVT. LTD. PH: 9513838777), CENTRAL BANGALORE: NEXA MUSEUM ROAD (PRATHAM MOTORS PH: 9880006006), NEXA PALACE (MANDOVI MOTORS PH: 9886003030), TUMKUR: NEXA SIRA ROAD (SAKETH AUTOMOBILES PH: 9900500051).

Contact us at 1800-200-[6392] 1800-102-[NEXA]
www.nexaexperience.com
NOW YOU CAN ALSO BOOK ONLINE

SMART FINANCE AN ONLINE END-TO-END CAR FINANCE SOLUTION
Scan to know more.
Multiple financiers
Digital Document Upload
Live Loan status
Complete transparency (associated fees & charges)

*Terms and conditions apply. Offer valid for select models/variants and in select states only. Accessories and features shown may not be part of standard equipment and may vary from variant to variant. Images used are for illustration purpose only. Appearance of black shade on glass is due to lighting effect. Maruti Suzuki reserves the right to withdraw the offers at any point in time without any advance notice.